27th Year of Publication. Phone: 728 ಬೆಲೆ: 12 ನ.ಪೈ.

ಪ್ರಭಾತ

26-1-1962

ಪ್ರಜಾಪ್ರಭುತ್ವ ಅಂಕ

ಸಂಪಾದಕ:
ಕುಡ್ವ ವಾಸುದೇವ ಶೆಣೈ.



ರಾಷ್ಟ್ರಪತಿ ಡಾ। ರಾಜೇಂದ್ರ ಪ್ರಸಾದರವರು.

PRABHAT—REPUBLIC NUMBER, 1962

ಜನಕೆ ಜಾಗ್ರತಿಯುದಯ
ವಿದುವೆ ತಾಮಸ ಜಡತೆ
ಗಳೆವ ವಿಜಯದ ಸಾರ್ವ
ಮೊದಲ ತೂರ್ಯಂ

ಪ್ರಭಾತ

ಬಗೆಗೆ ಬಾಹ್ಯಜ್ಞಾನ-
ವೀವಾದ್ಯ ಶಕ್ತಿಯಿದು,
ಸದಮಲಾಂತಃಕರಣ
ತರುಣ ಪ್ರಭಾತಂ

ಪ್ರಜಾಪ್ರಭುತ್ವ ಅಂಕ ○ 26-1-1962 ○ REPUBLIC NUMBER

ಜನವರಿಯ ಜೇನುಹನಿಗಳು!

★

ರಚಯಿತ:
ವಿಚಿತ್ರ,
ಏತಡ್ಕ.

★

೧. ಸತ್ಯವೆಲ್ಲಿ?

ಮುಖಂಡರೆನುವವರೆಲ್ಲರು ಹೇಳುವ ।
ಮಾತನು ಕೇಳುತ ನಿತ್ಯ ।
ಅಖಂಡ ರಾಜಕೀಯದಿ ಮುಳುಗಿ ।
ನೋಡಲು, ದೂರದಿ ಇದೆ, ಸತ್ಯ ।

○

೨. ಸರಕಾರೀ ಔಷಧ

ತಲೆ ಶೂಲೆ, ಎದೆ ನೋವು, ಹೊಟ್ಟೆಯುರಿ ।
ಎಲ್ಲದಕು ಮದ್ದೊಂದೇ ಕೆಂಪು ನೀರು ।
ರೂರಲಾಸ್ಪತ್ರೆಗಳ ಒಳಗು ಹೊರಗೂ ಇರುವ ।
ರೋಗಿಗಳಿಗಿದುವೆ ತಂಪು ಖೀರು ।

○

೩. ಎರಡೂ ಬೇಕು

ಶಾಂತಿಗಾಗಿ ಸಮರ ಬೇಕು ।
ಎನುವ ಮಂದಿಯಿಹರು ।
ಸಮರವಿರದೆ ಶಾಂತಿ ಬರದು ।
ಎನುವವರೂ ಇರುವರು ।

○

೪. ಹಳೆಯ–ಹೊಸ ಸಿದ್ಧಾಂತ

ಉಳುವವನೆ ಹೊಲದೊಡೆಯ ।
ಇದು ಸೋಸಿಯಲ್ ಸಿದ್ಧಾಂತ ।
ಬಾಳುವವನೇ ಅರಸ ।
ಇದು ಹಳೆಯ ರಾದ್ಧಾಂತ ।

○

೫. ಹೊಸ ರೂಢಿ

ಬದುಕಿರಲು ಕಡೆಗಣಿಸಿದವನನೂ ।
ಸತ್ತ ಮೇಲ್ ಹೊಗಳುವುದು ರೂಢಿ ।
ರಷ್ಯದಲೋ? ಸತ್ತ ಸ್ಟಾಲಿನನಸ್ಥಿಪಂಜರಕು ।
ಹಾಕುತಿಹರೀಗ ಛೀಗಳೆದು ಬೇಡಿ ।

○

೬. ಬುದ್ಧಿಯ ಬಲ

ರಾವಣಗೆ ತಲೆ ಹತ್ತು ।
ಕೈಗಳೋ ಇಪ್ಪತ್ತು ।
ಕಾರ್ತವೀರ್ಯಾರ್ಜುನಗೆ ।
ತಲೆಯೊಂದೇ ಕೈಮಾತ್ರ ಸಾವಿರ ।
ಆದರೀ ಕಲಿಯುಗದಿ ಎಲ್ಲರಿಗು ।
ಒಂದೇ ತಲೆ, ಎರಡು ಕೈಗಳು ।
ಇದ್ದರೇನಾಯ್ತು?
ಬುದ್ಧಿಯೋ ನೂರಾರು, ಅಲ್ಲ–ಹಲವಾರು ।

○

೭. ಬಂದಿತ್ತು ಮೂರ್ಛೆ

ಅಲ್ಲಿ—ಯು. ಎನ್. ಓ.ದಲ್ಲಿ
ಪ್ರಮುಖ ರಾಷ್ಟ್ರಗಳೆಲ್ಲ ಒಂದಾಗಿ
ಲೋಕಶಾಂತಿಯ ಕುರಿತು ನಡೆಸುವರು ಚರ್ಚೆ ।
ಇಲ್ಲಿ—ವಿಜ್ಞಾನಿಗಳು ಸೃಷ್ಟಿಸುವ
ಮಾರಕಾಸ್ತ್ರಗಳ ನೋಡಿ ನೋಡಿ
ಶಾಂತಿದೇವತೆಗದೋ ಬಂದಿತ್ತು ಮೂರ್ಛೆ ।

○

೮. ವಿಧಿಯ ಮಾಟ

ಆಫೀಸಿನಲ್ಲಿ ಮೆನೆಜರರ ಕಿಡಿನೋಟ
ಮನೆಯಲ್ಲಿ ಮಡದಿಯಾ ಮಕ್ಕಳಾ ಕಾಟ
ಹಾದಿಯಲಿ, ಬೀದಿಯಲಿ, ಸಾಲಗಾರರ ಕಾಟ
ಬಡಮಾಸ್ತರನ ಬಾಳು ಇದು, ವಿಧಿಯ ಮಾಟ!

○

೯. ಅಲ್ಲ

ಜೈಲು ಸೇರಿ ಬಂದವರೆಲ್ಲ
ದೇಶಭಕ್ತರಲ್ಲ.
ಕಾಲೇಜು ಹೊಕ್ಕು ಹೊರಟವರೆಲ್ಲ
ಬುದ್ಧಿವಂತರಲ್ಲ.

○

೧೦. ಸ್ವಾತಂತ್ರ್ಯ

ಅಕ್ಕಸಾಲಿಗ ಮಾತ್ರ ಕಿವಿ ಚುಚ್ಚಬೇಕಂತೆ.
ಅತ್ತೆ ಮಾತ್ರವೆ ಸೊಸೆಯ ಬೈಯ್ಯುತಿರಬೇಕಂತೆ
ಕತ್ತೆ ಮಾತ್ರವೆ ಗಂಟು ಮೂಟೆ ಹೊರಬೇಕಂತೆ
ಮತ್ತೆ ಉಳಿದೆಲ್ಲ ವರ್ಗಕು—ಅವರವರ
ಸ್ವಾತಂತ್ರ್ಯ ಬೇಕಂತೆ.

○

೧೧. ಸಾಹಿತಿ?

ನೀನೆಷ್ಟೊ ಬರೆದರೂ ಈಗ ಸಾಹಿತಿಯಲ್ಲ.
ಸತ್ತಾಗ ಮಾತ್ರ ಕಣ್ಣೀರು ಸುರಿಸುತ್ತ
ಸ್ಮಾರಕವ ರಚಿಸುವರಲ್ಲ!–ಸತ್ಯ ಇದು, ಸುಳ್ಳಲ್ಲ!

○



ಅದ್ವೈತಮತ ಸ್ಥಾಪಕ ಶ್ರೀ ಆದ್ಯ ಶಂಕರಾಚಾರ್ಯರು.

ಮೂವರು ಆಚಾರ್ಯರು



ದ್ವೈತಮತ ಸ್ಥಾಪಕ ಶ್ರೀ ಮಧ್ವಾಚಾರ್ಯರು.

ಶ್ರೀ ಶಂಕರಾಚಾರ್ಯ, ಶ್ರೀ ಮಧ್ವಾಚಾರ್ಯ, ಶ್ರೀ ರಾಮಾನುಜಾಚಾರ್ಯರ ದರ್ಶನಗಳ ಸಾರ

(ಲೇಖಕ: ಶ್ರೀ| ಕೆ. ವೆಂಕಟರಾಯಾಚಾರ್ಯ, ಸುರತ್ಕಲ್ಲು)

ಪ್ರತಿಯೊಬ್ಬ ಜೀವಿಯೂ ಹುಟ್ಟು, ಬೆಳೆವಿಕೆ, ಕೊನೆಗಳೆಂಬ ಚಕ್ರ ಭ್ರಮಣದಲ್ಲಿ ಸಿಕ್ಕು, ಪಾರಾಗಿ ಬರಲು ಯತ್ನಿಸುವುದು ನಮಗೆಲ್ಲಾ ತಿಳಿದ ಸಂಗತಿಯೇ ಆಗಿದೆ. ಅದಾಗ ತನಗೆ ಸುಖ ದೊರೆಯಬೇಕೆಂದು, ದುಃಖವು ತೊಲಗಲೆಂದು ಅಪೇಕ್ಷಿಸುವುದೂ ಸಹಜವಾಗಿದೆ. ಆದರೆ, ಆಗ ಕ್ಷಣಿಕ ಸುಖಕ್ಕಾಗಿ ನಿರಂತರ ದುಃಖವನ್ನು ಬಯಸುವುದಲ್ಲ ಕ್ಷಣಿಕ—ಕಿಂಚಿತ್ ಕಾಲದ ದುಃಖದಿಂದ ಸಾಗಿದರೂ, ಅಪಾರವಾದ ಸುಖವು ಒದಗುವಂತೆ ಹವಣಿಸುವುದು ಬುದ್ಧಿಮತ್ತೆಯ ಲಕ್ಷಣವಾಗಿದೆ. ಆ ಮೇರೆಗೆ ನಾವು ಸಾಗುವಾಗ ವಿಶ್ವದಲ್ಲೇ ಸುಪ್ರಸಿದ್ಧರಾದ 'ಮೂವರು ಆಚಾರ್ಯರು' ಹೇಳಿದ ವಿಚಾರಕಣಗಳು ನಮಗೆ ಆ ದಿಕ್ಪ್ರದರ್ಶನವನ್ನು ಮಾಡುತ್ತವೆಯೆಂಬುದಕ್ಕೆ ಸಂದೇಹವಿಲ್ಲ!

ನಮ್ಮ ಜೀವನದ ಪರಮೋದ್ದೇಶವೆಂದರೆ, ಈ ಮೊದಲೆಂದ ನಿತ್ಯ ಸುಖಪ್ರಾಪ್ತಿಯೆಂದು ನಿರ್ವಿವಾದವಾಗಿ ಒಪ್ಪುತ್ತೇವೆ. ಸುಖವು ದಿನವಹಿ ಹಲವಾರು ಉದ್ಯಮ—ವ್ಯವಹಾರಗಳನ್ನು ನಡೆಸುವುದರಿಂದ ಒದಗುವುದಾದರೂ, ತಾತ್ಕಾಲಿಕ ಹಾಗೂ ಖಂಡಿತವಾಗಿ (ಸಖಂಡವಾಗಿ) ಇರುವುದನ್ನು ಗಮನಿಸಬೇಕು ಆಗಲೇ ಲೌಕಿಕವಲ್ಲದ ಪರಮ—ನಿತ್ಯಸುಖವೇನೆಂದು, ಅದರ ಸಾಧನವೇನೆಂದು ತಿಳಿಯಬಯಸುವುದು. ಲೌಕಿಕ ಜೀವನದಲ್ಲಿ 'ಬೇಕು'ಗಳಿಗೆ ಮಿತಿಯಿಲ್ಲ, ಆ 'ಬೇಕು'ಗಳಿಗೆ ಬೇಕಾದ ಹಿನ್ನೆಲೆಯೊದಗಿದರೇನೇ ಪ್ರವರ್ತಿಸಿದ ಕಾರ್ಯ ಫಲಿಸುವುದು. ಅಷ್ಟರಿಂದಲೇ ಜೀವಿತದ ಪರಮೋದ್ದೇಶ ಫಲಿಸಿತೆನ್ನಬರುವುದಿಲ್ಲ. ಏಕೆಂದರೆ, 'ಆಹಾರ ನಿದ್ರಾ ಭಯ ಮೈಥುನಾನಿ ಸಾಮಾನ್ಯಮೇತತ್ ಪಶುಭಿರ್ನರಾಣಾಂ, ಧರ್ಮೋ ಹಿ ತೇಷಾಮಧಿಕೋ ವಿಶೇಷಃ, ಧರ್ಮೇಣ ಹೀನಾಃ ಪಶುಭಿಃ ಸಮಾನಾಃ' ಎಂಬ ಸೂಕ್ತಿಯಂತೆ, ಊಟ ನಿದ್ದೆ ಹೆದರಿಕೆ ಬೇಟೆಗಳು ಈ ಪ್ರಪಂಚದಲ್ಲಿ ಪಶುಗಳಿಂದ ತೊಡಗಿ ಮನುಷ್ಯರ ತನಕ ಸಾಧಾರಣವಾಗಿವೆ; ಮಾನವರಿಗೆ ಇರುವ ಹೆಚ್ಚಿನ ವಿಶೇಷತೆಯೆಂದರೆ ಧರ್ಮವೊಂದು; ಧರ್ಮದಿಂದ ಸಂಗತವಲ್ಲದಿದ್ದರೆ ಮಾನವರು ಪಶುಗಳಿಗೆ ಸಮಾನರೆಂದು ನಮ್ಮೆಲ್ಲರ ಅಂತರಂಗಕ್ಕೆ ಗೊತ್ತಿರುವ ವಿಚಾರವಾಗಿದೆ.

ನಮ್ಮ ಬಾಹ್ಯದೃಷ್ಟಿಯಲ್ಲಿ ಅದೆಂತಹ ವಾದ, ಸುಖ ಅರಸುವ ಸೋಗು ಹಾಕಿಕೊಂಡರೂ; ಆಂತರಂಗಿಕ ವಿಚಾರಕ್ಕೆಳಸಿದರೆ ಮಾನವರೆಲ್ಲಾ ಒಪ್ಪುವ ವಿಶ್ವಬಾಂಧವ್ಯ ಹಾಗೂ ವಿಶ್ವಕಲ್ಯಾಣಗಳ ವಿಚಾರವು ನಮಗೆ ಹೊಳೆಯದಿರದು. ಪರಂತು, ಆತ್ಮದ ಶುದ್ಧೀಕರಣದಿಂದಲೇ ಈ ತೆರದ ಉದಾತ್ತಭಾವಗಳು ನೆಲೆಯೂರಲು ಸಾಧ್ಯವಾಗುವುವು. ಈ ದೆಸೆಯಲ್ಲಿ ನಿಟ್ಟಿಸಿದರೆ, ಪಾಶ್ಚಾತ್ಯರಿಗಿಂತಲೂ ಭಾರತೀಯರಲ್ಲಿ ಇಂತಹ ಆತ್ಮದ ವಿಚಾರಪಾವಿತ್ರ್ಯ ಹಾಗೂ ಶಾಶ್ವತ ಸುಖಪ್ರಾಪ್ತಿಯ ಪರವಾಗಿ ಅನಾದಿ ಕಾಲದಲ್ಲೂ ಸಾಗಾಟವಾಗಿದೆ. (ಇತ್ತೀಚೆಗೆ ಪಾಶ್ಚಾತ್ಯರಲ್ಲೂ ಇಂತಹ ವಿಚಾರಣ ಮೂಡಿಬರುತ್ತಿದೆಯೆಂದು ಕೇಳುತ್ತೇವೆ). ಆ ತೆರದ ವಿಚಾರಶೀಲನೆಯಲ್ಲಿ ವೇದಗಳು, ಉಪನಿಷತ್ತುಗಳು, ಬ್ರಹ್ಮಸೂತ್ರಗಳು ಅಗ್ರಸ್ಥಾನೀಯಗಳಾಗಿವೆ. ಇವೆಲ್ಲಾ ಬಲುಬಿಗುಪಿನವಾಗಿ, ಜನಸಾಮಾನ್ಯರಿಗೆ ಸುಲಭವೇದ್ಯವಾಗಿಲ್ಲವೆಂದೇ ಇವುಗಳ ಅರ್ಥವಿವರಣೆಗೆ ಅವಶ್ಯವಾದುದು. ಶ್ರೀ ಶಂಕರಾಚಾರ್ಯ, ಶ್ರೀ ರಾಮಾನುಜಾಚಾರ್ಯ, ಶ್ರೀ ಮಧ್ವಾಚಾರ್ಯ ಎಂಬೀ ಮೂವರು ಆಚಾರ್ಯರು ಈ ದಿಸೆಯಲ್ಲಿ ತುಂಬಾ ನಮಗೆ ಉಪಕಾರ ಮಾಡಿದ್ದಾರೆ. ಕಾಲಾನುಕ್ರಮದಲ್ಲಿ ಸಾಗಿಬಂದ ಈ ಮಹನೀಯರ ವಿಚಾರಸರಣಿಯು ಅದೊಂದು ಉನ್ನತ ಮಾರ್ಗದರ್ಶಕವಾಗಿದೆ. ಆ ಬಗೆಯನ್ನು ಇಲ್ಲಿ ಕೊಂಚ ಪರಿಶೀಲಿಸಬೇಕು.

"ಚತುಸ್ಸಾಗರ ಪರ್ಯಂತಂ ಗೋಬ್ರಾಹ್ಮಣೇಭ್ಯಃ ಶುಭಂ ಭವತು" ಅಂದರೆ, ನಾಲ್ಕು ಸಾಗರಗಳ ಮಧ್ಯದಲ್ಲಿ ವಾಸಿಸುವ ಗೋವಿನಿಂದಾರಂಭಿಸಿ ಬ್ರಾಹ್ಮಣನ ವರೆಗೆ ಮಂಗಳವಾಗಲಿ, ಎಂದು ಅರ್ಥವಾಗುತ್ತದೆ...... ಈ ಸಂಕಲ್ಪವೇ ಈಹೊತ್ತು ರಾಜಕೀಯಾವರಣದಲ್ಲಿ 'ಸಾರ್ವಜನಿಕ ಹಿತ,' 'ಅಖಂಡ ಮಾನವಸಾಮ್ರಾಜ್ಯ' ಎಂಬೀ ಮುಂತಾದ ಭಾಷೆಯಲ್ಲಿ ರಾಜ್ಯಾಂಗ ವ್ಯವಸ್ಥಾಪಕವಾಗಿರುವುದು." (ದ್ವೈತವೇದಾಂತ. ಪುಟ. ೧)

ಈ ಜೀವನದಲ್ಲಿ ಅನುಭವಿಸತಕ್ಕ ಸುಖಗಳನ್ನು ಪ್ರೇಯಸ್ಸು, ಶ್ರೇಯಸ್ಸು ಎಂದೆರಡು ವಿಧವಾಗಿ ಹೇಳುತ್ತಾರೆ. ಇದಕ್ಕೇನೇ ಐಹಿಕ ಸುಖ ಹಾಗೂ ಪಾರತ್ರಿಕ ಸುಖವೆಂದು ಹೆಸರಿಸುವುದು. ಜೀವಿಯು ಈ ದೃಶ್ಯ ಪ್ರಪಂಚದಲ್ಲಿ ಕಾಲಿಡುವ ಮೊದಲೂ, ಈ ದೃಶ್ಯ ಪ್ರಪಂಚದಿಂದ ಅಡಗಿದ ಮೇಲೂ ಪಾರತ್ರಿಕ ಲೋಕದಲ್ಲಿ ಸೇರಿರುವನೆಂಬುದು ಭಾರತೀಯ ದರ್ಶನಗಳ ಅದೊಂದು ವಿಶಿಷ್ಟವಾದ ದರ್ಶನವಾಗಿದೆ. ಅಂದ ಮೇಲೆ, ಪ್ರತಿಯೊಬ್ಬನೂ ಐಹಿಕ ಸೌಖ್ಯಕ್ಕಿಂತಲೂ ಹೆಚ್ಚಿನದಾದ ಹಾಗೂ ಅಪೇಕ್ಷಣೀಯವಾದ ಪಾರತ್ರಿಕ ಸೌಖ್ಯವನ್ನು ಹೊಂದಲು ಉದ್ದೇಶವಿಟ್ಟುಕೊಂಡಿರಬೇಕೆಂದು ಅರ್ಥವಾಗುತ್ತದೆ. ಈ ಪ್ರೇಯಸ್ಸು ಅಥವಾ ಐಹಿಕ ಸುಖವು ಆಯಾ ಸಾಧನಗಳ ಬಲಾಬಲಿಕೆಯಂತೆ ಹೆಚ್ಚು ಕಡಿಮೆಯಾಗಲೂಬಹುದು. ಪರಂತು ಶ್ರೇಯಸ್ಸು ಅಥವಾ ಪಾರತ್ರಿಕ ಸುಖವು ಸಾಧಕನ ಪೂರ್ಣತೆ ಹೊಂದಿದ ಪ್ರಯತ್ನದಿಂದ ಪೂರ್ಣಾಂಗವಾಗಿಯೇ ಪ್ರತಿಯೊಬ್ಬನಿಗೂ ಲಭಿಸುತ್ತದೆ. ಈ ಶ್ರೇಯಸ್ಸನ್ನು ಸಾಧಿಸಲು ಬಹುಜನ್ಮಗಳ ನಿರಂತರ ವ್ಯವಸಾಯವಿರಬೇಕೆಂಬುದನ್ನು ನೆನಪಿಟ್ಟುಕೊಳ್ಳಬೇಕು. ಆ ಕಾರಣವಾಗಿಯೇ ದಿನವಹಿ ಎಲ್ಲಾ ಕೆಲಸಗಳನ್ನು ಮಾಡುವಾಗಲೂ, ಈ ದೃಶ್ಯಲೋಕದ ಕರ್ತೃವೂ ಸರ್ವಗುಣಪೂರ್ಣನೂ ಆದ ಆ ಅದೃಶ್ಯ ದೇವದೇವನನ್ನು ನೆನೆಯಬೇಕೆಂದು ಬಲ್ಲವರು ಹೇಳಿದ್ದಾರೆ. ಅದರಿಂದ ಜೀವಿಕೆಯ

ಕೊನೆಗೂ ಆ ದಿವ್ಯಶಕ್ತಿಯು ಸ್ಮರಣೆಯೊದಗಿ ಬರುತ್ತದೆ. ಆದರಿಂದ ಮುಂದಿನ ಜೀವನದಲ್ಲಿ ಹೆಚ್ಚು ಸೌಖ್ಯ ಸಾಧಕನಾಗಬರುತ್ತದೆ. ಅಂತೆ ಬಹು ಜನ್ಮಗಳ ಸತತ ಪ್ರಯತ್ನದಿಂದ ಪರಮಸಿದ್ಧಿಯನ್ನು ಪಡೆಯಲಾಗುತ್ತದೆ! ಈ ಪರಮಸಿದ್ಧಿಯ ವಿಚಾರಗಳನ್ನು ಪ್ರಾಚೀನ ಗ್ರಂಥಗಳಿಂದ ತಿಳಿದು, ಮನನಮಾಡಲು ಈ ಮೂವರು ಆಚಾರ್ಯರು ನಮಗೆ ಮಾರ್ಗದರ್ಶನ ಮಾಡಿದ್ದಾರೆ.

ಈ ಮೂವರು ಆಚಾರ್ಯರಲ್ಲಿ ಇತ್ತೀಚಿನವರೆಂದರೆ ಶ್ರೀ ಮಧ್ವಾಚಾರ್ಯರು. ಇವರು ದ್ವೈವೇದಾಂತ ವಿಚಾರವನ್ನು—ವೇದಾಂತದ ದ್ವೈತ ವಿಚಾರವನ್ನು—ಪ್ರತಿಪಾದಿಸಿರುವರು. ಈ ದ್ವೈವೇದಾಂತಕ್ಕಿಂತ ಮೊದಲು ಇಪ್ಪತ್ತೊಂದು ಮಂದಿ ವೇದಾಂತ ಸೂತ್ರಗಳಿಗೆ ಭಾಷ್ಯ ಬರೆದಿದ್ದರು. ಈ ವ್ಯಾಖ್ಯಾನ ಪರಂಪರೆಯಲ್ಲಿ ಶ್ರೀ ಮಧ್ವಾಚಾರ್ಯರ ಭಾಷ್ಯವು ಕಟ್ಟಕಡೆಯದು. ಇವರ ವ್ಯಾಖ್ಯಾನದ ವಿಚಾರಕ್ಕೆ ಮೊದಲು ಆ ಇಪ್ಪತ್ತೊಂದು ಕೃತಿಗಳ ಸಮಾಲೋಚನೆ ಮಾಡಬೇಕು, ಅಂದರೆ ಅದೊಂದು ಉದ್ಗ್ರಂಥವೇ ಆದೀತು. ಪ್ರಕೃತ ಶ್ರೀ ಶಂಕರ. ಶ್ರೀ ರಾಮಾನುಜ, ಎಂಬಿಬ್ಬರ ವಾದಾಂಶಗಳನ್ನು ನಿರೀಕ್ಷಿಸಿ; ಶ್ರೀ ಮಧ್ವಾಚಾರ್ಯರ ಸಿದ್ಧಾಂತದ ಪರಿಚಯದಲ್ಲಿ ಪ್ರವೇಶಿಸುವುದು ಸೂಕ್ತವಾಗಿದೆ.

"ಇತಿಹಾಸ ಪ್ರಸಿದ್ಧರಾದ ಮೂವರು ವೇದಾಂತ ಪ್ರವರ್ತಕರಲ್ಲಿ ಆದ್ಯರಾದ ಶಂಕರಾಚಾರ್ಯರು ಕೇರಳದವರು; ಅನಂತರ ಬಂದ ರಾಮಾನುಜಾಚಾರ್ಯರು ತಮಿಳು ನಾಡಿನವರು; ಕಡೆಯವರಾದ ಮಧ್ವಾಚಾರ್ಯರು ಕನ್ನಡಿಗರು ನಮ್ಮ ದೇಶದ ಧಾರ್ಮಿಕನಿಲುವಿನ ಮೇಲೂ, ಸಮಾಜ ಸಂಘಟನೆಯ ಮೇಲೂ ಈ ಮೂವರ ವ್ಯಕ್ತಿತ್ವದ ಪ್ರಭಾವ ಸ್ಪಷ್ಟವಾಗಿದೆ........ ತಾತ್ವಿಕನಿಲುವಿನಲ್ಲಿ ಇವರ ನಡುವೆ ವಿರೋಧ ಇದ್ದರೂ, ಹಿಂದೂ ಧರ್ಮದ ಪುನರುಜ್ಜೀವನದ ಕಾರ್ಯದಲ್ಲಿ ಇವರದು ಸಮಾನದೃಷ್ಟಿ. ಈ ದೃಷ್ಟಿಯ ವೈಶಿಷ್ಟ್ಯದಿಂದಲೇ ಇವರು ಅಜರಾಮರವಾದ ಯಶಸ್ಸನ್ನು ಗಳಿಸಿದ್ದಾರೆ" (ಶ್ರೀ ಮಧ್ವಾಚಾರ್ಯರು. ಪುಟ. ೭)

(೧) ಶ್ರೀ ಶಂಕರರು ಕೇರಳ ದೇಶದ ಕಾಲಟಿಯಲ್ಲಿ ಜನಿಸಿದವರು. ಶಿವಗುರುವು ಇವರ ತಂದೆ. ಶಿವಗುರುವು ಸಂತಾನವಿಲ್ಲದಾಗ ಚಿಂತಿಸುತ್ತಿರಲು, ಆತನ ಮಡದಿಯು 'ಶಿವಾಖ್ಯ ಕಲ್ಪದ್ರುಮಮಾಶ್ರಯಾವಃ' ಎಂದು ಸಂತೈಸಿದಂತೆಯೂ, ಆಮೇರೆಗೆ ಈಶಾನುಗ್ರಹದಿಂದ ಆ ದಂಪತಿಗಳಿಗೆ ಗಂಡುಕೂಸು ಹುಟ್ಟಿ ಶಂಕರನೆಂದು ಹೆಸರಾದಂತೆಯೂ ಹೇಳಲಾಗಿದೆ (ವ್ಯಾಸಾಚಲಕೃತ ಶಂಕರ ವಿಜಯ) ಆಮೇರೆಗೆ ಇವರು ಶಂಕರನ ಅವತಾರವೆಂದು ಹೇಳುವರು.

ಶಂಕರರು ಒಮ್ಮೆ ನದಿಯಲ್ಲಿ ಮೀಯುವಾಗ ಮೊಸಳೆ ಹಿಡಿದಂತೆಯೂ, ಆಗ ತಾನು ಸನ್ಯಾಸಿಯಾಗುವಂತೆ ತಾಯಿಯಿಂದ ಕಡ್ಡಾಯದ ಒಪ್ಪಿತಪಡೆದು ಮೇಲೆ ಬಂದಂತೆಯೂ ತಿಳಿಯುತ್ತದೆ. (ಅಂದರೆ, ಲೋಕನದಿಯಲ್ಲಿ ಈ ಸಂಸಾರವು ಮೊಸಳೆಯಂತಿದೆಯೆಂಬ ರೂಪಕವಿಲ್ಲಿರಬಹುದು) ಅಂತೂ ವ್ಯಾಸ-ಶುಕ-ಗೌಡಪಾದರ ಪರಂಪರೆಯ ಗೋವಿಂದ ಮುನಿಗಳಲ್ಲಿ ಶಾಸ್ತ್ರಾಭ್ಯಾಸಮಾಡಿದರು. ಆಮೇಲೆ ಬದರಿಕ್ಷೇತ್ರದನಕ ಸಂಚರಿಸಿದರು. ಭಾರತದ ನಾಲ್ಕು ಮೂಲೆಗಳಲ್ಲಿ ನಾಲ್ಕು ಬೃಹನ್ಮಠಗಳನ್ನು (ಶೃಂಗೇರಿ, ಇತ್ಯಾದಿ) ಸ್ಥಾಪಿಸಿದರು. ಇವರು ಸಾಧಾರಣ ಕ್ರಿಸ್ತಶಕ ೮ನೆಯ ಶತಕದಲ್ಲಿ ಇದ್ದರೆಂಬುದೇ ಹೆಚ್ಚು ಮಟ್ಟಿಗೆ ನಂಬಲಾಗುತ್ತದೆ. ಇವರೆಂದ ತಾತ್ವಿಕದೃಷ್ಟಿಯಲ್ಲಿ ಮಾಯಾವಾದವು ಬೆಳಸಿದೆ. ಇವರಿಗೆ ಷಣ್ಮತ ಸ್ಥಾಪನಾಚಾರ್ಯರೆಂಬ ಬಿರುದು ಇದೆ. ಇವರ ವಾದಾಂಶ ವಿಚಾರದಲ್ಲಿ ಅಂದಿನ ಸಾಮಾಜಿಕ ಪ್ರಭಾವವನ್ನು ನಾವು ಕಾಣಬೇಕಾಗಿದೆ. ಆಗ ಜೈನ ಬೌದ್ಧರೆಂಬ ಭಾರತೀಯ ವಿಚಾರಸರಣಿಗಳಲ್ಲದೆ, ಕ್ರೈಸ್ತ ಮುಂತಾದ ಪಾಶ್ಚಾತ್ಯವಾದಗಳೂ ಪ್ರಚುರವಾಗುತಿದ್ದುವು. ವೈದಿಕ ಧರ್ಮದತ್ತ ಜನರ ದೃಷ್ಟಿ ಮಂದಗಮನದಲ್ಲಿತ್ತು. ಹೀಗಾಗಿ, ಜನರಲ್ಲಿ ಪರಮಾತ್ಮನ ವಿಚಾರಾಂಶವು ಅಂಕುರಿಸಿ, ಜನರೆಲ್ಲಾ ಧಾರ್ಮಿಕ ಹಾಗೂ ಸುಸ್ಥಿತಿಯ ಜೀವನಕ್ಕೆ ಅಣಿಮಾಡುವಲ್ಲಿ ಆದ್ಯ ಶ್ರೀ ಶಂಕರಾಚಾರ್ಯರನ್ನು ಅದೆಷ್ಟು ಹೊಗಳಿದರೂ ಸಾಲದು! ಇವರ ತತ್ವಸಾರವೆಂದರೆ, 'ಆರಾಧಿತಂ ದೈವತಮಿಷ್ಟಮರ್ಥಂ ದದಾತಿ, ತಸ್ಯಾಧಿಗಮೋ ಗುರೋಸ್ಸ್ಯಾತ್, ನೋ ಚೇತ್ಕಥಂ ವೇದಿತುಮೀಶ್ವರೋಽಯಂ, ಅತೀಂದ್ರಿಯಂ ದೈವತಮಿಷ್ಟದಂ ನಃ.' ಅಂದರೆ ಆರಾಧಿಸಲ್ಪಟ್ಟ ದೇವನು ಇಷ್ಟಾರ್ಥವನ್ನು ನೀಡುವನು; ಅವನ ಪರಿಜ್ಞಾನವು ಗುರುವಿನಿಂದಲೇ ಆಗಬಲ್ಲುದು, ಹಾಗಲ್ಲದೆ ಈ ಜೀವನು ಅದನ್ನು ಹೇಗೆ ತಿಳಿಯಲು ಶಕ್ತನಾಗುವನು? ಇಂದ್ರಿಯಗಳಿಗೆ ಕಾಣದ ದೇವನು ನಮ್ಮ ಇಷ್ಟಾರ್ಥದಾತನು, ಎಂದು ಆಶಯವಾಗಿದೆ. ಇಂತಹವೇ ಅನೇಕ ಸ್ತೋತ್ರಾದಿಗಳನ್ನು ಇವರು ಬರೆದಿದ್ದಾರೆ. ಅದೊಂದೆರಡು ಪದ್ಯ ಇಲ್ಲಿ ಹೇಳದಿದ್ದರೆ ಈ ಪರಿಚಯ ಪೂರ್ಣವಾಗದು:—

> ತಜ್ಜ್ಞಾನಂ ಪ್ರಶಮಕರಂ ಯದಿಂದ್ರಿಯಾಣಾಂ ।
> ತಜ್ಜ್ಞೇಯಂ ಯದುಪನಿಷತ್ಸು ನಿಶ್ಚಿತಾರ್ಥಂ ।
> ತೇ ಧನ್ಯಾಃ ಭುವಿ ಪರಮಾರ್ಥನಿಶ್ಚಿತೇಹಾಃ ।
> ಶೇಷಾಸ್ತು ಭ್ರಮನಿಲಯೇ ಪರಿಭ್ರಮಂತಿ ॥ (ಧನ್ಯಾಷ್ಟಕ)

> **ಮೂಢ ಜಹೀಹಿ ಧನಾಗಮ ತೃಷ್ಣಾಂ**
> ಕುರು ಸದ್ಬುದ್ಧಿಂ ಮನಸಿ ವಿತೃಷ್ಣಾಂ
> ಯಲ್ಲಭಸೇ ನಿಜಕರ್ಮೋಪಾತ್ತಂ ।
> ವಿತ್ತಂ, ತೇನ ವಿನೋದಯ ಚಿತ್ತಂ (ಪಂಜರಿಕಾ)
> ದಿನಮಪಿ ರಜನೀ, ಸಾಯಂ ಪ್ರಾತಃ ।
> ಶಿಶಿರವಸಂತೌ, ಪುನರಾಯಾತಃ ।
> ಕಾಲಃ ಕ್ರೀಡತಿ, ಗಚ್ಛತ್ಯಾಯುಃ ।
> ತದಪಿ ನಮುಂಚತ್ಯಾಶಾವಾಯುಃ ॥
> ಭಜಗೋವಿಂದಂ, ಭಜಗೋವಿಂದಂ ।
> ಭಜಗೋವಿಂದಂ, ಮೂಢಮತೇ ।
> ಪ್ರಾಪ್ತೇ ಸನ್ನಿಹಿತೇ ಮರಣೇ ನಹಿ ।
> ನಹಿ ರಕ್ಷತಿ ಡುಕೃಞ್ ಕರಣೇ ॥ ಪಲ್ಲವಿ ॥ (ಪಂಜರಿಕಾ)
> ಧ್ರುವಪದಂ

ಇಲ್ಲಿ ಕೊನೆಯದಾಗಿ ಹೇಳುವುದಾದರೆ, "ಎರಡಾಗಿರುವುದು ಒಂದಾಗುತ್ತದೆ ಎಂದು ಒಂದು ಸಿದ್ಧಾಂತ; ಒಂದಾಗಿಯೇ ಇರುವುದು ಎರಡಾಗಿ ಕಾಣುತ್ತದೆಯೆಂದು ಮತ್ತೊಂದು ಸಿದ್ಧಾಂತ; ಇದಕ್ಕೆ ಪ್ರತಿಯಾಗಿ ಎರಡಾಗಿಯೇ ಇರುವುದು, ಎರಡಾಗಿಯೇ ಮೋಕ್ಷದಲ್ಲಿ ನಿಂತು ಬಿಡುವುದೆಂದು ಶ್ರೀ ರಾಮಾನುಜಾಚಾರ್ಯರ ಮತ್ತು ಶ್ರೀ ಆನಂದ ತೀರ್ಥರವರ ಸಂಪ್ರದಾಯಗಳು. ಇವುಗಳ ವಿವರಣೆ ಮುಂದಿರುವುದು."

(ಹಿಂದೂದರ್ಶನಸಾರ. ಪುಟ. 229)

(೨) ಶ್ರೀ ಶಂಕರಾಚಾರ್ಯರು ನಿರ್ಯಾಣರಾದ ಮೇಲೆ—ಸಾಧಾರಣ ಎರಡು ಶತಕದ ತರುವಾಯ—ತಮಿಳುನಾಡಿನ ಪೆರಂಬೂರಲ್ಲಿ ಕೇಶವಾರ್ಯರಿಗೆ ಲಕ್ಷ್ಮಣ ಹಾಗೂ ರಾಮಾನುಜಾಚಾರ್ಯರು ಜನಿಸಿದರು. ಬಾಲ್ಯದಲ್ಲಿ ತಂದೆ ತೀರಲು, ಕಾಂಚಿಯಲ್ಲಿ ವಿದ್ಯಾಭ್ಯಾಸವನ್ನು ಪೂರೈಸಿದರು. ಆ ಮೇಲೆ ಶ್ರೀರಂಗದ ದೇವಳದ ಪಾರುಪತ್ಯವನ್ನು ನಿರ್ವಹಿಸಿ, ಅಲ್ಲಿ ತುಂಬಾ ಸುಧಾರಣೆ—ಅನುಕೂಲಗಳನ್ನು ಕಲ್ಪಿಸಿದರು. ಅಲ್ಲಿದ್ದಾಗಲೇ ಇವರು ಗ್ರಂಥರಚನೆಗೆ ಕೈಯಿಕ್ಕಿದರು. ಸಾವಿರಾರು ವರ್ಷಗಳ ಕಾಲದಿಂದಲೂ ತಮಿಳಿನಲ್ಲಿ ಸಂಸ್ಕೃತ— ದ್ರಾವಿಡಮಯ ಗ್ರಂಥಗಳಿಂದ ಪ್ರಚುರವಾದ ಸಂಪ್ರದಾಯವನ್ನೇ ಇವರು ಪರಿಷ್ಕರಿಸಿ ಪ್ರಚುರಿಸಿದರೆನ್ನಲಾಗಿದೆ. (ಮುಕುಂದ ಮಾಲಾಸ್ತೋತ್ರ ಮೊದಲಾದ ಸಂಸ್ಕೃತ ಕೃತಿಗಳೂ, ಆಳ್ವಾರ್ ಮೊದಲಾದವರ ತಮಿಳುಭಾಷಾ ಗ್ರಂಥಗಳೂ ಇಲ್ಲಿ ಉದಾಹರಣೀಯಗಳಾಗಿವೆ.) ಇವರು ಮೂವತ್ತೆರಡನೆಯ ವಯಸ್ಸಿನಲ್ಲಿ ಸಂಸಾರ ತೊರೆದು ಸನ್ಯಾಸಿಯಾಗಿ ರಾಮಾನುಜರೆಂದು ಪ್ರಸಿದ್ಧರಾದರು. ಕನ್ನಡ ರಾಜನಾದ ಹೊಯ್ಸಳ ವಿಷ್ಣುವರ್ಧನನು ಇವರ ಶಿಷ್ಯನಾದನು. ಇವರ ಅಪ್ಪಣೆಯಂತೆ ಕಟ್ಟಿಸಿದ ದೇವಳಗಳಲ್ಲಿ ಬೇಲೂರು ಚೆನ್ನಕೇಶವಾಲಯವು ಸುಪ್ರಸಿದ್ಧವು. ಈ ಗುರುವರೇಣ್ಯರು ಹೀಗೆ ಗ್ರಂಥರಚನೆಯೊಂದಿಗೆ ಅನೇಕ ದೇವಾಲಯಗಳ ರಚನೆಗೂ ಕಾರಣರಾಗಿ, ಜನತೆಗೆ ದೈವಭಕ್ತಿಯ ವಿಚಾರ ತಿಳಿಸಿದರು. ಇವರು ಕೊನೆಗೆ ಶ್ರೀರಂಗಕ್ಕೆ ಹೋಗಿ ಸಮಾಧಿಸ್ಥರಾದರು. ಇವರು ಶೇಷಾವತಾರರೆನ್ನುವ ಪ್ರತೀತಿಯಿದೆ. ಇವರ **ಉಪದೇಶ ಸಾರವೆಂದರೆ,** 'ಆತ್ಮವಸ್ತುಗಳಿಗೂ ಪರಮಾತ್ಮನಿಗೂ ಕೆಲವು ವಿಷಯಗಳು ವಿನಾ ಉಳಿದ ವಿಷಯಗಳಲ್ಲೆಲ್ಲಾ ಅತ್ಯಂತ ಸಾಮ್ಯವಿರುವುದು. ಇದು ಸಾಮ್ಯದರ್ಶನದ ಪರಾಕಾಷ್ಠೆ—ಈ ಅಭಿಪ್ರಾಯದಿಂದ ಪ್ರತಿ ಜೀವಾತ್ಮನೂ ಪರಮಾತ್ಮ ಸಾಮ್ಯವೆಂಬ ಪರಮಪುರುಷಾರ್ಥವನ್ನು ಹೊಂದಬಹುದು. ಇಂತಹ ಪರಮಪುರುಷಾರ್ಥ ಪ್ರಾಪ್ತಿಗೆ ಪರಮಾತ್ಮನ ಪರಮಾನುಗ್ರಹವೇ ಮುಖ್ಯ ಕಾರಣವಾದುದರಿಂದ, ಅದಕ್ಕೆ ಅನೇಕ ವಿಧವಾದ ಸಾಧನಗಳು ನಿರೂಪಿಸಲ್ಪಟ್ಟಿರುವುವು." (ಹಿಂದೂ ದರ್ಶನಸಾರ ಪುಟ 231).

"ವಿಶಿಷ್ಟಾದ್ವೈತವೆಂದರೆ ಎಲ್ಲವೂ ಒಟ್ಟಾಗಿ ಸೇರಿ ಒಂದಾಗಿರುವುದೆಂದು ಅರ್ಥ. ವಿಶುದ್ಧಾದ್ವೈತವೆಂದರೆ ಯಾವ ವಸ್ತುವೂ ಇಲ್ಲದೆ ಬ್ರಹ್ಮನೊಬ್ಬನೇ ಇರುವನೆಂದರ್ಥ" (ಅದೇ ಪು.235). ಪ್ರತಿ ಜೀವಾತ್ಮನೂ ಮೋಕ್ಷವನ್ನು ಹೊಂದಬಹುದು. ಅದಕ್ಕೆ ಕಾರಣ ತತ್ವವಿಚಾರವೂ ಆಗಬಹುದು, ಭಕ್ತಿವಿಚಾರವೂ ಆಗಬಹುದು. ತತ್ವವಿಚಾರಕ್ಕಿಂತ ಭಕ್ತಿ ವಿಷಯಕವೇ ಸಾಧಾರಣ ಜನತೆಗೆ ಸುಲಭಸಾಧ್ಯವಾದುದರಿಂದ ಅದನ್ನು ಕೊಂಚ ಎತ್ತಿಕೊಳ್ಳಲಾಗಿದೆ.

"ಈ ಭಕ್ತಿ ನಾಮಸಂಕೀರ್ತನ, ಮಂತ್ರ, ಜಪರೂಪದಿಂದ ವಾಚಿಕವಾಗಿಯೂ; ಅರ್ಚನ, ಪ್ರಣಾಮ, ಪ್ರದಕ್ಷಿಣರೂಪದಿಂದ ಕಾಯಿಕವಾಗಿಯೂ; ಧ್ಯಾನ ಧಾರಣ ಸಮಾಧಿಗಳ ರೂಪದಿಂದ ಮಾನಸಿಕವಾಗಿಯೂ ಪರಸ್ಪರ ಆನುಕೂಲ್ಯದಿಂದಿರುವುದು. ಇದೇ ವಿಶದತಮ ಪ್ರತ್ಯಕ್ಷ ಸಮಾನಾಕಾರವಾದ ಸ್ಮೃತಿಧಾರೆ. ಇದೇ ಶಾಸ್ತ್ರಗಳಲ್ಲಿ ಮೋಕ್ಷಕ್ಕೆ ಸಾಧನವಾಗಿ ಉಪದೇಶಿಸಲ್ಪಟ್ಟ ಪರಭಕ್ತಿ. ಇದಕ್ಕೆ ಹೇತುವಾಗಿ ತಾತ್ವಿಕ ಸಹವಾಸದಿಂದಲೂ ಶಾಸ್ತ್ರಾಭ್ಯಾಸದಿಂದಲೂ ಉಂಟಾದ ಪರಿಪೂರ್ಣ ಪರಮಾತ್ಮ ವಿಷಯ ಪ್ರೀತ್ಯತಿಶಯವು ಭಕ್ತಿ ಎನ್ನಲ್ಪಡುವುದು; ಇದೇ

ಭಕ್ತಿ-ಪರಭಕ್ತಿಗಳಿಗೆ ಇರುವ ವ್ಯತ್ಯಾಸ"ವೆನ್ನಲಾಗಿದೆ. ಅಂತೆ, ಪರ ಬ್ರಹ್ಮನ ಸಾಕ್ಷಾತ್ಕಾರವೇ ಪರಜ್ಞಾನವೆನ್ನಲಾಗಿದೆ. ಈ ಭಕ್ತಿಯೋಗಕ್ಕೆ ಯೋಗ್ಯತೆ ಉಂಟಾಗಬೇಕಾದರೆ ಜ್ಞಾನಯೋಗ—ಕರ್ಮಯೋಗಗಳೇ ಮಾರ್ಗವೆನ್ನಲಾಗಿದೆ. ಪ್ರಪತ್ತಿಯೆಂದರೆ ಜೀವನು ಪರಮಾತ್ಮನಲ್ಲಿ ಇರಿಸಿದ ಶೇಷತ್ವಾನುಸಂಧಾನವೆಂದರ್ಥ.

ಧರ್ಮವ್ಯಾಧ, ವಿದುರ ಮೊದಲಾದವರು ಜನ್ಮಾಂತರದಲ್ಲಿ (ಪೂರ್ವದಲ್ಲಿ) ಬ್ರಹ್ಮವಿದ್ಯೆಯನ್ನಾರಂಭಿಸಿ, ಪ್ರಾರಬ್ಧವಿಶೇಷದಿಂದ ಈ ಶರೀರದಲ್ಲೇ ಸಿದ್ಧಿಯನ್ನು ಹೊಂದಿದರು. ಈ ತೆರದ ವಿಚಾರದಲ್ಲಿ ಔದಾರ್ಯಾತಿಶಯವು ತೋರುವುದು. ಆ ಮೇರೆಗೆ ದೇವಾಲಯದಲ್ಲಿ ಎಲ್ಲಾ ಪಂಗಡದ ಮಂದಿಗೂ ಕ್ಲಪ್ತತೆಯಿಂದ ಸೇರಿಕೊಳ್ಳಲು ಇವರಿಂದ ಅವಕಾಶವಾದುದು. ದೇವನು ಭಕ್ತಿಯಿಂದಾಗಲೀ ಪ್ರಪತ್ತಿಯಿಂದಾಗಲೀ ಪ್ರಸನ್ನನಾಗುವನೆಂದು ತಾನೇ ಇದರಲ್ಲಿ ವಿಶೇಷಾಂಶ.

"ಶಂಖಚಕ್ರಗದಾಪಾಣೇ ದ್ವಾರಕಾನಿಲಯಾಚ್ಯುತ ।
ಗೋವಿಂದ ಪುಂಡರೀಕಾಕ್ಷ ರಕ್ಷ ಮಾಂ ಶರಣಾಗತಂ ॥"

ಶಂಖ ಚಕ್ರ ಗದಾಧಾರಿಯಾದ, ದ್ವಾರಕಾನಿಲಯನಾದ, ಚ್ಯುತರಹಿತನಾದ, ಸುಖಪ್ರಾಪಕನಾದ ಹೇ ಕಮಲಾಂಬಕನೇ! ಶರಣಾಗತನಾದ ನನ್ನನ್ನು ಕಾಪಾಡು—ಇದೇ ಅನನ್ಯಸೇವೆಯ ಫಲವೆಂದ ಮೋಕ್ಷಕ್ಕೆ ಕಾರಣವಾಗಿದೆ. ಸಾಮಾಜಿಕರಲ್ಲಿ ಈ ತೆರದ ದೈವಭಕ್ತಿವಿಶೇಷದ ಅಂಕುರಾರ್ಪಣೆ ಮಾಡಿದವರು ಶ್ರೀ ರಾಮಾನುಜಾಚಾರ್ಯರೆಂದರೆ ಅತಿಶಯೋಕ್ತಿಯಲ್ಲ. ಇವರು ಭಾರತಾದ್ಯಂತ ಸಂಚಾರಮಾಡಿದರೂ, ದ್ರಾವಿಡ ದೇಶದಲ್ಲಿಯೇ ಇವರ ಮತಪ್ರಚಾರ ಹೆಚ್ಚು ನೆಲಸಿರುವುದೆಂದರೆ, ಏತತ್ಪೂರ್ವದ ದ್ರಾವಿಡ ಗ್ರಂಥಗಳ ಪ್ರಾಬಲ್ಯ ಪ್ರಮಾಣವೇ ಕಾರಣವಿರಬಹುದಾಗಿದೆ.

(೩) ಈ ವಿಶಿಷ್ಟಾದ್ವೈತ ಮತವು ದ್ವೈತ—ಅದ್ವೈತಗಳ ಮಧ್ಯವರ್ತಿಯಾಗಿದೆ. ಇದೀಗ ದ್ವೈತ ವಿಚಾರಕಣಗಳನ್ನು ಕುರಿತು ತುಸ ಪರಾಂಬರಿಸುವುದು ವಿಹಿತವಾಗಿದೆ. ದ್ವೈತಮತದ ಪ್ರಸಾರವು ಅನಾದಿ ಕಾಲದಿಂದಲೂ ಇತ್ತೆನ್ನಬಹುದು. ಅದ್ವೈತ, ವಿಶಿಷ್ಟಾದ್ವೈತವೆಂಬ ಹೆಸರೇ ಅದನ್ನು ಸೂಚಿಸುತ್ತದೆ. ಪರಂತು, ಈ ವಿಚಾರಸರಣಿಯಲ್ಲಿ ರಚಿತವಾದ ಪ್ರತ್ಯೇಕ ಕೃತಿಗಳಿದ್ದಿಲ್ಲ. ಹಾಗಾಗಿ, ಹದಿಮೂರನೆಯ ಶತಕವು ಈ ಪ್ರಸ್ಥಾನದಲ್ಲಿ ಸುಪ್ರಸಿದ್ಧವಾದುದು. ಆಗಲೂ ಉಡುಪಿಯು ತೌಳವ ಸಂಸ್ಕೃತಿಯ ನೆಲೆವೀಡಾಗಿತ್ತು. ಅಲ್ಲಿ ಅದಾಗಲೇ ಜೈನಕೇಂದ್ರಗಳು ಶೈವ ಮಂದಿರಗಳಾಗಿ ಪರಿವರ್ತಿತವಾಗಿದ್ದುವು. ಹಾಗೂ ವಿಜಯನಗರದ ಅರಸರು ಮೆಚ್ಚಿಕೊಂಡಿದ್ದ ಭಾಗವತ ಸಂಪ್ರದಾಯವು ಅಲ್ಲಿತ್ತು. ಇಂತಹ ವಾತಾವರಣದಲ್ಲಿ ಸಜ್ಜನರ ಮನೋವೇದಿಕೆಯು ತಲ್ಲಣಗೊಂಡಿತ್ತು. ಈ ಸಂದರ್ಭದಲ್ಲಿ ಶ್ರೀ ಮಧ್ವಾಚಾರ್ಯರು ಅವತರಿಸಿದರು. ಇವರು ವಾಯುವಿನ ಅವತಾರವೆಂದು ಹೇಳುವರು. ಪಾಜಕಕ್ಷೇತ್ರದ 'ನಡ್ಡಂತಿಲ್ಲಾಯ'ರಿಗೆ ದೈವಭಕ್ತಿ ನಿಚ್ಚಳವಾಗಿದ್ದಿತು. ಆದರಿಂದ ದೈವದೊಲುಮೆ ಪಡೆದ ಈ ಮಧ್ಯಗೇಹ ಭಟ್ಟರ ಹೆಂಡತಿಯು (ವೇದವತಿ) ಒಂದು ಗಂಡುಕೂಸನ್ನು ಹೆತ್ತಳು. ಅದಕ್ಕೆ ವಾಸುದೇವನೆಂಬ ಹೆಸರಿತ್ತು. ವಾಸುದೇವನು ಎಳೆಯದಲ್ಲೆ ಬಲು ಚುರುಕಾಗಿದ್ದನು. ವಿದ್ಯಾಗುರುಗಳಾದ 'ತೋಟಂತಿಲ್ಲಾಯ'ರಿಂದ ವಿದ್ಯಾಭ್ಯಾಸಹೊಂದಿದನು. ಅದಾಗ ಉಡುಪಿಯಲ್ಲಿ ಹಾಗೂ ಸುತ್ತಣ ಜನತೆಯಲ್ಲಿ ಸುಪ್ರಭಾವವನ್ನು ಬೀರುತ್ತಿದ್ದ ಅಚ್ಯುತಪ್ರೇಕ್ಷ ಯತಿಗಳಲ್ಲಿ ವಾಸುದೇವನು ಆಶ್ರಯಹೊಂದಿ, ತಾನೂ ಸನ್ಯಾಸಿಯಾಗುವ ಹಂಬಲದಲ್ಲಿದ್ದನು. ಇದನ್ನರಿತ ಇವನ ತಂದೆ ಅಡ್ಡವಿಸಲು, 'ಇನ್ನೊಬ್ಬ ಮಗನು ತಂದೆಗೆ ಜನಿಸುವ' ತನಕ ತಡೆದುಕೊಂಡು, ಆ ಮೇಲೆ ಇವರು ಸನ್ಯಾಸಿಗಳಾದರು. ಇವರು (ಆನಂದತೀರ್ಥ) ಮಧ್ವಾಚಾರ್ಯರೆಂದು ಹೆಸರುಗೊಂಡರು.

ಇವರು ತೆಂಕಣ ನಾಡಿನಲ್ಲಿ ಮೊತ್ತಮೊದಲು ಸಂಚರಿಸಿ ಬಂದು, ಗೀತೆಯ ಭಾಷ್ಯವನ್ನು ರಚಿಸಿದರು. ಕೆಲವು ವರ್ಷಗಳ ಮೇಲೆ ಉತ್ತರ ಭಾರತ ಯಾತ್ರೆಗೆ ಹೊರಟರು. ಬದರಿಯಲ್ಲಿ ವೇದವ್ಯಾಸರ ದರ್ಶನ ಪಡೆದು, ಬ್ರಹ್ಮಸೂತ್ರ ಮೊದಲಾದವುಗಳಿಗೆ ವ್ಯಾಖ್ಯಾನಮಾಡಲು ತೊಡಗಿದರು. ಇವರು ರಚಿಸಿದ ಗ್ರಂಥಗಳು ಮೂವತ್ತೇಳು, ಇವಕ್ಕೆ **ಸರ್ವಮೂಲ**ವೆಂದು ಹೆಸರಿದೆ. ಇವರ ಸಂಚಾರಕಾಲದಲ್ಲಿ ಕೆಲವು ಮಂದಿ ಶಿಷ್ಯರಾಗಿ ಸನ್ಯಾಸಿಗಳಾದರು; ಘಟ್ಟದ ಕೆಳಗೆ ಪ್ರಸಿದ್ಧವಾದ ಅಷ್ಟಮಠಗಳು ಹಾಗೂ ಬೇರೆ ಕೆಲವು ಶಾಖಾಮಠಗಳಲ್ಲದೆ, ಘಟ್ಟದ ಮೇಲೆ ಪ್ರಸಿದ್ಧವಾದ ಉತ್ತರಾದಿ ಮಠವು ಇವರಿಂದಲೇ ಪ್ರವರ್ತಿತರಾದುವು. (ಉತ್ತರಾದಿ ಮಠದ ಕವಲುಗಳೇ ವ್ಯಾಸರಾಯ ಮಠ, ರಾಘವೇಂದ್ರ ಮಠಗಳೆಂದು ತಿಳಿಯಬರುತ್ತಿವೆ). ಶಾಸ್ತ್ರೋಕ್ತರೀತಿಯ ತಪ್ತಮುದ್ರಾಧಾರಣೆ ಹಾಗೂ ಗೋಪೀಚಂದನ ನಾಮಗಳಲ್ಲದೆ, ಮಂತ್ರೋಪದೇಶದ ಮೂಲಕವೂ ಇವರು ಶಿಷ್ಯವರ್ಗವನ್ನು ಹೆಚ್ಚಿಸಿಕೊಂಡರು. ಹರಿಭಕ್ತಿಯ ಪ್ರಾಧಾನ್ಯವನ್ನು ಸಾರುತ್ತಾ, ಪಂಚಭೇದಮಯ ತತ್ವವನ್ನು ವಿವರಿಸಿ, 'ಅಂತೇ ಸಿದ್ಧಸ್ತು ಸಿದ್ಧಾಂತಃ' ಎಂಬ ಪ್ರಸಿದ್ಧಿಗೆ ಬಂದುದು, ಈ ದ್ವೈತಮತವು! ಈ ಮತವಿಚಾರವನ್ನು ಕನ್ನಡಭಾಷೆಯಲ್ಲಿ ಪ್ರಚುರಿಸಲು ಇವರ ಸಾಕ್ಷಾತ್ ಶಿಷ್ಯರಾದ ನರಹರಿತೀರ್ಥರೇ ಮೊದಲಿಗರಾದರು. ಆ ಮೇಲೆ ಶ್ರೀಪಾದರಾಯರು, ಶ್ರೀ ವ್ಯಾಸರಾಯರು, ಶ್ರೀ ವಾದಿರಾಜರು, ಪುರಂದರದಾಸರು, ಕನಕದಾಸರು, ವಿಜಯದಾಸರು, ಜಗನ್ನಾಥದಾಸರೇ ಮೊದಲಾದವರು ಕನ್ನಡದಲ್ಲಿ ಹಲವು ಗೀತೆಗಳಲ್ಲಿ—ಮಧ್ವಸಿದ್ಧಾಂತವನ್ನು ಸಾರಿದರು.

ಶ್ರೀಹರಿಯೇ ಸರ್ವೋತ್ತಮನು, ಜಗತ್ತು ಸತ್ಯವಾದುದು, ಜೀವರೆಲ್ಲರೂ ಹರಿಯ ಕಿಂಕರರು, ಇವರಲ್ಲಿ ತಾರತಮ್ಯವಿದೆ, ನಿಜಸುಖಾನುಭೂತಿಯೇ ಮುಕ್ತಿ, ಇದಕ್ಕೆ ಭಕ್ತಿಯೇ ಸಾಧನ, ವೇದ ಮುಂತಾದುವು ನಿಜ ಪ್ರಮಾಣಗಳು, ಶ್ರೀಹರಿಯೇ ವೇದಾದಿಗಳಿಂದ ವೇದ್ಯನೆಂದು ಇವರ ವಾದದ ಸಾರವಾಗಿದೆ.

"ಮುಕ್ತಿಗೆ ಜ್ಞಾನ ಅಗತ್ಯವೆಂಬ ಶಾಂಕರಮತವನ್ನು ಆಚಾರ್ಯರು ನಿರಾಕರಿಸಲಿಲ್ಲ; ವಿಷ್ಣು ಅಜ್ಞಾನಿಗಳಿಗೆ ಜ್ಞಾನವನ್ನು ಕೊಟ್ಟು, ಜ್ಞಾನಿಗಳಿಗೆ ಮೋಕ್ಷವನ್ನು ಕೊಡುವನೆಂದು ಆಚಾರ್ಯರ ಅಭಿಪ್ರಾಯ. ಅದರೆ ಜ್ಞಾನದಲ್ಲೂ ಭಕ್ತಿಯ ಆವೇಶ ಆವಶ್ಯಕವೆಂದು ಅವರ ವಾದ. ಈಶ್ವರೇಚ್ಛೆಯಿಂದಲೇ ಜೀವರ ಬಂಧ ಉಳಿದಿರುವ ನಿಮಿತ್ತ ಈಶ್ವರಾನುಗ್ರಹವಿಲ್ಲದೆ ಮುಕ್ತಿ ಸಾಧ್ಯವಿಲ್ಲ. ಈ ಅನುಗ್ರಹಪ್ರಾಪ್ತಿಗಾಗಿ ಮಾಡುವ ಉಪಾಸನಾರೂಪವಾದ ಭಕ್ತಿಸಾಧನ ಮಾತ್ರವಲ್ಲ, ಅದು ಸಿದ್ಧಿಯೇ. ಆಚಾರ್ಯರು 'ನ್ಯಾಯ ವಿವರಣ'ದಲ್ಲಿ 'ಭಕ್ತಿಯೆನ್ನುವುದು ಮುಕ್ತರಿಗೆ ಸಾಧನವಲ್ಲ, ಸುಖರೂಪ' ಎಂದು ಹೇಳಿದ್ದಾರೆ" (ಶ್ರೀಮಧ್ವಾಚಾರ್ಯರು-ಕಾವ್ಯಾಲಯ, ಮೈಸೂರು).

ಈ ಮತದಲ್ಲಿ 'ಪಂಚಭೇದ'ಗಳು ಹೇಳಲಾಗಿವೆ; ಈ ಬಗ್ಗೆ ಒಂದು ಮಾತು ಹೇಳದಿದ್ದರೆ ಇದರ ಆವಶ್ಯಕತೆಯೇನೆಂದು ಅರಿವಾಗದು: "ಜೀವೇಶ್ವರ ಭೇದ, ಪರಸ್ಪರ ಜೀವಭೇದ, ಜಡೇಶ್ವರ ಭೇದ, ಜಡಜೀವ ಭೇದ, ಪರಸ್ಪರ ಜಡಭೇದ ಎಂದು ಪ್ರಪಂಚವು ಪಂಚಪ್ರಕಾರವಾದ ಭೇದರೂಪವಾಗಿರುವುದು. ಹೀಗೆ ಭೇದನಿರೂಪಣಕ್ಕೆ ಪ್ರಯೋಜನವೇನೆಂದರೆ, ಇಲ್ಲಿ ಜೀವೇಶ್ವರಜ್ಞಾನವಿಲ್ಲದೆ ತಾನೇ ಈಶ್ವರನೆಂಬ ಜ್ಞಾನ ಬಂದರೆ, ಮಹಾರಾಜ ಭೃತ್ಯನು ತಾನೇ ಮಹಾರಾಜನೆಂದು ತಿಳಿದುಕೊಂಡು ರಾಜನ ವೇಷವನ್ನು ಧರಿಸಿ ವ್ಯಾಪಾರಗಳನ್ನು ಮಾಡತೊಡಗಿದರೆ, ಅವನಿಗೆ ಆಗತಕ್ಕ ಗತಿಯೇ ಇವನಿಗೂ ಆಗುವುದು. ತಾನು ದಾಸನೆಂದು ರಾಜಭೃತ್ಯನು ತಿಳಿದು ಸ್ವಾಮಿಭಕ್ತನಾಗಿ ರಾಜಸೇವಾಸಕ್ತನಾಗಿದ್ದರೆ, ರಾಜಾನುಗ್ರಹಕ್ಕೆ ಪಾತ್ರನಾಗಿ ಸಕಲಭೋಗವನ್ನೂ ಅನುಭವಿಸುವನು. ಹೀಗೆ ಪರಮಾತ್ಮಭೃತ್ಯನೆಂದು ಭಾವಿಸಿ ಅವನ ಆರಾಧನೆಯಲ್ಲಿ ಸಕಲಸಂಪತ್ತನ್ನು ಅನುಭವಿಸುವುದಕ್ಕೆ ಈ ಭೇದ ಜ್ಞಾನವು ಮೂಲಕಾರಣ." (ಹಿಂದೂ ದರ್ಶನ ಸಾರ, ಪುಟ 271).

ಇಷ್ಟುಮಾತ್ರವಲ್ಲ, "ಮುಖ್ಯವಾಗಿ ಈ ಸಿದ್ಧಾಂತದಲ್ಲಿರುವ ಅಂಶವು ತಾರತಮ್ಯವು. ಅಂದರೆ ಉಚ್ಚನೀಚಭಾವವು. ಇದು ಜೀವಾತ್ಮರೆಂಬ ವಸ್ತುಗಳಿಗೆ ಶಾಶ್ವತವಾಗಿ ವ್ಯತ್ಯಾಸವಾಗದೆ ಇರುವುದು. ಈ ನಿಷ್ಕರ್ಷೆ ಬಂದರೆ, ಪ್ರತಿ ಜೀವನೂ ತನ್ನ ಯೋಗ್ಯತೆಯಿಷ್ಟೇ ಎಂದು ತಿಳಿದು ಅದರಲ್ಲೇ ತೃಪ್ತನಾಗಿ, ದುರಾಶೆಯಿಲ್ಲದೆ, ಅಸೂಯೆಯಿಲ್ಲದೆ, ಕಾಮಕ್ರೋಧಗಳಿಗೆ ಅವಕಾಶವಿಲ್ಲದೆ, ಶಾಂತನಾಗಿರುವುದಕ್ಕೆ ಮೂಲಕಾರಣವಾಗಿರುವುದೆಂದು ತಾತ್ಪರ್ಯ." (ಅದೇ ಪುಟ, 274).

ಈ ವಿಚಾರಾಂಶಗಳು ಸಾಮಾಜಿಕರಲ್ಲಿ ಒಡಮೂಡಿದರೆ, ಸಮಾಜಘಟನೆಯ ಸತ್ಪರಿಣಾಮವಾದ ಸೌಖ್ಯ ಶಾಂತಿಗಳು ತಾನಾಗಿ ಲಭಿಸುತ್ತವೆ. ಹಾಗೂ ಪಾರಲೌಕಿಕದಲ್ಲೂ ಇಹದಂತೆ ಈ ತಾರತಮ್ಯವಿರುವುದು ಸಹಜವೆಂದು ತಿಳಿಯಲಾಗುತ್ತದೆ.

ಉಪಸಂಹಾರ: ವೈದಿಕಮತವನ್ನು ಭಾರತದ ಎಲ್ಲೆಡೆಗೆ ಹರಡಲು ಉದ್ಯುಕ್ತರಾದ ಶ್ರೀ ಶಂಕರಾಚಾರ್ಯರ ಕಾಲಮಾನದ ರೀತಿಗಳನ್ನು ನಾವು ಗಮನಿಸಿದರೆ, ಅಂದಿನ ಜನತೆಯಲ್ಲಿ ಅಂತಹ ಮಟ್ಟಿಗೆ ಸಾಧಾರಣ ವಿಚಾರಕಣಗಳನ್ನು ಬಿತ್ತಿದುದು ಪ್ರಶಂಸನೀಯವೇ ಸೈ! ಅದೇ ಮುಂದೆ ಸಾಗುವಾಗ ಶ್ರೀ ರಾಮಾನುಜಾಚಾರ್ಯರು ತಮಿಳು ಹಾಗೂ ಕನ್ನಡಗಳಲ್ಲಿ ತಮ್ಮ ಜೀವಿತದ ಬಹುಭಾಗವನ್ನು ಜನತೆಯ ಮಾನಸಿಕ ಹಾಗೂ ತಾತ್ವಿಕ ವಿಚಾರಗಳ ಸುಧಾರಣೆಗಾಗಿ ಸವೆಸಿದರು. ಹದಿಮೂರನೆಯ ಶತಕದ ಚರಿತೆಯ ಗತಿಯಲ್ಲಿ ಶ್ರೀಮಧ್ವಾಚಾರ್ಯರು ಸಮುಲ್ಲೇಖನೀಯವಾದ ಹಾಗೂ ಆ ಮೇಲೆಂದೂ ಬಾಧಿಸಲಾರದ ದ್ವೈತಮತದ ಕಹಳೆಯನ್ನು ಊದಿದ್ದು, ಇಂದಿಗೂ ಮತತ್ರಯದವರೆಂದರೆ ದ್ವೈತ-ಅದ್ವೈತ-ವಿಶಿಷ್ಟಾದ್ವೈತವೆಂಬ ಹೆಸರು ಕೇಳಬರುತ್ತಿದೆ.

ಜಗತ್ತಿನಲ್ಲಿ '**ಮೂವರು ಆಚಾರ್ಯರು**' ಎಂದರೆ ಶ್ರೀ ಶಂಕರ, ಶ್ರೀ ರಾಮಾನುಜ, ಶ್ರೀ ಮಧ್ವರೆಂಬುದು ಪ್ರಸಿದ್ಧವಾಗಿದೆ. ಯಾವನೇ ಮತೀಯನೂ ಪರಕೀಯ ದೋಷೈಕದೃಷ್ಟಿಯಿಲ್ಲದೆ ಸ್ವಮತ ಪ್ರಚಾರವನ್ನು ಕೈಗೊಳ್ಳಬೇಕು! ಅದು ಮಾತ್ರವಲ್ಲ, ತುಲನಾತ್ಮಕ ದೃಷ್ಟಿಯಿಂದ ಸ್ವ-ಪರ ಗ್ರಂಥಗಳನ್ನು ಅಭ್ಯಾಸಮಾಡಬೇಕು! 'ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ,' 'ಶ್ರೇಯಾನ್ ಸ್ವಧರ್ಮೋ ವಿಗುಣಃ', ಎಂಬ ಗೀತಾಚಾರ್ಯನ ಮಾತನ್ನು ಮನನಮಾಡಿಕೊಳ್ಳಬೇಕು. ಸಾಮಾಜಿಕರಲ್ಲಿ

ಸ್ವದೇಶಸಂರಕ್ಷಣೆಯ ಶಿಕ್ಷಣ

ವಿನಾಯಕನ ಉಪನಯನ

(ಲೇಖಕ: ವೈದ್ಯಗುರು ಎಂ. ಆರ್. ಭಟ್)

"ಮೇಖಲಾಧಾರಣ"ವೆಂದರೆ ಉಡುದಾರವನ್ನು ಧರಿಸುವುದೆಂದು ಅರ್ಥ. ಉಪನಯನಕಾಲದಲ್ಲಿ ಕಟ್ಟುವ ಆ ಉಡುದಾರದ ಮಹತ್ವವೇನು? ವಟುವು, ಉಡುದಾರ ಧರಿಸಿ, ಕೌಪೀನ ಉಟ್ಟುಕೊಂಡು, ದಂಡಧಾರಣ ಮಾಡಿ, "ಭಿಕ್ಷಾಂ ದೇಹಿ" ಎಂದು ಹೊರಟಾಗ, ಅವನಿಗೆ ಯಾವ ಭಿಕ್ಷೆ ನೀಡುತಿದ್ದರು? ವೈದ್ಯಗುರು ಎಂ. ಆರ್. ಭಟ್‌ರವರು, "ವಿನಾಯಕನ ಉಪನಯನ"ವೆಂಬ ಈ ಲೇಖನದಲ್ಲಿ ಅದನ್ನು ವಿವರಿಸುತ್ತಾರೆ.

ಋಷಿಕಾಲದಲ್ಲಿ ಜನತೆಯು ಯಾವ ಪ್ರಕಾರದ ಸಂಸ್ಕಾರಗಳನ್ನು ಹೊಂದುತ್ತಿತ್ತು? ಇಂದೀಗ ಯಾವ ಪ್ರಕಾರದ ಸಂಸ್ಕಾರಗಳನ್ನು ಹೊಂದುತ್ತಿದೆ? ಇದನ್ನು ನಾವಿಂದು ತಿಳಿಯುವುದು ಅವಶ್ಯಕ.

ವೇದ, ಬ್ರಾಹ್ಮಣ ಹಾಗೂ ಉಪನಿಷತ್ಕಾಲದಲ್ಲಿ ೭೨ ಸಂಸ್ಕಾರಗಳನ್ನು ಜನತೆಯು ಹೊಂದುತ್ತಿತ್ತು; ಇಂದೀಗ ೧೬ ಸಂಸ್ಕಾರಗಳನ್ನು ಮಾತ್ರ ಹೊಂದಬಹುದು; ವಿವಾಹ ಸಂಸ್ಕಾರವೊಂದೇ ನಡೆದುಬಂದಿದೆ; ಕೇವಲ ಬ್ರಾಹ್ಮಣರಲ್ಲಿ, ಉಪನಯನಸಂಸ್ಕಾರವು ನಡಿಯುತ್ತಲಿದೆ. ಉಳಿದ ಸಂಸ್ಕಾರಗಳು ಗ್ರಂಥಗಳಲ್ಲಿ ಮಾತ್ರ ಇವೆ. ಈ ಸಂಸ್ಕಾರಗಳ ಒಂದು ಉತ್ತಮ ಉದಾಹರಣೆಯು ಗಣೇಶಪುರಾಣ (2–1–10)ದಲ್ಲಿದೆ. ಅದು ಸಂಕ್ಷೇಪವಾಗಿ ಈ ಕೆಳಗಿನಂತಿದೆ:

ಋಷಿಕಾಲದಲ್ಲಿ ಸಕಲಸಂಸ್ಕಾರಗಳು ವಿಧಿಪೂರ್ವಕವೇ ನಡೆಯುತ್ತಿದ್ದವು. ವಿನಾಯಕದೇವನ ಉಪನಯನವು ಕಶ್ಯಪಋಷಿಯ ಆಶ್ರಮದಲ್ಲಿ ನಡೆದಿತ್ತು. ಆಶ್ರಮದ ಯಜ್ಞಮಂಟಪದಲ್ಲಿ ಯಜ್ಞವು ನಡೆಯುತ್ತಿರುವಾಗ, ವಟುವನ್ನು ಅಲ್ಲಿ ತಂದು, ಯಜ್ಞೋಪವೀತ ಧಾರಣ, ಕೌಪೀನ ಧಾರಣ, ಉಡುದಾರಧಾರಣ ಮತ್ತು ದಂಡಧಾರಣಮಾಡಿಸುತ್ತಿದ್ದರು; ಇದೆಲ್ಲ ಮುಗಿದೊಡನೆ, ವಿನಾಯಕನು ವರ್ತಮಾನ ಸಂಪ್ರದಾಯದಂತೆ ಭಿಕ್ಷೆಯನ್ನು ಕೇಳುವವನಾದನು; ಆಶ್ರಮದಲ್ಲಿ ಇದ್ದವರೆಲ್ಲರೂ ಭಿಕ್ಷೆಯನ್ನು ಕೊಟ್ಟರು. ವಟುವನ್ನು ಆಶೀರ್ವದಿಸಿದರು. 'ಮೇಖಲಾಧಾರಣ'ವೆಂದರೆ, ಉಡುದಾರ ಧಾರಣ ಅಥವಾ ಸೊಂಟದ ಪಟ್ಟಿಯ ಧಾರಣ. 'ಮೇಖಲಾ' ಅಂದರೆ ಸೊಂಟದ ಪಟ್ಟಿ ಅಥವಾ ಕಮರಪಟ್ಟಿ; ಸೊಂಟದ ಸುತ್ತಲೂ ಕಟ್ಟುವ ಪಟ್ಟಿ; ಇದರ ಧಾರಣಸಮಯದಲ್ಲಿ ಹೇಳುವ ಮಂತ್ರ:—

"ಇಯಂ ದುರುಕ್ತಂ ಪರಿಬಾಧಮಾನಾ ವರ್ಣಂ ಪವಿತ್ರಂ ಪುನತೀಮ ಆಗಾತ್ । ಪ್ರಾಣಾಪಾನಾಭ್ಯಾಂ ಬಲಮಾದಧಾನಾಸ್ವಸಾ ದೇವೀ ಸುಭಗಾ ಮೇಖಲೇಯಮ್."

ಅರ್ಥ:—ಈ ಉಡುದಾರವು ಶರೀರದಲ್ಲಿ ಬಲವನ್ನು ಹೆಚ್ಚಿಸುತ್ತದೆ; ಅನ್ಯರ ಕೆಟ್ಟಮಾತನ್ನು ತಡೆದುಬಿಡುತ್ತದೆ; ವರ್ಣವನ್ನು ಪವಿತ್ರಮಾಡಿ, ಭಾಗ್ಯಾಭಿವೃದ್ಧಿಯನ್ನು ಮಾಡುತ್ತದೆ. ಶಕ್ತಿಯನ್ನು ಹೆಚ್ಚಿಸುತ್ತದೆ; ಅನ್ಯರ ಅಪಶಬ್ದಗಳನ್ನು ಪ್ರತೀಕಾರಮಾಡುವ ಸಾಮರ್ಥ್ಯವು ಅದರಿಂದ ಉತ್ಪನ್ನವಾಗುತ್ತದೆ; ಅದು ಭಾಗ್ಯವೃದ್ಧಿದಾಯಕವೂ ಆಗಿದೆ.

ಇಂದೀಗ ಸಹ ಸೊಂಟ ಪಟ್ಟಿಯಿಂದ ಈ ಅನುಭವವು ಎಲ್ಲರಿಗೂ ಬರುತ್ತದೆ. ಅವನಲ್ಲಿ ಬಲವು ಹೆಚ್ಚಾಗಿ, ಅನ್ಯರ ಅಪಶಬ್ದಗಳನ್ನು ಅವನು ಸಹಿಸುವುದಿಲ್ಲ; ಪ್ರತೀಕಾರಮಾಡಲು, ಭಾವನೆಯು ಬಂದುಬಿಡುತ್ತದೆ. ಸೊಂಟವು ಸಡಿಲಾಗಬಾರದೆಂಬ ಬಯಕೆಯು ಸ್ವಾಭಾವಿಕ; ಸೊಂಟವು ಬಿಗಿಯಾಗಿ ಕಟ್ಟಿರುವುದು ಉತ್ತಮ. ವೈದಿಕಕಾಲದಲ್ಲಿ ಜನರು 6 ಅಥವಾ 8 ವರ್ಷದ ಬಾಲಕನ ಸೊಂಟವನ್ನು ಮೇಖಲಾ (ಸೊಂಟಪಟ್ಟಿ)ದಿಂದ ಕಟ್ಟುತ್ತಿದ್ದರು.

ಮೇಖಲಾಧಾರಣದ ನಂತರ, ವಟುವಿನ ಕೈಯಲ್ಲಿ ದಂಡವನ್ನು ಕೊಡುತ್ತಾರೆ; ಅದರ ಮಂತ್ರ:—

"ಯೋ ಮೇ ದಂಡಃ ಪರಾಪತದ್ವೈಹಾಯಸೋಽಧಿಭೂಮ್ಯಾಮ್ । ತಮಹಂ ಪುನರಾದದೇ ಆಯುಷೇ ಬ್ರಹ್ಮಣೇ ಬ್ರಹ್ಮವರ್ಚಸಾಯ ।"

ಅರ್ಥ:—ಈ ದಂಡವು ಸ್ವರ್ಗದಿಂದ ಈ ಭೂಮಿಯ ಮೇಲೆ ಬಂದಿದೆ; ಇದನ್ನು ನಾನು ಇಂದಿನಿಂದ ಕೈಯಲ್ಲಿ ಧರಿಸುವೆನು; ಇದರಿಂದ ಆಯುಷ್ಯವು ಹೆಚ್ಚುವುದು; ಜ್ಞಾನವು ವೃದ್ಧಿಯಾಗುವುದು; ಬ್ರಹ್ಮತೇಜಸ್ಸು ಸಹ ಹೆಚ್ಚುವುದು

ಆಯುರ್ಜ್ಞಾನ ತೇಜಸ್ಸುಗಳು ವೃದ್ಧಿಯಾಗಲು, ದಂಡಧಾರಣ ಮಾಡುವುದೆಂದು ಕಾಣಿಸುತ್ತದೆ; ಈ ಸಂಸಾರವು ಕ್ಷಣಭಂಗುರವಲ್ಲ; ಇಲ್ಲಿ ದೀರ್ಘಾಯುಷ್ಯದ ಕಾರ್ಯಕ್ರಮವಿದೆ; ಅನ್ಯರ ಅಪಶಬ್ದಗಳನ್ನು ಸಹಿಸಲಾರನೆಂಬ ಭಾವನೆಯಿದೆ; ಶಕ್ತಿಯೂ ಐಶ್ವರ್ಯವೂ ಹೆಚ್ಚುವುವು; ಭಾಗ್ಯವಂತನಾಗಲು ಪ್ರಯತ್ನಶೀಲನಾಗಬೇಕೆಂಬ ಉದ್ದೇಶವು ಕಾಣಿಸುತ್ತದೆ.

ಈ ಪ್ರಕಾರ ವಿನಾಯಕನ ಸಂಪೂರ್ಣ ಸಂಸ್ಕಾರ ನಡೆಯಿತು. ಅನಂತರ ಭಿಕ್ಷೆಗೋಸುಗ, ವಿನಾಯಕನು ಸಿದ್ಧನಾದನು. ಇಂದೀಗ ಇಂತಹ ಭಿಕ್ಷೆಗೆ ಲಡ್ಡು, ರೂಪಾಯಿ, ವಸ್ತ್ರ ಹಾಗೂ ಬಂಗಾರ ಇತ್ಯಾದಿಗಳನ್ನು ಕೊಡುತ್ತೇವೆ. ಆದರೆ, ವಿನಾಯಕನಿಗೆ ಕಶ್ಯಪ ಆಶ್ರಮದಲ್ಲಿ ಲಭಿಸಿದ ಭಿಕ್ಷೆಯ ಕುರಿತು, ವಿಚಾರಿಸುವುದು ಅವಶ್ಯಕ.

ಶಸ್ತ್ರಾಸ್ತ್ರಗಳ ಭಿಕ್ಷೆ

ವಿನಾಯಕನು ವರುಣನಿಂದ ಪಾಶವನ್ನು ಭಿಕ್ಷೆಯಾಗಿ ಪಡೆದನು; ಶತ್ರುಸಂಹಾರಕ್ಕೋಸ್ಕರ ಪಾಶವನ್ನು ಕೊಡುತ್ತೇನೆಂದು ವರುಣನು ಹೇಳಿದನು; ಪರಶುರಾಮನ ಮಾತೆಯಾದ ರೇಣುಕೆಯಿಂದ 'ಪರಶು'ವನ್ನು ವಿನಾಯಕನು ಭಿಕ್ಷೆಯಾಗಿ ಹೊಂದಿದನು. ಶತ್ರುಗಳ ಪರಾಭವಕ್ಕೋಸ್ಕರವೇ ರೇಣುಕೆಯು ಇದನ್ನು ಕೊಟ್ಟಳು. ಹೀಗೆ ಅನೇಕರು ಅನೇಕ ವಿಧದ ಶಸ್ತ್ರಾಸ್ತ್ರಗಳನ್ನು ಕೊಟ್ಟ ಬಳಿಕ ಎಲ್ಲರೂ ಕೂಡಿ

ಸದ್ಗುಣಗಳತ್ತ ಅಭಿರುಚಿಹುಟ್ಟುವಂತೆ ಹಾಗೂ ಸನಾತನವಾದ–ಧಾರ್ಮಿಕ ಪ್ರಧಾನಾಂಗವಾದ ಭಾರತೀಯ ಸಂಸ್ಕೃತಿಯಲ್ಲಿ ಅವರೆಲ್ಲರೂ ಆಸಕ್ತರಾಗುವಂತೆ ಮಾಡಬೇಕು! ಅದುವೇ ನಮ್ಮೆಲ್ಲರ ಹೆಗ್ಗುರಿಯಾಗಲಿ!

ಇಂತಹ ಪರ್ವದಿನ(ಹಬ್ಬ), ವಾರ್ಷಿಕೋತ್ಸವ ಮುಂತಾದ ಸಮಾರಂಭಗಳಲ್ಲಿ ಧಾರ್ಮಿಕಗೋಷ್ಠಿಗಳನ್ನೂ, ಸಾಹಿತ್ಯಗೋಷ್ಠಿಗಳನ್ನೂ ನೆರವೇರಿಸಿದರೆ, ಜನತೆಯಲ್ಲಿ ಸದ್ಗುಣಗಳು ನೆಲೆಯೂರಲು ಅವಕಾಶವಿದೆ; ಅಗತ್ಯವೂ ಇದೆಯೆಂದು ಹೇಳಿದರೆ ತಪ್ಪಾಗದು!

"ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।
ಅಹಂ ತ್ವಾಂ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ, ಮಾ ಶುಚಃ ॥"
(ಭಗವದ್ಗೀತಾ, ೧೮–೬೬).

"ಉಪಾದಿಶತ್ ದುಷ್ಟನಾಶಂ ಕುರು ಶೀಘ್ರಂ ವಿನಾಯಕ"

ಎಲೈ ವಿನಾಯಕನೇ, ಈ ಶಸ್ತ್ರಾಸ್ತ್ರಗಳನ್ನು ಯಥೋಚಿತ ಉಪಯೋಗಿಸಿ, ದುಷ್ಟರನ್ನೆಲ್ಲ ಶೀಘ್ರವೇ ಪರಿಹರಿಸು–ಎಂದು ಆಶೀರ್ವದಿಸಿದರು.

ಈ ವಿನಾಯಕನ ಉಪನಯನವು ಕಶ್ಯಪ ಋಷಿಯ ಆಶ್ರಮದಲ್ಲಿ ವಿಧಿಪೂರ್ವಕವೇ ನಡೆದಿತ್ತು.

ಎಂಟು ವರ್ಷದ ಬಾಲಕನ ಸೊಂಟಕ್ಕೆ ಪಟ್ಟಿಕಟ್ಟಿ, ಕೈಯಲ್ಲಿ ದಂಡಧಾರಣಮಾಡಿಸಿ, ಅನೇಕ ಶಸ್ತ್ರಾಸ್ತ್ರಗಳನ್ನು ಭಿಕ್ಷೆಯಾಗಿ ಕೊಟ್ಟು, 'ದುಷ್ಟರ ವಿನಾಶವನ್ನು ಸಾಧಿಸು', ಎಂದು ಉಪದೇಶಿಸಿದ್ದುದನ್ನು ಧ್ಯಾನದಲ್ಲಿ ಇಟ್ಟುಕೊಳ್ಳಬೇಕಾಗಿದೆ. ಈ ಸಂಸ್ಕಾರ ಹಾಗೂ ಆಶೀರ್ವಾದವು ಋಷಿಕಾಲದಲ್ಲಿ ಸ್ವಯಂಸೇವಕ ಸಂಘವನ್ನು ಪ್ರವೇಶಿಸುವುದಕ್ಕೇನೇ ಪರಂಪರೆಯಾಗಿ ಬಂದಿತ್ತು—ಎಂಬುದು ಸ್ಪಷ್ಟವಾಗುತ್ತದೆ. ಇಲ್ಲವಾದರೆ, ಮೇಖಲಾ, ದಂಡ ಪಾಶ–ಮೊದಲಾದವುಗಳ ಆವಶ್ಯಕತೆಯೇನು? ಬ್ರಹ್ಮಚರ್ಯಾಶ್ರಮದಲ್ಲಿ ವೇದ ಶಾಸ್ತ್ರಗಳ ಅಧ್ಯಯನ, ಮಾತ್ರವಲ್ಲ, ಯುದ್ಧದ, ದೇಶಸಂರಕ್ಷಣೆಯ ಹಾಗೂ ಶತ್ರುಸಂಹಾರದ ಶಿಕ್ಷಣವು ಸಹ ಕೊಡಲ್ಪಡುತ್ತಿತ್ತು.

ಎಂಟು ವರ್ಷದ ಬಾಲಕನು ಸ್ವಗೃಹದಿಂದ ಹೊರಟು ಬರುವಾಗ, "ಮೃತ್ಯೋರಹಂ ಬ್ರಹ್ಮಚಾರೀ" (–ಅಥರ್ವ ವೇದ). "ಮೃತ್ಯುವಿನ ಆಲಿಂಗನಮಾಡುವ ಬ್ರಹ್ಮಚಾರಿಯು ನಾನು; ನನ್ನ ತಾಯಿ ತಂದೆಯವರ ಸಂಬಂಧವನ್ನು ಬಿಟ್ಟು ಗುರು ಸಂಬಂಧವನ್ನು ಇಟ್ಟುಕೊಳ್ಳುತ್ತೇನೆ; ಇದೇ ನನ್ನ ಪ್ರತಿಜ್ಞೆ".

ಅನಂತರ, ಗುರುಕುಲದಲ್ಲಿ ಹದಿನೆರಡು ವರ್ಷ ನಿವಾಸಮಾಡುತ್ತ, ವಿದ್ಯೆಯನ್ನು ಮಾತ್ರವಲ್ಲ, ದೇಶಸಂರಕ್ಷಣೆಯ ಶಿಕ್ಷಣವನ್ನು ಸಹ ಹೊಂದುತ್ತಿದ್ದನು. ಕ್ಷತ್ರಿಯ ಬಾಲಕರು ಯುದ್ಧಶಾಸ್ತ್ರದ ಸಂಪೂರ್ಣ ಶಿಕ್ಷಣವನ್ನು ಹೊಂದುತ್ತಿದ್ದರು. ತ್ರಿವರ್ಣದವರು ಸಾಮಾನ್ಯವಾಗಿ ಶಸ್ತ್ರಧಾರಣ ದೇಶಸಂರಕ್ಷಣೆ ಮುಂತಾದವುಗಳ ಶಿಕ್ಷಣವನ್ನು ಹೊಂದುತ್ತಿದ್ದರು. ಆಪತ್ತಿನ ಸಮಯದಲ್ಲಿ ಸಕಲರೂ ಶಸ್ತ್ರಧಾರಣಮಾಡಬೇಕೆಂದು ಸ್ಮೃತಿಕಾರರು ಒತ್ತಾಯಪೂರ್ವಕವಾಗಿ ಹೇಳುತ್ತಾರೆ. ಆ ಕಾಲದಲ್ಲಿ ಶಸ್ತ್ರಧಾರಣ ಶಿಕ್ಷಣವನ್ನು ಸಕಲರೂ ಪಡೆಯುತ್ತಿದ್ದರು. ಭಿಕ್ಷೆಯನ್ನು ಕೇಳಿಕೊಳ್ಳುವಾಗ ವಟುಗಳು ಶಸ್ತ್ರಾಸ್ತ್ರಗಳನ್ನು ಹೊಂದುತ್ತಿದ್ದರು. ಉಪನಯನವೆಂದರೆ ದೇಶ ಸಂರಕ್ಷಣೆಯ ಸಿದ್ಧತೆ ಆಗಿದೆ. ಇದರಲ್ಲಿ ಸಂದೇಹವಿಲ್ಲ.

ವೈದಿಕಕಾಲದಲ್ಲಿ ಸಂಪೂರ್ಣ ಶಿಕ್ಷಣವು ಗುರುಕುಲ ಪದ್ಧತಿಯಿಂದಲೇ ನಡೆಯುತ್ತಿತ್ತು. ವಿದ್ಯಾರ್ಥಿಗಳು ಸಮತಾಭಾವದಿಂದ ವರ್ತಿಸುತ್ತಿದ್ದರು. ಇದು ಗುರುಕುಲ ಶಿಕ್ಷಣದ ವೈಶಿಷ್ಟ್ಯ. ಶ್ರೀಕೃಷ್ಣನಂತಹ ಶ್ರೀಮಂತನೂ ಸುದಾಮನಂತಹ ದರಿದ್ರನೂ ಒಂದೇ ಗುರುಕುಲದಲ್ಲಿ ಕಲಿತು ಒಂದೇ ವೇಷಭೂಷಣವನ್ನು ಧರಿಸಿ ಒಂದೇ ಆಹಾರ ವಿಹಾರವನ್ನು ಅನುಭೋಗಿಸಿ ಗುರುಕುಲದಲ್ಲಿ ವಾಸಿಸಿದುದು ಸ್ಪಷ್ಟವಾಗಿದೆ. ಕೇವಲ ಬುದ್ಧಿಯ ಪ್ರಭಾವದಲ್ಲಿ ಹೆಚ್ಚು ಕಡಿಮೆ ಇರಬಹುದು, ಅನ್ಯಥಾ ಎಲ್ಲೂ ಸಮಾನವಾಗಿತ್ತು. ಇಂದೀಗ ಈ ಸಮತಾಭಾವವು ವಿದ್ಯಾರ್ಥಿಗಳಲ್ಲಿ ಕಾಣಿಸುವುದು ವಿರಳ. ಗುರುಕುಲದ ಶಿಕ್ಷಣವ್ಯವಸ್ಥೆಯಿಂದ ಸಮಾಭಾವವು ಮತ್ತು ಸಮಾಜದ ಮೇಲೆ ಅದರ ಉತ್ತಮ ಪರಿಣಾಮ ಕಾಣಿಸುತ್ತಿತ್ತು. ಸಮಾಜದಲ್ಲಿ ಶಾಂತಿಯನ್ನು ಸ್ಥಾಪಿಸಲು ಅಲ್ಲಿ ಅನುಕೂಲ ವಾತಾವರಣವು ಸೃಜಿತವಾಗಿತ್ತು.

ಜಾತಿ ಉಪಜಾತಿಗಳಲ್ಲಿ ಕಲಹ, ಉಚ್ಚ ನೀಚ ಭಾವನೆ ಇವೆಲ್ಲವನ್ನು ಪರಿಹರಿಸಲು, ಕುಮಾರಾವಸ್ಥೆಯಿಂದಲೇ ಸಿದ್ಧತೆಯನ್ನು ನಾವು ಇಂದು ಮಾಡಬೇಕಾಗಿದೆ. ಸಮತೆ ಮತ್ತು ಪ್ರಗತಿಶೀಲತೆಗಳು ಇದರ ವೈಶಿಷ್ಟ್ಯಗಳು. ಆಶ್ರಮಗಳಲ್ಲಿ ಶಸ್ತ್ರಾಸ್ತ್ರಗಳ ಪ್ರಯೋಗವು ನಡೆಯುತ್ತಿತ್ತು. ಈ ಶಿಕ್ಷಣದಿಂದ ಆಶ್ರಮದಿಂದ ಸಂರಕ್ಷಣೆಯು ಮಾತ್ರವಲ್ಲ ಲೋಕಸಂರಕ್ಷಣೆಯು ಸುಲಭಸಾಧ್ಯವಾಗಿತ್ತು. ಶಾರೀರಿಕ ರಕ್ಷಣೆಗೋಸುಗ, ಹಾಗೂ ಬಲವೃದ್ಧಿಗೋಸುಗ, ಯೋಗಾಸನಗಳನ್ನು ಅಥವಾ ಯೋಗದ ಬಲವರ್ಧಕ ವ್ಯಾಯಾಮವನ್ನು ವಿದ್ಯಾರ್ಥಿಗಳು ಕಲಿಯುತ್ತಿದ್ದರು. ಇದರಿಂದ ಶರೀರವು ಹೃಷ್ಟಪುಷ್ಟವಾಗಿ ವಿದ್ಯಾರ್ಥಿಗಳು ದೀರ್ಘಾಯುಗಳಾಗುತ್ತಿದ್ದರು. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣಾ, ಸಮಾಧಿ ತನಕದ ಕಾರ್ಯಕ್ರಮವನ್ನು ಸಕಲರೂ ಮಾಡಬೇಕಾಗಿತ್ತು. ವಿದ್ಯಾರ್ಥಿಗಳ ಆಹಾರ ಉತ್ತಮವಾಗಿತ್ತು. ಇಂತಹ ಗುರುಕುಲದ ವಾತಾವರಣದಿಂದ ಯುವಕರು ಹೃಷ್ಟಪುಷ್ಟರಾಗಿ, ಕಷ್ಟಗಳನ್ನು ಸಹಿಸುವ ಅವಿಶ್ರಾಂತರಾಗಿ ಕಾರ್ಯನಿರತರಾಗಿ, ಸ್ವತಂತ್ರವಿಚಾರಮಯರಾಗಿ, ಧ್ಯೇಯನಿಷ್ಠರಾಗಿ, ಓಜಸ್ವಿಗಳಾಗಿ; ಬಲಿಷ್ಠರಾಗಿ, ದೃಢನಿಶ್ಚಯರಾಗಿ ಗುರುಕುಲದಿಂದ ಹೊರಟುಹೋಗುತ್ತಿದ್ದರು. ಈ ಶಿಕ್ಷಣದಿಂದ ಆ ಸಮಯದ ಸಂಸ್ಕೃತಿಯು ಉತ್ತಮವಾಗಿತ್ತು.

ವಿನಾಯಕನ ಉಪನಯನವು ಕಶ್ಯಪನ ಆಶ್ರಮದಲ್ಲಿ ಆದ ನಂತರ ವಿದ್ಯಾಧ್ಯಯನವು ಸಹ ಅಲ್ಲಿಯೇ ನಡೆಯುತ್ತಿತ್ತು. 'ಗಣೇಶಪುರಾಣ'ದಲ್ಲಿ ಇದರ ವರ್ಣನೆಯಿದೆ. ಈ ವರ್ಣನೆಯು ನಮಗೆ ಇಂದೀಗ ಮಾರ್ಗದರ್ಶಕವಾಗಲೂ ಸಂದೇಹವಿಲ್ಲ. ಸಕಲ ದೇವತೆಗಳ ಬಾಲ್ಯಾವಸ್ಥೆಯ ಚರಿತ್ರೆಗಳ ಅಧ್ಯಯನವನ್ನು ಇದೇ ದೃಷ್ಟಿಕೋಣದಿಂದ ಮಾಡಿದರೆ ಅದು ಸಹ ಮಾರ್ಗದರ್ಶಕವೇ ಸರಿ. ಇಂದೀಗ ಭಾರತೀಯರು ಈ ಹಿಂದಿನ ಪರಂಪರೆಯ ಮಾರ್ಗದರ್ಶನವನ್ನು ಸ್ಮರಿಸಿ ವಿಚಾರಿಸಿ ಕಾರ್ಯಗತಮಾಡಬೇಕಾಗಿವೆ. ದೇಶಸಂರಕ್ಷಣೆಗೆ ಇದೊಂದು ಉತ್ತಮ ಉಪಾಯ. ವಿನಾಯಕನ ಉಪನಯನವು ಹಾಗೂ ಅವನ ಚರಿತ್ರೆಯು ನಮ್ಮ ದೇಶದ ಅಭಿವೃದ್ಧಿಗೆ ಹಾಗೂ ಶ್ರೇಯಸ್ಸಿಗೆ ಕಾರಣವಾಗುವುದರಲ್ಲಿ ಸಂದೇಹವೇ ಇಲ್ಲ.

ತುಳುಸಂಧಿಯ ಕತೆ–೧೮.

ಗಿಲ್ಲು–ಬಿಲ್ಲು

ದಕ್ಷಿಣ ಕನ್ನಡ ಜಿಲ್ಲೆಯ ತುಳು ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಹಲವು ಕತೆಗಳು, "ಪಾಡ್ದನ" ಎಂಬ ತುಳು ಜಾನಪದ ಸಾಹಿತ್ಯದಲ್ಲಿ ಅಡಕವಾಗಿವೆ. ಇವುಗಳು ಶತಮಾನಗಳ ಹಿಂದಿನ ಇಲ್ಲಿಯ ಜನಜೀವನವನ್ನೂ, ಕಟ್ಟು–ಕಟ್ಟಳೆಗಳನ್ನೂ, ಧೈರ್ಯ–ಶೌರ್ಯಗಳನ್ನೂ, ಉದಾರ ಹೃದಯ–ಕರ್ತವ್ಯನಿಷ್ಠೆಯ ಉದಾಹರಣೆಗಳನ್ನೂ ಹೊಂದಿರುವುವು. ಪ್ರತಿಯೊಬ್ಬನೂ ತಿಳಿದುಕೊಳ್ಳುವಷ್ಟು ಉತ್ತಮವೂ ಆಗಿವೆ; ಸಂಗ್ರಾಹಯೋಗ್ಯವಾಗಿವೆ. ಇವುಗಳಲ್ಲಿ 17 ಕತೆಗಳು ಈ ಮೊದಲೇ "ಪ್ರಭಾತ"ದ ಹಿಂದಿನ ಸಂಚಿಕೆಗಳಲ್ಲಿ ಪ್ರಕಟವಾಗಿವೆ. ಇಲ್ಲಿ 18ನೇ ಕತೆಯನ್ನು ಕೊಟ್ಟಿರುವೆವು.

ಸಂಗ್ರಾಹಕ, ಅನುವಾದಕ:
ಎಮ್. ನಾರಾಯಣ, ಮಂಗಳೂರು.

ಗುಂಡಿಯ ಬೀಡಿನಲ್ಲಿ ಗುಂಡಿನವರು ಇದ್ದರು. ಗುಂಡಿನವರು ತಾಯಿ ಸತ್ತ ಗಿಲ್ಲು—ಸೋದರಿಯ ಮಗಳಾದ ಸೊಸೆ—ಇವಳನ್ನು ಪಸುಮೊಯ ಶಿಶುವಿದ್ದಾಗ ಬೀಡಿಗೆ ತಂದು ಅಕ್ಕರೆಯಿಂದ ಸಲಹಿದರು. ಶಿಶುವಿನ ಜತೆಯಲ್ಲಿ ನಾಯಿಯ ಮರಿಯನ್ನೊಂದನ್ನು ಕೂಡ ಸಾಕಿದರು. ಅದನ್ನು ಬಿಲ್ಲು ಎಂದು ಕರೆದರು.

ಗಿಲ್ಲು ಬಳೆದು ದೊಡ್ಡವಳಾದಳು. ಗಿಲ್ಲು—ಬಿಲ್ಲು ಅನನ್ಯ ನಿಕಟ ಸ್ನೇಹಾನುರಾಗ ಭಾವದಿಂದ ಬಂಧಿಸಲ್ಪಟ್ಟಿದ್ದರು. ಗಿಲ್ಲು ಅತ್ಯಂತ ಚೆಲುವೆಯಾಗಿದ್ದಳು. ಅವಳಿಗೆ ತಾನಾಯಿತು, ತನ್ನ ಕೆಲಸವಾಯಿತು. ಮಾವನಾದ ಗುಂಡಿನವರಿಗೆ ಹೊತ್ತುಹೊತ್ತಿಗೆ ಅಡಿಗೆಯನ್ನು ಸಿದ್ಧಗೊಳಿಸುವಳು. ಅವರಿಗೆ ಊಟಕ್ಕೆ ಬಡಿಸಿ ತಾನೂ ಉಂಡು, ಬಿಲ್ಲುವಿಗೂ ಇಕ್ಕುವಳು. ಅವಳು ಮನೆಯ ಹೊರಗೆ ಸುಳಿಯುತ್ತಿಲ್ಲ. ಅಕ್ಕಪಕ್ಕದವರ ದೃಷ್ಟಿಗೆ ಬೀಳುತ್ತಿಲ್ಲ.

ಬಿಲ್ಲು ಗಿಲ್ಲುವಿನ ಒಡನಾಟದ ಸಂಗಾತಿಗಿಯಾದನು. ಅತ್ಯಂತ ಪ್ರಾಮಾಣಿಕನಿದ್ದನು. ಅತ್ಯಪ್ತಿಯು ಅವನನ್ನು ತನ್ನ ಪ್ರಿಯ ಚಿಕ್ಕ ಒಡತಿಯಿಂದ ಅಗಲಿಸಲಿಲ್ಲ. ಅವನು ವಿನಯವಂತನಾಗಿದ್ದನು, ದಯಾಭರಿತನಾಗಿದ್ದನು. ಗಿಲ್ಲುವಿಗೆ ಅವನೆಂದರೆ ಪಂಚಪ್ರಾಣ. ವಿರಾಮಕಾಲವನ್ನು ಮನೆಯೊಳಗೆ ಅವಳು ತನ್ನ ಸಖನಾದ ಬಿಲ್ಲುವಿನ ಜತೆಯಲ್ಲಿ ಸರಸವಾಡುತ್ತ, ಚೆಲ್ಲಾಟವಾಡುತ್ತ, ನಗುತ್ತ ಕಳೆಯುವಳು. ಬಿಲ್ಲು ಅವಳ ಉಡಿಗೆ ತನ್ನ ಕಾಲುಗಳನ್ನು ಚಾಚಿ ನಿಂತುಕೊಳ್ಳುವನು. ತನ್ನ ಸಂತಸವನ್ನು ಚಿಕ್ಕ ಒಡತಿಗೆ ಅವ್ಯಕ್ತವಾಗಿ ತನ್ನ ಮಾತಿನಿಂದ ಗುಕ್ಕಿಕೊಳ್ಳುವನು. ಅದನ್ನು ಈಕ್ಷಿಸಿ ಗಿಲ್ಲು ಬಿಲ್ಲುವನ್ನು ರಮಿಸುವಳು. ಬಿಲ್ಲು ಅವಳ ಸುತ್ತು ಸರಿಯುತ್ತ ನೆಗೆಯುತ್ತ ಕುಣಿಯುತ್ತ ಅವಳನ್ನು ನಗೆಗಡಲಲ್ಲಿ ತೇಲಿಸುವನು.

ಒಂದು ದಿನ ರಾತ್ರಿ ಗುಂಡಿನವರು ಊಟವಾಗಿ ಸೊಸೆಯಾದ ಗಿಲ್ಲುವನ್ನು ಕರೆದು ಹೀಗೆಂದರು:

"ಅಪ್ಪಾ ಮಗಳೇ! ನಮ್ಮ ಅಂಗಳದ ಮುಂದಿರುವ ಪದ್ಮಕಟ್ಟೆಯ ಕೆಂದಾಳಿ ತೆಂಗನ್ನು ಬಿರುಮಣನಿಗೆ ಮೂರ್ತೆಕಟ್ಟಲು ಹೇಳಿದ್ದೇನೆ. ಅವನು ನಾಳೆ ಬೆಳಿಗ್ಗೆ ಮೂರ್ತೆಕಟ್ಟುವುದಕ್ಕೆ ಬರಬಹುದು. ನೀನು ಮುಂಜಾನೆ ಬೇಗನೇ ಎದ್ದು ಅಂಗಳ ಗುಡಿಸಿ ಹೊರಗಿನ ಕೆಲಸಕಾರ್ಯಗಳನ್ನೆಲ್ಲ ಅವನು ಬರುವ ಮೊದಲೇ ತೀರಿಸಿಬಿಡು."

ಬಿರುಮಣ ನೆರೆಹೊರೆಯಲ್ಲಿ ಬೈಲುಸಂದಿನಲ್ಲಿ ವಾಸಿಸುತ್ತಿದ್ದನು. ಗುಂಡಿನವರಿಗೆ ಒಬ್ಬಳು ಗಿಲ್ಲು ಎನ್ನುವ ಸೊಸೆ ಇದ್ದಾಳೆ. ಅವಳು ಭಾರಿ ಸುಂದರಿಯಾದ ಹುಡುಗಿ ಎಂಬ ವದಂತಿಯನ್ನು ಬಿರುಮಣ ಕಿವಿಯಲ್ಲಿ ಕೇಳಿದ್ದನೇ ಹೊರತು ಅವಳನ್ನು ಕಣ್ಣಾರೆ ಕಂಡಿದ್ದಿಲ್ಲ. ಕಂಡೇನೆಂದರೆ ಬಿಲ್ಲು ಗಗನಕುಸುಮವಾದಂತಿದ್ದಳು. ಅವಳು ಬೀಡಿನ ಹೊರಗೆ ಹಗಲಲ್ಲಿ ಕಾಲಿಕ್ಕುತ್ತಿರಲಿಲ್ಲ. ಬಿರುಮಣ ಅವಳ ಕುರಿತು ಭ್ರಾಂತಿ ಕಟ್ಟಿದನು; ಮನಸ್ಸಿನಲ್ಲಿ ವ್ಯಾಮೋಹಪಟ್ಟನು. ಗುಂಡಿನವರು ಮನೆಯ ಮುಂದಿನ ಕೆಂದಾಳಿ ತೆಂಗಿಗೆ ಮುರ್ತೆಕಟ್ಟಲು ಹೇಳಿದಾಗ ಅವನಿಗೆ ಒಂದು ಯುಕ್ತಿ ತಲೆಯಲ್ಲಿ ಮಿಂಚಿತು. ಬಹುದಿನಗಳಿಂದ ಹತ್ತಿಕ್ಕಿಕೊಂಡಿದ್ದ ತನ್ನ ಮನದ ಬಯಕೆಯನ್ನು ಈಡೇರಿಸಿಕೊಳ್ಳುವ ಸದವಕಾಶವೊಂದು ಒದಗಿಕೊಂಡುದಕ್ಕಾಗಿ ಹರ್ಷಪಟ್ಟನು.

ಅಂದು ನಸುಕಿನಲ್ಲೇ ಎದ್ದು ಗಿಲ್ಲು ಅಂಗಳ ಗುಡಿಸತೊಡಗಿದಳು. ಗುಂಡಿನವರು ಕಂಬಳದ ಗದ್ದೆಯ ಕಡೆಗೆ ಹೊರಟರು. ಬೀಡಿನ ಮುಂದಿರುವ ಪದ್ಮಕಟ್ಟೆಯ ಕೆಂದಾಳಿ ತೆಂಗಿನಮರದ ಮೇಲೆ ಬಿರುಮಣ ಮುಂಚಿತವಾಗಿಯೇ ಬಂದು ಏರಿ ಅವಿತುಕೊಂಡು ಕೂತಿದ್ದನು. ತೆಂಗಿನ ಗೊನೆಯ ಒಣಗಿದ ದಂಟು, ಕೋಡು, ಚಾಪರಿಕೆಗಳನ್ನು ತನ್ನ ತರಿಕತ್ತಿಯಿಂದ ಕತ್ತರಿಸಿ ಕೆಳಗೆ ಹಾಕಿದ್ದನು. ಗಿಲ್ಲು ಬಾಗಿ ಆ ಕಸಬರಿಕೆಗಳನ್ನೆಲ್ಲ ಗುಡಿಸಿ ಒಂಸೆಡೆ ರಾಶಿಮಾಡಿದಳು. ಅದನ್ನು ಮತ್ತೆ ಎತ್ತಿ ಒಳಗೆ ಕೊಂಡು ಹೋಗಿ ಹಾಕಿದಳು. ಪುನಃ ಗುಡಿಸುವುದಕ್ಕೆ ಬಂದಳು. ಆಕೆ ಹಿಂತಿರುಗುವ ವೇಳೆಯೊಳಗೆ ಬಿರುಮಣ ಮೇಲಿಂದ ಮರಳಿ ಕಸಬರಿಕೆಗಳನ್ನು ಕತ್ತರಿಸಿ ಕೆಳಗೆ ಚೆಲ್ಲಿದ್ದನು. ಗಿಲ್ಲು ಪುನಃ ಪುನಃ ಗುಡಿಸುವುದು, ಹೋಗಿ ಕಸಬರಿಕೆಯನ್ನು ಮನೆಯೊಳಗೆ ಹಾಕುವುದು, ಬಿರುಮಣ ಮೇಲಿಂದ ಮೇಲೆ ಕೆಳಗೆ ಒಗೆಯುವುದು—ಈ ತರದ ಪ್ರಕ್ರಿಯೆ ಅನುಕ್ರಮವಾಗಿ ಕೆಲ ಹೊತ್ತಿನ ವರೆಗೆ ಸಾಗಿದವು. ಇಷ್ಟಾದಾಗ್ಯೂ ಬಿರುಮಣನಿಗೆ ಗಿಲ್ಲುವಿನ ಮುಖವನ್ನು ನಿಚ್ಚಳವಾಗಿ ಕಾಣಲಾಗದೆ ಹೋಯಿತು. ಬಿರುಮಣ ಒಂದು ಹಿಡಿ ಸಿಬರನ್ನು ಅವಳು ಬಾಗಿ ಗುಡಿಸುತ್ತಿದ್ದಾಗ ಅವಳ ಬೆನ್ನಿನ ಮೇಲಕ್ಕೆ ಒಗೆದನು. ಗಿಲ್ಲು ಇದ್ದಕ್ಕಿದ್ದ ಹಾಗೆ ಬೆಚ್ಚಿ ಬೆದರಿಕೊಂಡವಳಾಗಿ ನೆಟ್ಟಗೆ ನಿಂತು ಮೇಲೆ ನೋಡಿದಳು. ಬಿರುಮಣ ಇದೀಗ ಮಾತ್ರ ಗಿಲ್ಲುವಿನ ಮುಖಾರವಿಂದವನ್ನು ನೇರವಾಗಿ ನಿಟ್ಟಿಸಿದನು. ಅವಳ ಮುಖವನ್ನು ಒಂದೇ ಪ್ರಕಾರವಾಗಿ ಈಕ್ಷಿಸುತ್ತ ಅನ್ಯಮನಸ್ಕನಾಗಿ ಇರುತ್ತಿರಲು, ಕೈಯಿಂದ ಇತ್ತ ಚಾಪರಿಕೆ ಕತ್ತರಿಸಿದನು. ಅವನರಿಯದಂತೆ ಅವನ ಹರಿತವಾದ ತರಿಕತ್ತಿ "ಕಬಕ್ಕೆ" (ತೋರ್ಬೆರಳು ಮತ್ತು ಹೆಬ್ಬೆರಳಿನ ನಡು ಸಂದು)ಗೆ ತಾಕಿತು. ತೀವ್ರ ಗಾಯವಾಗಿ ರಾಮರಕ್ತ ಸುರಿಯಿತು!

"ಅಯ್ಯೊಯ್ಯೋ! ನಾನು ಸತ್ತೆ! ಉರಿ! ಉರಿ!!"

ಬಿರುಮಣನು ಕೂಗಿಕೊಂಡು ಸರಸರನೇ ತೆಂಗಿನಮರದಿಂದ ಕೆಳಗೆ ಇಳಿದನು. ಗಿಲ್ಲು ಬಿರುಮಣನ ಆಕ್ರೋಶ ಮತ್ತು ಅವಾಂತರವನ್ನು ದಿಟ್ಟಿಸಿ ತತ್ತರಗೊಂಡಳು. ಅವನ ಕೈಯಿಂದ ಧಾರಾಪೂರ್ವಕವಾಗಿ ರಕ್ತ ಹರಿಯುದನ್ನು ಗಮನಿಸಿದ ಮೇಲಂತೂ ಮತ್ತಷ್ಟೂ ವಿಚಲಿತಳಾದಳು. ಆದರೆ ಗಿಲ್ಲುವಿನ ಕರುಣಾತ್ಮಕ ಹೃದಯ! ಅದುಕಾರಣ ಅವಳಿಗೆ ಸುಮ್ಮನಿರಲಿಕ್ಕಾಗಲಿಲ್ಲ. ಪದ್ಮಕಟ್ಟೆಯಲ್ಲಿ ತೆಂಗಿನಮರಕ್ಕೆ ಒರಗಿಕೊಂಡು ಬಿರುಮಣನು ಮಿರಮಿರನೇ ನರಳುತ್ತಿದ್ದನು. ಅವನ ಮಗ್ಗುಲಲ್ಲಿ ನಿಂತುಕೊಂಡು ಬಿಲ್ಲು ಮಾತ್ರ ಅವನನ್ನು ಕೆಂಗಣ್ಣಿನಿಂದ ದುರದುರನೇ ಪರಿಕಿಸುತ್ತಿದ್ದಳು. ಗಿಲ್ಲು ಮನೆಯೊಳಗೆ ಓಡಿ ಮದ್ದು ತಂದಳು. ಅವನ ಕೈಯ ಗಾಯಕ್ಕೆ ಗಾಯದ ಮದ್ದನ್ನು ಹಚ್ಚಿದಳು. ಮೇಲೆ ಎಣ್ಣೆ ಪೂಸಿದಳು.

ಗಾಯವನ್ನು ಚಿಂದಿಯಿಂದ ಕಟ್ಟಿದಳು. ಬಿರುಮಣ ತುಸು ಚೇತರಿಸಿಕೊಳ್ಳುವಂತಾದನು. ನಿಧಾನವಾಗಿ ಎದ್ದು ಕೂತನು. ಗಿಲ್ಲಿ ಅವನಿಗೆ ನುಡಿದಳು:

"ನಿನ್ನ ನೋವು ಕೊಂಚ ಕಡಿಮೆಯಾಯಿತಲ್ಲವೇ? ಇನ್ನು ನೀನು ಮನೆಗೆ ಹೋಗು. ಕಂಬಳದ ಹಾದಿಯಿಂದ ಮಾತ್ರ ಹೋಗಬೇಡ. ಬೇರೆ ಹಾದಿ ಹಿಡಿದು ಹೋಗು."

ಬಿರುಮಣ ಎದ್ದು ನಿಂತನು. ಗಿಲ್ಲಿಯನ್ನೊಮ್ಮೆ ಅಪಾದಮಸ್ತಕವಾಗಿ ನಿಟ್ಟಿಸಿದನು. ಕೃತಜ್ಞತೆಯು ಆ ನೋಟದಲ್ಲಿ ಇರಲಿಲ್ಲ. ಬದಲಿಗೆ ವಿಲಕ್ಷಣವಾದ ಕರಾಳಭಾವ ವಿನ್ಯಾಸವೊಂದು ಆವರಿಸಿತ್ತು.

ಬಿರುಮಣ ನಡೆದನು. ಮುಂದೆ ಸಾಗುತ್ತ ಕಂಬಳದ ಹಾದಿ ಬಿಟ್ಟು ಪೆರತು ಕಾಲುದಾರಿಯನ್ನು ಹಿಡಿಯಲಿಲ್ಲ. ಕಂಬಳದ ಹಾದಿಯಲ್ಲೇ ಮುಂದೊತ್ತಿದನು. ಹೋಗುತ್ತ ಎದುರಿಗೆ ಬರುತ್ತಿರುವ ಗುಂಡಿನವರನ್ನು ಸಂಧಿಸಿದನು. ಕೈಗೆ ಚಿಂದಿಯನ್ನು ಬಿಗಿದಿರುವ ನರಳುತ್ತ ಚಲಿಸುತ್ತಿರುವ ಬಿರುಮಣನನ್ನು ಗುಂಡಿನವರು ವಿಸ್ಮಯಾತುರದಿಂದ ಮಾತಾಡಿಸಿದರು:

"ಕೈಗೇನಾಯಿತು, ಬಿರುಮಣಾ? ಮುರ್ತೆ ಕಟ್ಟಿದೆಯಾ?"

"ಅಯ್ಯೋ ಗುಂಡಿನವರೇ! ಅದರ ಸಲುವಾಗಿಯೇ ನಿಮ್ಮ ಬಾಗಿಲಿಗೆ ಹೋದೆನು. ಹೋದಾಗ ನಿಮ್ಮ ಬೀಡಿನ ಹುಡುಗಿ—ನಿಮ್ಮ ಸೊಸೆಯಂತೆ—ಓಡಿಬಂದು ನನ್ನ ಮೈಮೇಲೆ ಹಾರಿ ಯದ್ವತದ್ವಾ ವರ್ತಿಸಿದಳು. ಅಪ್ಪಿ ಅವುಕಿ ನೂಕಿ ಪರಚಿದಳು. ಏನು ಸೊಕ್ಕು! ಎಂತಹ ಮದವಪ್ಪಾ! ಹೆಣ್ಣು ಸೊಕ್ಕಿದರೆ ಕಾಡಿಗೆ ಬಿಡಬೇಕೆಂದು ಬಲ್ಲವರು ಹೇಳುವುದು ತಪ್ಪಲ್ಲ. ಗುಂಡಿನವರೇ, ಇಂತಹ ಹೆಣ್ಣು ಮನೆಗೊಂದು ಕಂಟಕವೇ. ಅವಳ ಬೀರವೇ! ಇದೋ ನೋಡಿರಿ ನನ್ನ ಕೈ! ಅವಳು ಮೈಮೇಲೆ ಬಿದ್ದು ಉರುಡಾಡಿಕೊಂಡುದರಿಂದ ನನ್ನ ತರಿಕತ್ತಿ ಕೈಗೆ ತೀವ್ರವಾಗಿ ಗೀರಿಕೊಂಡಿತು. ಮಾಂಸ ಚಿಮ್ಮಿತು, ರಕ್ತದ ಕಾಲುವೆ ಹರಿಯಿತು! ಅವಳ ಕಡೆಗಲ್ಲದಿದ್ದರೂ ನಿಮ್ಮ ಕಡೆ ನೋಡಿದೆನು. ಅಪಕೀರ್ತಿಗೆ ಎಡೆಕೊಡಬಾರದೆಂದು ಹೆದರಿ ನಾನು ಹೇಗೂ ಆ ಅಸಭ್ಯ ಹೆಣ್ಣಿನ ಕೈಯಿಂದ ಪಾರಾಗಿ ಓಡಿಬಂದೆನು. ವೈದ್ಯನಲ್ಲಿ ನಡೆದು ಮದ್ದು ಕಟ್ಟಿಸಿ ಮರಳುತಿದ್ದೇನಷ್ಟೆ. ನಾನು ಹೋಗುತ್ತೇನೆ. ವೇದನೆಯಿಂದ ನನಗೆ ನಿಂತುಕೊಳ್ಳುವುದಕ್ಕಾಗುತ್ತಿಲ್ಲ"

ಹೀಗೆಂದು ಕಪಟಿಯಾದ ಬಿರುಮಣ ಬನಾವಣೆಯ ನುಡಿಯನ್ನಾಡಿದನು. ಗುಂಡಿನವರ ಹೃದಯದಲ್ಲಿ ಸೊಸೆಯ ಬಗ್ಗೆ ವಿಷಜ್ವಾಲೆಯನ್ನು ಉರಿಗೊಳಿಸಿದನು. ಬಿರುಮಣ ಹೊರಟುಬಿಟ್ಟನು.

ಗುಂಡಿನವರು ಬಿರುಮಣನ ಮಾತನ್ನು ಕೇಳಿ ಹಾಹಾರಿ ದಿಗ್ಭ್ರಮೆಗೊಂಡರು. ಅವನು ನುಡಿದುದೆಲ್ಲ ಸತ್ಯವೆಂದು ನಂಬಿದರು. ಕೋಪದಿಂದ ನಖಶಿಖಾಂತವಾಗಿ ಉರಿಯತೊಡಗಿದರು. ಸರಸರನೇ ಬೀಡಿಗೆ ನಡೆದರು. ಮನೆಯೊಳಗೆ ಸಾರಿದವರೇ ಗಿಲ್ಲಿವಿನ ತುರುಬನ್ನು ಹಿಡಿದು ದರದರನೇ ಅವಳನ್ನು ಚಾವಡಿಗೆ ಎಳೆದುತಂದರು.

"ಏನೂ ಅರಿಯದ ಹುಡುಗಿ ನೀನಲ್ಲವೇ? ಸುಳ್ಳಿ ಠೀವಿ! ಮೂರು ಕಾಸಿನ ಗಯ್ಯಾಳಿ! ಕಂಡ ಕಂಡ ಗಂಡಸರ ಮೈಮೇಲೆ ಬಿದ್ದು ಚೆಲ್ಲಾಟ ಮಾಡುವೆಯಲ್ಲಾ? ಸಾಯು........ರಂ........!"

ಈ ರೀತಿ ಗರ್ಜಿಸುತ್ತ ಗಿಲ್ಲಿವಿನ ಮೈಮೇಲೆ ತನ್ನ ದೊರಗು ಕೈಯಿಂದ ಹೊಡೆದರು. ತಮ್ಮ ಕೈಬಚ್ಚುವಷ್ಟು ಪ್ರಹರಿಸಿದರು. ಕಾಲಿಂದ ಮಿಗುವಷ್ಟು ತುಳಿದರು. ಪೆಟ್ಟಿನಿಂದ ನೆಗ್ಗುನುಗ್ಗಾದ ಗಿಲ್ಲಿ ಸಹಿಸಲಾರದೆ ಒರಲ್ದು ಮೊರೆ ಇಟ್ಟಳು:

"ಅಯ್ಯೋ ಮಾವನವರೇ! ನಾನು ಏನು ಅನ್ಯಾಯ ಮಾಡಿದೆನು? ದಮ್ಮಯ್ಯ! ನಾನು ಅಸಂಗತವನ್ನೇನೂ ಮಾಡಲಿಲ್ಲ........ಹಾ ಮಾವಾ! ಹೊಡೆಯಬೇಡಿರಿ. ಕಾಶಿ ಕಪಿಲೆಗಳನ್ನು ಕೊಂದ ಪಾಪ ಉಂಟು ನಿಮಗೆ. ಬಡಿಯುವುದನ್ನು ನಿಲ್ಲಿಸಿರಿ........"

"ಇಲ್ಲಾ! ಅವುಗಳನ್ನು ಕೊಂದ ಪಾಪವನ್ನು ಕಾಶಿಗೆ ಹೋಗಿ ಪರಿಹರಿಸಿಕೊಂಡೇನು. ಆದರೆ ಸೊಕ್ಕಡರಿದ ಮಾನಹೀನೆಯಾದ ನಿನ್ನನ್ನು ಜೀವದಲ್ಲಿ ಇರಗೊಡಲಾರೆ........"

ಹೀಗೆ ಅದಟುತ್ತ ಗುಂಡಿನವರು ಎಗರಿ ಮತ್ತೂ ಬಡಿದರು.

"ಮಾವಾ! ನಿಮಗೆ ಸರ್ಪಕೊಂದ ದೋಷ ಉಂಟು. ಹೊಡೆಯಬೇಡಿರಿ"

"ಸರ್ಪಕೊಂದ ದೋಷಕ್ಕೆ ನಾಲ್ಕು ಬ್ರಾಹ್ಮಣರನ್ನು ಹಿಡಿದು "ಪಿರಿ" (ಪರಿಹಾರ) ಮಾಡಿಸುವೆನು. ಅವರಿಗೆ ಸಮಾರಾಧನೆ ಕೊಟ್ಟು ದೋಷಮುಕ್ತನಾಗುವೆನು."

"ಅಮ್ಮಯ್ಯಾ! ನನ್ನನ್ನು ಕೊಂದ ಪಾತಕ ಉಂಟು! ನನ್ನನ್ನೊಮ್ಮೆ ಬಿಡಿರಿ. ದಮ್ಮಯ್ಯ! ಮಾವಾ, ದಮ್ಮಯ್ಯ!"

ಗುಂಡಿನವರು ಒಡನೇ ಹೊಡೆಯುದನ್ನು ನಿಲ್ಲಿಸಿದರು. ನೆಟ್ಟಗೆ



ಭಾರತದ ಪಾರ್ಲಿಮೆಂಟ್ ಗೃಹ, ನವದೆಹಲಿ.

ತಾನು ಕೆಲಸ ಸಾಗಿಸುತ್ತಿದ್ದೆಡೆಗೆ— ಕಂಬಳದ ಕಟ್ಟೆಹುಣಿಗೆ— ವಾಪಾಸು ಹೋಗಿಬಿಟ್ಟರು.

ತನ್ನ ಚಿಕ್ಕ ಒಡತಿಗೆ ಯಜಮಾನನು ಹೊಡೆಯುತ್ತಿದ್ದುದನ್ನು ಬಿಲ್ಲು ದೂರ ನಿಂತು ಅನಾಥಪ ಕಳವಳ ತುಂಬಿದ ಕಂಗಳಿಂದ ಮಿಕ ಮಿಕನೇ ನೋಡುತ್ತಿದ್ದನು. ಇದೀಗ ಯಜಮಾನನು ಹೊರಟುಹೋದುದನ್ನು ಕಂಡುಕೊಂಡು ತನ್ನ ಚಿಕ್ಕ ಒಡತಿಯ ಬಳಿಗೆ ಅಸವಸನೇ ಸಾರಿದನು. ಗಿಲ್ಲು ಚಾವಡಿಯಲ್ಲಿ ಅಂಗತ್ತ ಬಿದ್ದಿದ್ದಳು. ಕಣ್ಣೀರಿನಿಂದ ಒದ್ದೆಯಾದ ಅವಳ ಮುಖಕ್ಕೆ ಬಿಲ್ಲು ತನ್ನ ಮೂತಿಯನ್ನು ಚಾಚಿ ಸಹಾನುಭೂತಿಯಿಂದ ಸವರಿಸಿದನು. ಗಿಲ್ಲು ಅಶ್ರುಪೂರಿತವಾದ ಕಂಗಳಿಂದ ತನ್ನ ಆತ್ಮೀಯನಾದ ಬಂಧುವನ್ನೊಮ್ಮೆ ನಿಟ್ಟಿಸಿದಳು. ತನ್ನ ಸುಖದಲ್ಲಿ ಪಾಲುಗಾರ, ದುಃಖದಲ್ಲಿ ದುಃಖಪಟ್ಟು ಸಂತಯಿಸುವವನು— ಬಿಲ್ಲುವಲ್ಲದೆ ಮತ್ತಾರಿದ್ದಾರೆ? ಅವಳು ಎದ್ದು ಕೂತಳು. ಬಿಲ್ಲುವನ್ನು ತನ್ನೆದೆಗೆ ಬರಸೆಳೆದು ಅಪ್ಪಿಕೊಂಡಳು. ಅವಳ ದುಃಖವು ಒತ್ತರಿಸಿತು. ಆ ಸ್ಥಿತಿಯಲ್ಲಿ ಕೊಂಚ ಕ್ಷಣಗಳು ಸರಿದುಕೊಂಡವು. ಅಷ್ಟರಲ್ಲಿ ಅವಳಿಗೆ ಥಟ್ಟನೇ ಏನೋ ಜ್ಞಾಪಕವಾದಂತಾಯಿತು. ಸಾವರಿಸಿ ನಿಂತುಕೊಂಡಳು.

"ಹಾ! ನನ್ನ ಮಾವನವರು ಬೆಳಗಿನ ಗಂಜಿಯನ್ನು ಉಣ್ಣದೆ ಹೋಗಿಬಿಟ್ಟರು, ನನ್ನ ಬಗ್ಗೆ ಅಲ್ಲಸಲ್ಲದ ದೂಷಣೆಯನ್ನು ಕೇಳಿ ಸಿಡಿಮಿಡಿದು ನನಗೆ ಹೊಡೆದು ಬಡಿದು ಹಾಕಿ ಹೋದರು. ಅಯ್ಯೋ ನನ್ನ ಪ್ರಾರಬ್ಧವೇ!"

ಒಡನೇ ಲಗುಬಗೆಯಿಂದ ಅಡಿಗೆಯ ಕೊಠಡಿಗೆ ಸರಿದಳು. ಮಧ್ಯಾಹ್ನದ ಅಡಿಗೆಯನ್ನು ಬೇಗಬೇಗನೇ ಸಿದ್ಧಪಡಿಸಿದಳು.

ಗಿಲ್ಲುವಿಗೆ ಏಳು ಮಂದಿ ಅಣ್ಣಂದಿರಿದ್ದರು. ಅಣ್ಣಂದಿರು ಪ್ರತ್ಯೇಕವಾದ ತಮ್ಮ ಸ್ವಂತ ಮನೆಯಲ್ಲಿ ಒಟ್ಟಿಗೇ ವಾಸಿಸುತ್ತಿದ್ದರು. ಮಾವನಾದ ಗುಂಡಿನವರ ಕೆಲಸಕಾರ್ಯಗಳಿಗೆ ಆಗಾಗ್ಯೆ ಬಂದುಕೊಂಡು ನೆರವಾಗುತ್ತಿದ್ದರು. ಅಂದು ಮಾವನ ಕಂಬಳದ ಕಟ್ಟೆಹುಣಿಯಲ್ಲಿ ಕೆಲಸ ಮಾಡುತ್ತಿದ್ದ ಅವರು ಮಧ್ಯಾಹ್ನದ ಊಟಕ್ಕೆ ಗುಂಡಿಯಬೀಡಿಗೆ ಬಂದರು. ಗಿಲ್ಲು ಅಣ್ಣಂದಿರಿಗೆ ಊಟವಿಕ್ಕಿದಳು.

"ನಾನು ನಿಮಗೆ ಇನ್ನು ಊಟವಿಕ್ಕುವುದಕ್ಕೆ ಇದ್ದೇನೆಯೇ? ಹಾ ನಾನು ಹತಭಾಗ್ಯೆ!"

ಹೀಗೆಂದು ಕಡೇ ಅಣ್ಣನಿಗೆ ಅನ್ನದ ಬಟ್ಟಲನ್ನು ತಂದಿಡುವಾಗ ನಿಟ್ಟುಸಿರು ಬಿಡುತ್ತ ಗಿಲ್ಲು ಉದ್ಗರಿಸಿದಳು. ಬಟ್ಟಲಿಗೆ ಕೈ ಇಕ್ಕಿದ ಏಳು ಮಂದಿ ಅಣ್ಣಂದಿರು ಸಟಕ್ಕನೇ ಎದ್ದುನಿಂತು ತಮ್ಮ ತಂಗಿಯನ್ನು ಗಂಭೀರ್ಯವಾಗಿ ಟಕಮಕನೇ ನೋಡಲಾರಂಭಿಸಿದರು. ತಂಗಿಯ ವಿಷಣ್ಣ ಮುಖಭಂಗಿ ಅವರಿಗೆ ಮತ್ತಷ್ಟು ಗಾಬರಿಯನ್ನು ಉಂಟುಮಾಡಿತು.

"ತಂಗೀ, ನಿನ್ನ ಮಾತಿನ ಅರ್ಥವೇನು? ನಿನ್ನ ಮುಖವೇಕೆ ಬಸಳೆಯಂತೆ ಬಾಡಿಯದೆ? ನೀನು ನೊಂದು ಮರುಗಿಕೊಂಡಂತೆ ತೋರುತ್ತಿರುವೆಯಲ್ಲಾ? ನಿನ್ನ ದುಃಖದ ಕಾರಣವೇನು?"

ಈ ರೀತಿ ಅಣ್ಣಂದಿರು ತೀವ್ರವೇ ಪ್ರಶ್ನಿಸಿದಾಗ ಗಿಲ್ಲು ಮುಗುಳು ನಕ್ಕಳು. ನೀರಿನ ಪಾತ್ರೆಯು ಒಲೆಯ ಮೇಲೆ ಕಳಚಿಬಿದ್ದು ಒಲೆ ಒದ್ದೆಯಾಗಿಬಿಟ್ಟಿತೆಂದೂ, ಅಲ್ಲದೆ ಸವುದೆ ಹಸಿ ಇದ್ದುದರಿಂದ ತನಗೆ ಊದಿ ಊದಿ ಬೆಂಕಿಮಾಡಬೇಕಾಯಿತೆಂದೂ, ಹಾಗಾಗಿ ತನ್ನ ಮುಖ ಬಾಡಿ ಕುಂದಿದಂತೆ ತೋರುವುದೆಂದೂ ಅಣ್ಣಂದಿರಿಗೆ ಸುಳ್ಳಿನ ಗಾಳಿ ಗಂಟೆನ್ನೊಂದನ್ನು ಬಿಚ್ಚಿದಳು.

ಅಣ್ಣಂದಿರು ಬೇಕೋ ಬೇಡವೋ ಎನ್ನುವ ರೀತಿಯಲ್ಲಿ ಅರೆಮನಸ್ಸಿನಿಂದ ಊಟಮಾಡಿ ಕೆಲಸಕ್ಕೆ ಹೊರಟುಬಿಟ್ಟರು. ಗೇಯುವ ಮುಗ್ಗೇರರು ಬಂದರು. ಗಂಜಿಕುಡಿದು ಬರಲು ಗುಂಡಿನವರು ಅವರನ್ನು ಕಂಬಳದ ಕಟ್ಟೆಹುಣಿಯಿಂದ ಮನೆಗೆ ಕಳುಹಿಸಿದ್ದರು. ಅವರ "ಕೊಂಬ" (ಚತುಷ್ಕೋಣದ ಹಾಳೆಯ ಮುಟ್ಟಲೆ)ಗೆ ಗಿಲ್ಲು ಗಂಜಿಯನ್ನು ಸುರಿಯುವಾಗ, ಅವರೂ ಅವಳ ಬಾಡಿ ಬತ್ತಿದ ಮುಖವನ್ನು ನಿಟ್ಟಿಸಿ ಕಾತುರಾತುರದಿಂದ ವಿಚಾರಿಸಿದರು. ಅವರಿಗೂ ತನ್ನ ದುಃಖದ ಕಾರಣವನ್ನು ಹೇಳದೆ ಹಾರಿಕೆಯ ಉತ್ತರವನ್ನಿತ್ತಳು.

ಗಿಲ್ಲು ಮುಗ್ಗೇರರು ಹೊರಟುಹೋದ ಮೇಲೆ ಒಳಗೆ ಸರಿದಳು. ಬಿಲ್ಲು ಅವಳು ಹೋದಲ್ಲಿಗೆ ನೆರಳಿನಂತೆ ಅನುಸರಿಸಿ ಹೋಗುತ್ತಿದ್ದನು. ಗಿಲ್ಲು ಅವನಿಗೂ ಅವನ ಬಟ್ಟಲನ್ನು ಮುಂದೆ ತಂದಿಟ್ಟು ಅದಕ್ಕೆ ಗಂಜಿ ಬಡಿಸಿದಳು. ಬಿಲ್ಲು ಅದನ್ನು ಮೂಸಿಯೂ ನೋಡಲಿಲ್ಲ. ಮಾವನಾದ ಗುಂಡಿನವರ ಹಾದಿ ನೋಡಿದಳು. ಅವರು ಬಂದುಕೊಳ್ಳಲೇ ಇಲ್ಲ. ಗಿಲ್ಲು ಈ ರೀತಿಯಾಗಿ ಸಂತಾಪದ ಮೊಲುಧ್ವನಿ ಉಸುರಿದಳು:

"ಹಾ! ನನ್ನ ಮಾವ ಅನ್ನದ ಮೇಲೆಯೂ ಕೋಪ ತಾಳಿದರೇ?"

ಗಿಲ್ಲು ಕಲಂಬಿ ಇರುವ ಕೊಠಡಿಗೆ ಹೋಗಿ ಅದರ ಬಾಯಿ ತೆರೆದಳು. ತನ್ನ ಚಿನ್ನಾಭರಣಗಳನ್ನು ತುಂಬಿಸಿಟ್ಟ ಕರಡಿಗೆಯನ್ನು ಹೊರತೆಗೆದಳು. ಕಲಂಬಿಯ ಬಾಗಿಲನ್ನು ಹಾಗೆಯೇ ಮರಳಿ ಮುಚ್ಚಿದಳು. ಕರಡಿಗೆಯನ್ನು ಹಿಡಿದುಕೊಂಡು ಬಾವಿಯ ಕಟ್ಟೆಗೆ ನಡೆದಳು. ಚಿಕ್ಕ ಒಡತಿಯ

ವಿಚಿತ್ರ ವರ್ತನೆಯು ಬಿಲ್ಲುವನ್ನು ತಲ್ಲಣಗೊಳಿಸದಿರಲಿಲ್ಲ. ಬಿಲ್ಲು ಗಿಲ್ಲುವನ್ನು ಹಿಂಬಾಲಿಸಿದನು.

ಗಿಲ್ಲು ಬಾವಿಯ ಮಗ್ಗುಲಲ್ಲಿ ಒಂದು ಗುಳಿಯನ್ನು ತೋಡಿದಳು. ಗುಳಿಯೊಳಗೆ ಕರಡಿಗೆಯನ್ನು ಇಟ್ಟು, ಅದರ ಮೇಲೆ ಮಣ್ಣನ್ನು ಮುಚ್ಚಿದಳು. ಆಗ ಬಿಲ್ಲು ನೆಟ್ಟಗೆ ನಿಂತು ತನ್ನೆರಡು ಕಾಲನ್ನು ಗಿಲ್ಲುವಿನ ಪಕ್ಕಕ್ಕೆ ಚಾಚಿ ಕುಳಿತು ಕುಯ್ ಕುಯ್ ಎನ್ನುತ್ತ ಕೂಗಲಾರಂಭಿಸಿದನು. ಗಿಲ್ಲು ಬಿಲ್ಲುವನ್ನು ಪ್ರೇಮಮಿಶ್ರಿತ ದುಗುಡದಿಂದ ಅಪ್ಪಿಕೊಂಡು ಅವನಿಗೆ ಹೀಗೆ ನುಡಿದಳು:

"ನನ್ನ ಪ್ರೀತಿಯ ಬಿಲ್ಲೂ! ಈ ನಿಂದ್ಯಾಜೀವನದಿಂದ ಮುಕ್ತಳಾಗಿ ಅಳಿದವರ ಊರಿಗೆ ಹೋಗಿ ಸೇರುವೆನು. ನೀನೊರ್ವನೇ ಪ್ರತ್ಯಕ್ಷದರ್ಶಿ! ನನ್ನ ಸದಾಚಾರವು ನಿನಗೊಬ್ಬನಿಗೆ ಮಾತ್ರ ಖಚಿತವಾಗಿಕೊಂಡಿದ್ದರೆ ಸಾಕು. ಬಿಲ್ಲೂ, ಮಾನ ಹೆಣ್ಣಿನ ಆಭರಣ, ಜೀವತಂತು. ಅದಕ್ಕೆ ಭಂಗ ತಟ್ಟಿದರೆ ಮಾನವತಿಯು ಪ್ರಾಣವನ್ನಾದರೂ ತೆರುವಳು; ಮಾನಹಾನಿಯಾಗುವುದನ್ನು ಸರ್ವಥಾ ಸೈರಿಸಲಾರಳು........ಬಿಲ್ಲೂ! ನಾನಿಲ್ಲಿ ಹೂತಿಟ್ಟ ಚಿನ್ನಾಭರಣದ ಕರಡಿಗೆಯನ್ನು ನನ್ನ ಅಣ್ಣಂದಿಯರಿಗೆ ತೋರಿಸು. ಬಿಲ್ಲೂ! ನಿನಗೆ ನನ್ನ ಅನಂತಾನಂತ ಪ್ರೀತಿಗಳು! ನಿನಗೆ ದೇವರು ಒಳ್ಳೆದು ಮಾಡಲಿ!"

ಬಿಲ್ಲುವನ್ನು ಪುನರಪಿ ಮುದ್ದಾಡಿದಳು. ಬಳಿಕ ಬಾವಿಯ ದಂಡೆಯನ್ನೇರಿದಳು. ಆಕಾಶದ ಕಡೆಗೆ ಕೈಗಳನ್ನೆತ್ತಿ ವಂದಿಸಿದಳು. ಪರಿಕ್ಷಣದಲ್ಲಿ ಬಾವಿಯೊಳಗೆ ದುಢುಮ್ಮನೇ ಹಾರಿಕೊಂಡಳು!

ಬಿಲ್ಲು ಕಂಬಳದ ಕಟ್ಟಹುಣಿಗೆ ಒಂದೇ ಉಸುರಿಗೆ ಓಡಿದನು. ಅಲ್ಲಿ ಕೆಲಸಕಾರ್ಯದಲ್ಲಿದ್ದ ಗುಂಡಿನವರು ಮತ್ತು ಗಿಲ್ಲುವಿನ ಅಣ್ಣಂದಿಯರ ಮುಂದೆ ನೆಗೆನೆಗೆದು ಬೊಗಳಲಾರಂಭಿಸಿದನು. ಮರಳಿ ಅಲ್ಲಿಂದ ಓಡಿಬಂದು ಬಾವಿಯ ದಂಡೆಯ ಮೇಲೆ ನಿಂತನು. ಕೇಳುವವರ ಕಿವಿ ಒಡಬಡಿದುಕೊಳ್ಳುವಂತಹ ಗರ್ಜನೆ! ಬಾವಿಕಟ್ಟೆಯಿಂದ ಕಂಬಳದ ಕಟ್ಟಹುಣಿಗೆ, ಅಲ್ಲಿಂದ ಇಲ್ಲಿಗೆ—ಈ ರೀತಿ ನಾಲ್ಕೈದು ಬಾರಿ ಓಡಾಡಿಕೊಂಡ ನಾಯಿಯ ವಿಚಿತ್ರ ವರ್ತನೆ ಮತ್ತು ಬೊಗಳಾಟವನ್ನು ವೀಕ್ಷಿಸಿದ ಗಿಲ್ಲುವಿನ ಅಣ್ಣಂದಿಯರು ತೀರಾ ಅಚ್ಚರಿ ಮತ್ತು ಶಂಕೆಪಟ್ಟುಕೊಂಡಂತವರಾಗಿ ತಮ್ಮ ಹಾರೆ ಗುದ್ದಲಿಗಳನ್ನು ಒತ್ತಟ್ಟಿಗೆ ಎಸೆದು ಬೇಡಿಗೆ ಓಡಿಬಂದರು. ಅವರನ್ನು ಹಿಂಬಾಲಿಸಿ ಗುಂಡಿನವರು ಬಂದರು. ಬಿಲ್ಲು ಅವರ ಸುತ್ತು ಸುತ್ತು ತಿರುಗಿ ಒಮ್ಮೆ ಬಾವಿಯ ದಂಡೆಗೂ, ಮಗದೊಮ್ಮೆ; ಅವರ ಮಧ್ಯಕ್ಕೂ ನೆಗೆದು ಕೂಗಿಕೊಳ್ಳುತ್ತ ಸರಿದಾಡುತ್ತಿದ್ದನು. ಅಣ್ಣಂದಿಯರು ಬೀಡಿನೊಳಗೆ ತಂಗಿಯನ್ನು ಹುಡುಕಾಡಿದರು. ಗಿಲ್ಲು ಕಾಣಿಸಲಿಲ್ಲ. ಮತ್ತೆ ಅಲ್ಲಿ ಇಲ್ಲಿ ಸಂದುಗೊಂದುಗಳಲ್ಲಿ ಶೋಧಿಸಿದರು. ಗಿಲ್ಲುವಿನ ಅದೃಶ್ಯವು ಕ್ಷಣಕ್ಷಣಕ್ಕೂ ಅವರ ಭಯೋದ್ವೇಗವನ್ನು ಹೆಚ್ಚಿಸಿತು.

ಬಾವಿಯೆಡೆಗೆ ತಮ್ಮನ್ನು ಕರೆದ್ಯೊಯ್ಯುದಕ್ಕೆ ಎಳಸುವ ಹಾಗೆ ಬಿಲ್ಲು ವರ್ತಿಸಿಕೊಳ್ಳುವ ವಿಲಕ್ಷಣ ಹಾವಭಾವದ ಇಂಗಿತವು ಅಣ್ಣಂದಿಯರ ಲಕ್ಷ್ಯವನ್ನು ಸೆಳೆಯಿತು. ಅವರು ಬಾವಿಯ ಕಟ್ಟೆಗೆ ಸರಿದು ಬಾವಿಯೊಳಗೆ ಇಣಿಕಿದರು. ತಕ್ಷಣ ಬಿಲ್ಲು ಬಾವಿಯೊಳಗೆ ದುಮುಕಿ ಗಿಲ್ಲುವಿನ ದೇಹವನ್ನು ನೀರಿನೊಳಗಿಂದ ಹೊರಕ್ಕೆ ಸೆಳೆದನು. ನೀರಿನ ಮೇಲೆ ಹಿಂಗಾರದ ಹಾಳೆಯು ತೇಲಿಕೊಂಡಂತೆ ಗಿಲ್ಲುವಿನ ದೇಹವು ಮೇಲೆ ನಿಂತವರಿಗೆ ಗೋಚರಿಸಿತು. ಎಲ್ಲರ ಬಾಯಿಂದ ಒಮ್ಮೆಲೇ ಹಾಹಾಕಾರದ ಆರ್ತರವವು ಹೊಮ್ಮಿತು. ತಡಮಾಡದೆ ಹೊಸ ಹಗ್ಗ ಬುಟ್ಟಿಗಳನ್ನು ಬಾವಿಯೊಳಗೆ ಇಳಿಸಲಾಯಿತು. ಅಣ್ಣಂದಿಯರಿಬ್ಬರು ಕೆಳಗೆ ಇಳಿದರು. ಗಿಲ್ಲುವಿನ ದೇಹವನ್ನು ಬಾವಿಕಟ್ಟೆಯ ಮೇಲಕ್ಕೆ ಸೆಳೆದರು. ಚಾವಡಿಗೆ ಕೊಂಡೊಯ್ದು ಮಲಗಿಸಿದರು. ಮುಡಿ ಮುಡಿ ಅಕ್ಕಿ ತಂದು ಸುರಿದು ಸ್ಪಂದ ಹೀನವಾದ ಗಿಲ್ಲುವಿನ ದೇಹವನ್ನು ಅಕ್ಕಿಯಲ್ಲಿ ಹೊರಳಿಸಿದರು. ಆದರೆ ಗಿಲ್ಲುವಿನ ಪ್ರಾಣವು ಪುನರಾಗಮಿಸಲಿಲ್ಲ. ಅವಳ ಪ್ರಾಣವು ಕಾಯ ಬಿಟ್ಟು ಕೈಲಾಸ ಸಂದಿತ್ತು!

ಜನರು ನೆರೆದರು. ಚಾವಡಿಯ ನಡುವಂತರದಲ್ಲಿ ಮಲಗಿಸಿದ ಗಿಲ್ಲುವಿನ ಶವವು ಹೊನ್ನಗೊಂಬೆಯ ಪರಿಯಲ್ಲಿ ಹೊಳೆಯುತ್ತಿತ್ತು! ಈ ಹೃದಯದ್ರಾವಕ ದೃಶ್ಯವು ನೆರೆದವರ ಕರುಣಾಂಬು ಹರಿಸಿತು. ಬಿಲ್ಲು ಚಿಕ್ಕ ಒಡತಿಯ ದೇಹದ ಪಕ್ಕದಲ್ಲಿ ಕೂತುಕೊಂಡು ಕಣ್ಣೀರು ಮಿಡುಕುತ್ತ ತನ್ನ ಅಂತರಂಗದ ಸಂತಾಪಾತಿರೇಕವನ್ನು ವ್ಯಕ್ತಪಡಿಸುತ್ತಿದ್ದನು. ಗಿಲ್ಲುವಿನ ದುರಂತವು ಅಣ್ಣ-ಮಾವಂದಿಯರ ಹೃದಯದಲ್ಲಿ ಉತ್ಕಟ ಕೋಲಾಹಲವನ್ನುಂಟುಮಾಡಿತ್ತು. ಎದೆ ಎದೆ ಬಡಿದುಕೊಂಡು ರೋಧನಮಾಡುತ್ತಿದ್ದರು. ಎಷ್ಟು ಅತ್ತು ಕೂಗಾಡಿದರೂ ಹೋದವಳು ಮರಳಿಬರುತ್ತಾಳೆಯೇ? ಬಂಧುಗಳಿಗೆ ಕೂಡಿದಂತಹ ಮಂದಿಗಳು ಸಮಾಧಾನೋಕ್ತಿಯನ್ನು ಹೇಳಿದರು.

ಶವಕ್ಕೆ ಸೀರೆಕುಪ್ಪಸ ಉಡಿಸಿ, ಹೂಮುಡಿಸಿ ಅಲಂಕರಿಸಿದರು. ಅಣ್ಣಂದಿಯರು ಹೋಗಿ ಕಲಂಬಿಯ ಬಾಯಿ ತೆರೆದು ಹುಡುಕುವಾಗ ಗಿಲ್ಲುವಿನ ಚಿನ್ನಾಭರಣದ ಕರಡಿಗೆಯು ಕಾಣೆ! ಅವರು ಮಾವನಾದ ಗುಂಡಿನವರನ್ನು ತರಾಟೆಗೆ ತೆಕ್ಕೊಂಡರು.



"ನಮ್ಮ ತಂಗಿಯ ಚಿನ್ನಾಭರಣಗಳನ್ನು ಏನು ಮಾಡಿದಿರಿ?"

"ನಾನರಿಯೆ, ಮಕ್ಕಳೇ. ನನ್ನ ಸೊಸೆಯ ಚಿನ್ನಾಭರಣಗಳನ್ನು ನಾನೇತಕ್ಕೆ ಅಪಹರಿಸಲಿ? ನನ್ನ ವಜ್ರದಂತಹ ಸೊಸೆ ಹೋದಳಂತೆ, ಮತ್ತೆ ಇದರ ಮೇಲೆ ನನಗೆ ಆಸೆಯೇ?"

ಆಗ ಬಿಲ್ಲು ಅಣ್ಣಂದಿಯರ ಸುತ್ತು ಸುತ್ತು ತಿರುಗಿ ಬೊಗಳಿಕೊಳ್ಳುತ್ತ ಬಾವಿಕಟ್ಟೆಗೆ ಓಡಿದನು. ಬಿಲ್ಲುವಿನ ಬುದ್ಧಿಜಾಣ್ಮೆಯನ್ನು ಅರಿತುಕೊಂಡ ಅಣ್ಣಂದಿಯರು ಪ್ರಕೃತದ ಪರಿಸ್ಥಿತಿಯನ್ನು ಲೆಕ್ಕಿಸಿ ಅವನನ್ನು ಹಿಂಬಾಲಿಸಿದರು. ಬಾವಿಕಟ್ಟೆಯಲ್ಲಿ ಬಿಲ್ಲು ನೆಲವನ್ನು ಕಾಲಿಂದ ಕೆದಕುತ್ತ ಮಣ್ಣನ್ನು ಹೊರಚೆಲ್ಲಿದನು. ಮಣ್ಣಿನ ಒಳಗಿಂದ ಕರಡಿಗೆಯನ್ನು ಬಾಯಿಂದ ಹೆಕ್ಕಿ ಅಣ್ಣಂದಿಯರ ಕೈಗೆ ತಂದೊಪ್ಪಿಸಿದನು. ನಗಗಳ ಕರಡಿಗೆ ದೊರಕಿದುದರಿಂದ ಎಲ್ಲರೂ ಸಮಾಧಾನಪಟ್ಟರು. ಬಿಲ್ಲುವಿನ ಸ್ತುತ್ಯಕಾರ್ಯವನ್ನು ಮನದಲ್ಲೇ ಶ್ಲಾಘನಿಸಿದರು.

ಬಾಕಿಮಾರಿನ ಅಶನದ ಗದ್ದೆಯಲ್ಲಿ ಮಸಣದ ಕಾಷ್ಠವನ್ನು ಊರಿದ್ದರು. ಶೃಂಗರಿಸಿದ ಶವವನ್ನು ಚಿತಾಭೂಮಿಗೆ ಒಯ್ದರು.

ನರನಿಗಿಂತಲೂ ಹೆಚ್ಚು ನಾಯಿಗೆ ತೀಕ್ಷ್ಣಬುದ್ಧಿ ಅನ್ನುತ್ತಾರೆ. ಮನುಷ್ಯನಿಗೆ ನಾಯಿಗಿಂತ ಪ್ರಮಾಣಿಕನಾದ ಇನ್ನೊಬ್ಬ ಮಿತ್ರನು ಸಿಗಲಾರನು. ಕೃತಜ್ಞತೆ ಅದರ ಶ್ರೇಷ್ಠ ಗುಣ!

ನೋಡು! ನೋಡು! ಬಿಲ್ಲು ಉದ್ದಕ್ಕೂ ಕ್ಷಣ ಕ್ಷಣಕ್ಕೂ ಹೊಂಚು ಹಾಕುತ್ತಿದ್ದನು, ಬೇಹು ನೋಡುತ್ತಿದ್ದನು!

ಗಿಲ್ಲುವಿನ ಹೆಣಕ್ಕೆ ಜಲತರ್ಪಣ ಕೊಟ್ಟರು. ಹೆಣವನ್ನು ಹೊತ್ತುಕೊಂಡು ಕಾಷ್ಠಕ್ಕೆ ಮೂರು ಸುತ್ತು ಪ್ರದಕ್ಷಿಣೆ ತೆಗೆದರು. ಬಳಿಕ ಕಳೇಬರವನ್ನು ಕಾಷ್ಠದ ಮೇಲಿಟ್ಟರು. ಅಷ್ಟರಲ್ಲಿ ಸನಿಯದಲ್ಲಿದ್ದ ಬಿಲ್ಲು ಇದ್ದಕ್ಕಿದ್ದಹಾಗೆ ಗಟ್ಟಿಸಿ ಬೊಗಳುತ್ತ ರಂಪಾಟವೆಸಗಿದನು! ಸರ್ರನೇ ಓಡಿದನು. ಅನತಿದೂರದಲ್ಲಿ ಬೈಲ ಸಂದಿನಲ್ಲಿರುವ ಬಿರುಮಣನ ಮನೆಬಾಗಿಲಿಗೆ ಸಾರಿದನು. ಪುನಃ ಚಿತಾಭೂಮಿಗೆ ಮರಳಿದನು. ಈ ರೀತಿಯಾಗಿ ಬಿಲ್ಲು ಮೇಲಿಂದ ಮೇಲೆ ಅತ್ತಿತ್ತ ಓಡಾಡಿ ವರ್ತಿಸುವುದನ್ನು ಕುತೂಹಲಾತುರದಿಂದ ದಿಟ್ಟಿಸಿದ ಅಣ್ಣಂದಿಯರು, ಬಿಲ್ಲುವಿನ ಈ ಪರಿತೊಂದು ತರದ ಇಂಗಿತಭಾವವದೇನಾಗಿರಬಹುದೆಂದುಕೊಂಡು ತಲೆಕೆರೆದುಕೊಂಡರು. ಬಿಲ್ಲು ಉದ್ರೇಕಾವೇಶದಿಂದ ಧಾವಿಸಿಕೊಂಡು ಬಿರುಮಣನ ಮನೆಯ ಮುಂದೆ ಜಳ್ಳರಿಸಿ ಪರಾಕ್ರಮಿಸುವುದನ್ನು ಅಣ್ಣಂದಿಯರು ನೋಡುವಾಗ, ಗಿಲ್ಲುವಿನ ದುರಂತಕ್ಕೆ ಬಿರುಮಣನ ಕೈವಾಡವು ಇದ್ದಿರಬಹುದೆಂಬುದಾಗಿ ಅನುಮಾನಿತರಾಗಿ ತಮ್ಮಲ್ಲಿ ತರ್ಕಿಸಿಕೊಂಡರು. ಶವದಹನದ ಕಾರ್ಯವನ್ನು ಮುಂದುವರಿಸಲಿಲ್ಲ. ನೆಟ್ಟಗೇ ಬಿಲ್ಲುವನ್ನು ಅನುಸರಿಸಿ ಬಿರುಮಣನ ಮನೆಬಾಗಿಲಿಗೆ ನಡೆದರು.

"ಬಿರುಮಣಾ! ಬಿರುಮಣಾ! ಹೊರಗೆಬಾ." ಎಂದು ಹೊರಗಡೆ ನಿಂತು ಕರೆದರು.

ಒಳಗಿನಿಂದ ಬಿರುಮಣನು ಒದರಿದನು:

"ನಾನು ಮಲಗಿದ್ದೇನೆ. ತರಿಕತ್ತಿ ತಾಗಿ ನನ್ನ ಕೈಗೆ ತೀವ್ರ ನೋವು! ಜ್ವರ ಜೇರಿ ಬರುತ್ತಿದೆ........"

"ನಿನ್ನ ಜ್ವರಗಿರ ಇರಲಿ! ಬರುವೆಯಾ ಇಲ್ಲವೇ ಕಟ್ಟಿ ಗುದ್ದಿ ಎಳೆದುಕೊಂಡು ಹೋಗಬೇಕೇ?"

ಮತ್ತೆ ನಿರುತ್ತರ! ಬಿರುಮಣ ಹೊರಗೆ ಬರಲಿಲ್ಲ. ಅಣ್ಣಂದಿಯರು ಒಳಗೆ ನುಗ್ಗಿದರು. ಮೂಲೆಯಲ್ಲಿ ಮುದುಡಿಕೊಂಡು ಥರಥರನೇ ನಡುಗುತ್ತಿದ್ದ ಬಿರುಮಣನನ್ನು ಹೊಡೆದುಬಡಿದು ಕೈಕಾಲುಗಳನ್ನು ಕಟ್ಟಿ ಬಾಕಿಬಾರಿನ ಮಸಣದಕೋಡಿಗೆ ಎತ್ತಿಕೊಂಡು ತಂದು ದೊಪ್ಪನೇ ನೆಲಕ್ಕೆ ಕೆಡವಿದರು. ಬಿಲ್ಲು ಬಿರುಮಣನ ಮುಂದುಗಡೆ ನಿಂತುಕೊಂಡು ಅವನನ್ನು ಕೊಂದು ನುಚ್ಚುನೂರು ಮಾಡಿ ತಿನ್ನುವಂತೆ ಭಯಾನಕರವಾಗಿ ಬೊಗಳುತ್ತಿದನು.



ಶ್ರೀ ಯು. ಶ್ರೀನಿವಾಸ ಮಲ್ಯರವರು.

"ಬಿರುಮಣಾ! ಸತ್ಯ ಹೇಳು. ನಾಯಿ ನಿನ್ನ ಮೇಲೆ ಉಗ್ರವೈರ ಸಾಧನೆಯನ್ನು ಸಾಧಿಸುವ ಹಾಗೆ ವಿಚಿತ್ರವಾಗಿ ವರ್ತಿಸುತ್ತಿದೆಯಲ್ಲಾ? ನಮ್ಮ ತಂಗಿ ಗಿಲ್ಲುವಿಗೆ ನೀನು ಅನ್ಯಾಯವನ್ನೇನಾದರೂ ಎಸಗಿದೆಯಾ? ಹೇಳು. ಸಂಕೋಚಮಾಡಬೇಡ."

ಆದರೆ ಬಿರುಮಣ ಬಾಯಿ ತೆರೆಯಲಿಲ್ಲ ಹೆದರಿಕೊಂಡು ಅವನ ಸರ್ವಾಂಗವೂ ಜೆವತು ಒದ್ದೆಯಾಗಿತ್ತು. ಕೂಡಿದ ಗಣ್ಯವ್ಯಕ್ತಿಗಳು ಅವನ ಬಾಯಿಯನ್ನು ಬಿಡಿಸುವುದಕ್ಕೆ ಎಷ್ಟೆಷ್ಟು ಹವಣಿಸಿದಾಗ್ಯೂ ಅವನು ಪಿಟ್ಕೆನ್ನಲಿಲ್ಲ. ಸೇರಿದ ಜನಸಾಗರವು ಅತ್ಯಂತ ಕುತೂಹಲಕಾರಕವಾದ ಈ ಪ್ರಕರಣವನ್ನು ಎವೆಯಿಕ್ಕದೆ ಮಂತ್ರಮುಗ್ಧತೆಯಿಂದ ನಿರೀಕ್ಷಿಸುತ್ತಿತ್ತು!

ಬಿರುಮಣನ ಮೂಕವೃತ್ತಿಯೇ ಅವನ ದೂಷಿತ ಅಂತರಂಗದ ರಹಸ್ಯ, ಅಪಕೃತ್ಯದ ಧ್ವನಿತಾರ್ಥ, ಅಪರಾಧದ ದೃಢೀಕರಣ! ಮೌನವು ಅಪರಾಧದ ಅಂಗೀಕಾರ ಲಕ್ಷಣವೆಂದು ಕೂಡ ನಿರ್ಣಯಿಸಲಿಕ್ಕೆ ಬರುವುದು! ಗಿಲ್ಲುವಿನ ಮಾನಹಾನಿಯಾಗಿರಬಹುದು, ಕೊಲೆಯಾಗಿರಬಹುದು, ಆತ್ಮಹತ್ಯವಾಗಿರಬಹುದು. ಏನಿದ್ದರೂ ಅದಕ್ಕೆ ಬಿರುಮಣನ ದುಷ್ಟವೃತ್ತಿಯೇ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಕಾರಣ! ಮೂಕಪ್ರಾಣಿ ಮಾತ್ರವಾದರೂ ಬಿಲ್ಲು, ಮಾತುಬಲ್ಲ ಅಪರಾಧಿ ಮನುಷ್ಯನೊಬ್ಬನನ್ನು ಎಷ್ಟೊಂದು ಬುದ್ಧಿಜಾಣ್ಮೆಯಿಂದ ಬಯಲಿಗೆಳೆದನು! ಬಿರುಮಣನ ಅನ್ಯಾಯದ ಜಾಡುಹಿಡಿದೇ ಅವನನ್ನು ಅಪರಾಧಿ ಸ್ಥಾನಕ್ಕೆ ಸೆಳೆದನು. ಬಿರುಮಣನ ಅಪಾದನೆಯ ಸಮರ್ಥನೆಗೆ ಬಿಲ್ಲುವೇ ಪ್ರತ್ಯಕ್ಷಸಾಕ್ಷ್ಯ ಮತ್ತು ಪ್ರಬಲ ರುಜುವಾತು ಎಂಬುದಾಗಿ ನ್ಯಾಯವೇತ್ತರಾದ ಪಂಚರು ಅಲ್ಲಿ ಪರಾಮರ್ಶಿಸಿದರು. ಜನಸ್ತೋಮವು ಅನ್ಯಾಯಿಯನ್ನು ದಂಡಿಸಬೇಕೆಂದು ಒತ್ತಾಯಿಸಿತು. ಧೂರ್ತನನ್ನು ಸಜೀವವಾಗಿ ದಹನಮಾಡಿ ಬಿಡಬೇಕೆಂದು ಅರ್ಭಟಿಸಿತು!

ಬಿರುಮಣನನ್ನು ಸಜೀವಸುಡುವುದಕ್ಕಾಗಿ ತಗ್ಗಿನ ಗದ್ದೆಯಲ್ಲಿ 'ಕಲ್ಲಕನಪಡಿ' (ವಿಷಕರಸವುದೆ ಬೊರಲುಗಳು)ಯ ಕಾಷ್ಠ ರಚಿಸಿದರು. ಬಂಧನದಲ್ಲಿದ್ದ ಬಿರುಮಣನನ್ನು ಎತ್ತಿಕೊಂಡು ಹೋಗಿ ವಿಷದ ಕಾಷ್ಠದ ಮೇಲಿಡಲಾಯಿತು. ಅಣ್ಣಂದಿಯರು ತಮ್ಮ ನಂಬಿಕೆಯ ನಾಲ್ಕು ಮಂದಿ ದಾಂಡಿಗರಾದ ಗೆಳೆಯರನ್ನು ಅಲ್ಲಿ ನಿಲ್ಲ ಹೇಳಿ, ಆ ಅಪರಾಧಿ ಬಿರುಮಣನ ಜೀವಂತದಹನವನ್ನು ತಡಮಾಡದೆ ಕ್ಷಿಪ್ರದಲ್ಲಿ ಮಾಡಿಬಿಡುವುದಕ್ಕೆ ಸೂಚಿಸಿದರು. ಪರಿತರುವಾಯ ತಂಗಿಯ ಚಿತೆಯ ಕಡೆಗೆ — ಬಾಕಿಮಾರಿಗೆ—

ಆವಳ ದಹನಕಾರ್ಯವನ್ನು ನೆರವೇರಿಸುವುದಕ್ಕಾಗಿ ಅಣ್ಣಂದಿಯರು ತೆರಳಿದರು.

ಇತ್ತ ನಾಲ್ವರು ದಾಂಡಿಗರು ಬಿರುಮಣನ ಕಾಷ್ಠಕ್ಕೆ ಬೆಂಕಿಯನ್ನು ಉರಿಗೊಳಿಸಲು ಸನ್ನದ್ಧರಾದ ವೇಳೆ, ಬಿರುಮಣನ ಸ್ವಕೀಯಸ್ಥನೊಬ್ಬನು ಅಲ್ಲಿಗೆ ದಡದಡನೇ ಬಂದುಕೊಂಡನು. ಅವನು ಕಾಷ್ಠದ ಪಕ್ಕದಲ್ಲಿ ನಿಂತು ಬಿರುಮಣನಿಗೆ ಹೀಗೆಂದು ಅವಸರವಸರವಾಗಿ ನುಡಿದನು:

"ಬಿರುಮಣಾ! ನೀನು ಗುಂಡಿನವರ ಸೊಸೆಗೆ ಅಪಚಾರವನ್ನು ಮಾಡಿದುಂಟೇ? ನಿನ್ನಿಂದ ಅನ್ಯಾಯವು ಎಸಗಿದ್ದರೆ ಹೇಳು. ನಾನು ಗುಂಡಿನವರಿಗೆ ಮತ್ತು ಅವರ ಅಳಿಯಂದಿರಿಗೆ ಒಪ್ಪಿಸುತ್ತೇನೆ. ಅವರಿಂದ ನಿನಗೆ ಕ್ಷಮಾಪಣೆಯನ್ನು ದೊರಕಿಸುತ್ತೇನೆ. ಈ ನಿನ್ನ ಪ್ರಾಣಾಂತಿಕ ವೇಳೆಯಲ್ಲೂ ನೀನು ಮೌನವನ್ನು ಧರಿಸುವುದು ತರವಲ್ಲ. ಬಾಯಿಬಿಟ್ಟು ನಿಜವನ್ನು ಹೇಳು."

ಬಿರುಮಣ ಮರಣಭಯದಿಂದಲೋ ಅಥವಾ ಪಾಪಸಂತಾಪದಿಂದಲೋ—ಅಂತು—ಇದೀಗ ತನ್ನ ಅಪರಾಧವನ್ನು ತೋಡಿಕೊಂಡನು:

"ಬಂಧೂ! ನಾನು ಗುಂಡಿನವರ ಸೊಸೆಗೆ ದ್ರೋಹವನ್ನು ಬಗೆದೆನು. ಆ ಸದಾಚಾರಿಣಿಯಾದ ಬಾಲೆಯ ಕುರಿತು ಗುಂಡಿನವರಿಗೆ ಅಲ್ಲಸಲ್ಲದ ಆಪಾದನೆಮಾಡಿದೆನು. ನಿರಾಪರಾಧಿನಿಯ ಅಪಮೃತ್ಯುವಿಗೆ ನನ್ನ ಸ್ವೈರ ಬುದ್ಧಿ ಮತ್ತು ದೋಷಾರೋಪಣೆಯೇ ಕಾರಣ........"

ಬಂಧುವು, ನಿಯುಕ್ತಿಸಲ್ಪಟ್ಟ ಯಮದೂತರಂತಿರುವ ನಾಲ್ವರು ದಾಂಡಿಗರಿಗೆ—ತಾನು ಮೇಲೆ ಹೋಗಿ ಗುಂಡಿನವರನ್ನು ಮತ್ತು ಅವರ ಅಳಿಯಂದಿರನ್ನು ಸಮಾಗಮಿಸಿ ಕೂಡಲೇ ಹಿಂತಿರುಗಿ ಬರುತ್ತೇನೆಂದೂ ಅಷ್ಟರ ತನಕ ಕಾಷ್ಠಕ್ಕೆ ಬೆಂಕಿಯನ್ನುರಿಗೊಳಿಸಬಾರದೆಂದೂ ವಿಜ್ಞಾಪಿಸಿಕೊಂಡನು. ಆತನು ಕಾಲು ತಾಸಿನೊಳಗೆ ಮರಳಿ ಬರತಕ್ಕದೆಂದೂ, ಅದಕ್ಕೆ ತಪ್ಪಿದರೆ ತಾವು ತಮ್ಮ ಪಾಲಿನ ಕರ್ತವ್ಯವನ್ನು ಮಾಡಿಯೇ ಸಿದ್ಧವೆಂದೂ ಅವರು ತಾಕೀದುಕೊಟ್ಟರು. ಬಂಧುವು ಹೊರಳಿದನು. ಕೆಳಗದ್ದೆಯಿಂದ ಮೇಲ್ಗದ್ದೆಗೆ ಕಾಲಿಕ್ಕಿದನಷ್ಟೆ. ಆಗ ಬಿಲ್ಲು ಮಿಂಚಿನಂತೆ ಪ್ರವೇಶಿಸಿ ಗರ್ಜಿಸುತ್ತ ಆ ಮನುಷ್ಯನನ್ನು ಓಡಿಸಿ ಬೆನ್ನಟ್ಟಿದನು. ಭಯಭೀತನಾದ ಸಂಧಾನಕರ್ತನು ಜೀವವಿದ್ದರೆ ತಿರಿದು ತಿಂದೇನೆಂದು, ಹುಣಿ ಹಳ್ಳ, ತೋಟ-ತೋಪು, ದಂಡೆ-ದಿನ್ನೆಗಳೆನ್ನದೆ, ಅವುಗಳನ್ನು ನೆಗೆದುಕೊಂಡು ಒಂದೇಸವನೆ ಓಟಕಿತ್ತನು. ಮತ್ತೆ ಬಿಲ್ಲು ಆತನನ್ನು ಬಹುದೂರಕ್ಕೆ ಎತ್ತಲೋ ಓಡಿಸಿಕೊಂಡು ಹೋದನು. ಕಾಲು ತಾಸು ಸರಿದುಹೋಯಿತು. ಇತ್ತ ಬಿರುಮಣನ ಕಾಷ್ಠ ದಳ್ಳುರಿಗೊಂಡು ದಗದಗಿಸಿತು!



ಶ್ರೀ ನಿಜಲಿಂಗಪ್ಪನವರು.

ಗಿಲ್ಲುವಿನ ಶವದಹನ ಸಂಸ್ಕಾರವು ಬಾಕಿಮಾರಿನಲ್ಲಿ ಸಾದರ ಸಮ್ಮಾನನೀಯವಾಗಿ ಸಾಗಿತ್ತು! ಶವ ಅರೆವಾಸಿ ಸುಟ್ಟಾಗುವಾಗ ಬಿಲ್ಲು ಒಮ್ಮಿಂದೊಮ್ಮೆ ಹಠಾತ್ತನೇ ಹತ್ತಿರದಲ್ಲಿ ಕಾಣಿಸಿಕೊಂಡನು. ತನ್ನ ಪ್ರಿಯ ಚಿಕ್ಕ ಒಡತಿಯ ಉರಿಯುವ ಚಿತೆಗೆ ಮಂದಿಗಳ ಹಾಹಾಕಾರ, ಬೊಬ್ಬಾಟದ ಗದ್ದಲದಲ್ಲಿ ಚಂಗನೇ ಹಾರಿಕೊಂಡನು! ಬಾಕಿಮಾರಿನ ಒಂದು ಚಿತೆಯಲ್ಲಿ ಸಮಾನಾತ್ಮೀಯರಿಬ್ಬರ ದೇಹಾರ್ಪಣೆ!

ವಿದ್ಯುತ್ ಚಾಲಿತ ಇಂಜಿನ್

ರೈಲ್ವೆಯಲ್ಲಿ ಪ್ರಗತಿ

ವರ್ಷವರ್ಷವೂ, ಕೆಲವೊಂದು ಪ್ರಾಮುಖ್ಯ ರೈಲ್ವೇ ಮಾರ್ಗಗಳಿಂದ ಹೊಗೆಯೂದುವ ರೈಲು ಇಂಜಿನುಗಳನ್ನು ತೆಗೆದುಹಾಕಿ, ವಿದ್ಯುತ್ ಚಾಲಿತ ಇಂಜಿನುಗಳನ್ನು ಬಳಕೆಗೆ ತರಬೇಕೆಂದು ಭಾರತೀಯ ರೈಲ್ವೆಯವರ ಯೋಜನೆಯಿದೆ. ನಮ್ಮ ದೇಶದಲ್ಲಿ ಮೊದಲ ವಿದ್ಯುತ್ ಚಾಲಿತ ಇಂಜಿನು, 1925ರಲ್ಲಿ ಮುಂಬಯಿ ಮತ್ತು ಬಾಂದ್ರಾ ಸ್ಟೇಷನುಗಳ ನಡುವೆ ಚಲನಕ್ಕೆ ತರಲ್ಪಟ್ಟಿತ್ತು. ಅಂದಿನಿಂದ ಈ ವರೆಗೆ ಬಹಳವಾದ ಪ್ರಗತಿಯಾಗಿದೆ. ಈ ಪ್ರಗತಿಯ ಸಂಕ್ಷಿಪ್ತ ವಿವರವಿಲ್ಲಿದೆ.

ಆಕಾಶಾಭಿಮುಖವಾಗಿ ಕಪ್ಪು ಮಿಶ್ರಿತ ಬೂದು ಬಣ್ಣದ ಹೊಗೆಯನ್ನು ಹೊರಸೂಸುವ ಉಗಿಯ ರೈಲ್ವೆ ಎಂಜಿನ್ ಭಾರತೀಯ ರೈಲು ಮಾರ್ಗಗಳಲ್ಲಿ ಕೆಲವು ನಿಬಿಡವಾದ ಮಾರ್ಗಗಳಿಂದ ಕ್ರಮೇಣ ಕಣ್ಮರೆಯಾಗುತ್ತಿದೆ. ಅದರ ಸ್ಥಾನವನ್ನು ವಿದ್ಯುತ್ ಚಾಲಿತ ರೈಲ್ವೆ ಎಂಜಿನ್ ಆಕ್ರಮಿಸುತ್ತಿದೆ. ಅತಿವೇಗವಾಗಿ ಚಲಿಸುವ ಈ ಎಲೆಕ್ಟ್ರಿಕ್ ಎಂಜಿನ್, ರೈಲ್ವೆಗಳ ಕಾರ್ಯಾಚರಣೆಯಲ್ಲಿ ಆವೃತ್ತಿಯ ಸಂಖ್ಯೆ ಹಾಗೂ ವೇಗವನ್ನು ಗಮನಾರ್ಹವಾಗಿ ಹೆಚ್ಚಿಸುವುದು.

ಭಾರತದಲ್ಲಿ ವಿದ್ಯುತ್ ಚಾಲಿತ ಎಂಜಿನ್ 1925ರಲ್ಲಿಯೇ ಬಳಕೆಗೆ ಬಂದಿತು. ಆಗ ಮುಂಬಯಿಯಲ್ಲಿ, ವಿಕ್ಟೋರಿಯಾ ಟರ್ಮಿನಸ್ ಮತ್ತು ಕುರ್ಲಾ ಹಾಗೂ ವಿಕ್ಟೋರಿಯಾ ಟರ್ಮಿನಸ್ ಮತ್ತು ಬಾಂದ್ರಾಗಳ ನಡುವೆ ಸುಮಾರು 16 ಕಿಲೋಮಿಟರುಗಳಷ್ಟು ದೂರವನ್ನು ಎಲೆಕ್ಟ್ರಿಕ್ ಎಂಜಿನ್‌ನ ಚಾಲನೆಗಾಗಿ ಸಜ್ಜುಗೊಳಿಸಲಾಯಿತು.

ಮದರಾಸು ಮತ್ತು ತಾಂಬರಂಗಳ ನಡುವೆ, ಮೀಟರ್‌ಗೇಜ್ ಒಂದರಲ್ಲಿ ಮಾತ್ರವೇ ಎಲೆಕ್ಟ್ರಿಕ್ ಟ್ರೈನ್‌ಗಳನ್ನು ಓಡಿಸಲಾಗುತ್ತಿದೆ. 1931ರಲ್ಲಿ ಇದನ್ನು ಆರಂಭಿಸಿದರು. 1936ರೊಳಗೆ ಮುಂಬಯಿ ಮತ್ತು ಮದರಾಸುಗಳಲ್ಲಿ ಒಟ್ಟು 388 ಕಿಲೋಮೀಟರುಗಳಷ್ಟು ರೈಲು ಮಾರ್ಗಗಳಲ್ಲಿ ವಿದ್ಯುಚ್ಛಕ್ತೀಕರಣವಾಯಿತು.

1957ರ ನವೆಂಬರದಲ್ಲಿ, ಪೂರ್ವ ಭಾರತದಲ್ಲಿ ರೈಲ್ವೆಗಳ ವಿದ್ಯುಚ್ಛಕ್ತೀಕರಣ ಕಾರ್ಯವನ್ನು ಕೈಗೊಂಡಾಗ ಹೌರಾದಿಂದ ಶಿವರಾಫುಲಿಗೆ ಪ್ರಥಮ ಎಲೆಕ್ಟ್ರಿಕ್ ಟ್ರೈನನ್ನು ಓಡಿಸಲಾಯಿತು.

ಇದುವರೆಗೆ, ಮಹಾನಗರಗಳ ಒಳಗೆ ಹಾಗೂ ಸುತ್ತಮುತ್ತಲಿರುವ ಉಪನಗರಗಳಲ್ಲಿ ತೀವ್ರಗತಿಯಿಂದ ಬೆಳೆಯುತ್ತಿರುವ ಜನಸಂಚಾರಕ್ಕೆಂದೇ ರೈಲು ಮಾರ್ಗಗಳ ವಿದ್ಯುಚ್ಛಕ್ತೀಕರಣವನ್ನು ಕೈಗೊಳ್ಳಬೇಕೆಂದು ಉದ್ದೇಶಿಸಲಾಗಿತ್ತು. ಮುಂಬಯಿ ಕ್ಷೇತ್ರವೊಂದರಲ್ಲೇ, ಪಶ್ಚಿಮ ಮತ್ತು ಮಧ್ಯ ರೈಲ್ವೆಗಳೆರಡೂ ಸೇರಿ ಈಗ ದಿನಕ್ಕೆ 1035 ಸಬರ್ಬನ್ ಟ್ರೈನ್‌ಗಳನ್ನು ಓಡಿಸುತ್ತಿವೆ.

ಆರು ನಿಮಿಷಗಳಿಗೆ ಒಂದರಂತೆ, ಮದರಾಸಿನ ಬೀಚ್ ಮತ್ತು ತಾಂಬರಂಗಳ ನಡುವೆ ಪ್ರತಿದಿನ 200ಕ್ಕೂ ಹೆಚ್ಚು ಟ್ರೈನ್‌ಗಳು ಓಡುತ್ತಿವೆ.

ಕಲ್ಕತ್ತದಲ್ಲಿ, ಪೂರ್ವ ರೈಲ್ವೆಯಲ್ಲಿ, ಎಲೆಕ್ಟ್ರಿಕ್ ಟ್ರೈನ್‌ಗಳು ಹೌರಾ ಮತ್ತು ಬರ್ದ್‌ವಾನಗಳ ನಡುವಿನ ಪ್ರಯಾಣದ ವೇಳೆಯಲ್ಲಿ ಒಂದು ಗಂಟೆ ಇಪ್ಪತ್ತು ಮೂರು ನಿಮಿಷಗಳಷ್ಟು ಸಮಯವನ್ನು ಕಡಿಮೆಮಾಡಿವೆ.

ಸುಮಾರು 15 ಲಕ್ಷ ಜನರು— ಕಾರ್ಖಾನೆ ಕೆಲಸಗಾರರು, ಕಚೇರಿಗಳಿಗೆ ಹೋಗುವವರು, ವ್ಯಾಪಾರಿಗಳು, ವಿದ್ಯಾರ್ಥಿಗಳು ಮುಂತಾದವರು— ಈಗ ಪ್ರತಿದಿನ ಎಲೆಕ್ಟ್ರಿಕ್ ಟ್ರೈನ್‌ಗಳಲ್ಲಿ ಪ್ರಯಾಣಮಾಡುವರು. ಇದರಿಂದ ಉಪನಗರಗಳಲ್ಲಿ ವಾಸಿಸುವ ಜನರು ಪ್ರಮುಖ ಕೈಗಾರಿಕಾ ನಗರಗಳಿಗೆ ಹೋಗಿಬರಲು ಅತ್ಯಂತ ಅನುಕೂಲವಾಗಿದೆ.

ಸರಕುಗಳ ಸಾಗಣೆಗಾಗಿ, ಎಲೆಕ್ಟ್ರಿಕ್ ಎಂಜಿನ್‌ಗಳ ಬಳಕೆಯನ್ನು ವಾಸ್ತವವಾಗಿ ದ್ವಿತೀಯ ಯೋಜನಾವಧಿಯಲ್ಲಿ ಆರಂಭಿಸಲಾಯಿತು.

ರೈಲ್ವೆಗಳ ಸಂಬಂಧವಾದ ದ್ವಿತೀಯ ಯೋಜನೆಯು ಪೂರ್ವ ಮತ್ತು ಆಗ್ನೇಯ ರೈಲ್ವೆಗಳ ಕೆಲವು ಮುಖ್ಯ ಮಾರ್ಗಗಳಲ್ಲಿ 1081 ಕಿಲೋಮೀಟರುಗಳಷ್ಟು ದೂರದ ವಿದ್ಯುಚ್ಛಕ್ತೀಕರಣಕ್ಕೆ ಅವಕಾಶ ನೀಡಿತು. ದ್ವಿತೀಯ ಯೋಜನಾವಧಿಯಲ್ಲಿ ಈ ಮಾರ್ಗಗಳಲ್ಲಿ ಸರಕುಗಳ ಸಾಗಣೆ ಹೆಚ್ಚುವುದೆಂದು ಮೊದಲೇ ಅಂದಾಜುಮಾಡಲಾಗಿತ್ತು. ವಿದ್ಯುತ್ ಚಾಲಿತ ಎಂಜಿನ್ ಹೆಚ್ಚು ಭಾರವನ್ನು ಎಳೆಯುವ ಶಕ್ತಿಯಿಂದ ಕೂಡಿರುತ್ತದೆ; ಅದು ವೇಗವಾಗಿಯೂ ಓಡುತ್ತದೆ. ಈ ಎಂಜಿನ್‌ಗಳು ಹೆಚ್ಚು ಮಿತವ್ಯಯ ಹಾಗೂ ಶೀಘ್ರವಿಧಾನದಿಂದ ಭಾರವಾದ ಖನಿಜಗಳು ಹಾಗೂ ಇತರ ಸರಕುಗಳನ್ನು ಸಾಗಿಸುವುವು.

'ರೈಲ್ವೆ ಎಲೆಕ್ಟ್ರಿಫಿಕೇಷನ್' ಎಂಬ ಹೆಸರಿನ ಕೇಂದ್ರ ಪ್ರಾಜೆಕ್ಟ್ ಸಂಸ್ಥೆಯೊಂದನ್ನು ಕಲ್ಕತ್ತದಲ್ಲಿ ರೈಲು ಮಾರ್ಗಗಳ ವಿದ್ಯುಚ್ಛಕ್ತೀಕರಣ ಕಾರ್ಯ ಯೋಜನೆಯನ್ನು ಕೈಗೊಳ್ಳುವರೆ ಸ್ಥಾಪಿಸಲಾಯಿತು.

ಸಬ್‌ಅರ್ಬನ್ ಉಪಮಾರ್ಗವೂ ಸೇರಿ ಹೌರಾದಿಂದ ಗಯಾ, ಆಸನಸೋಲದಿಂದ ಚಕ್ರಧರಪುರ, ರಾಜಖರ್ಸ್ವಾನ್‌ನಿಂದ ದಂಗೋವಾಪೋಸಿ, ಸಿನಿಯಿಂದ ಟಾಟಾನಗರ— ಈ ವಿಭಾಗಗಳಲ್ಲಿ 633 ಕಿಲೋಮೀಟರುಗಳಷ್ಟು ದೂರದ ರೈಲು ಮಾರ್ಗಗಳನ್ನು ವಿದ್ಯುಚ್ಛಕ್ತೀಕರಣಗೊಳಿಸಲಾಗಿದೆ.

ಗಯಾ— ಮೊಘಲ್‌ಸರಾಯ್ ಮತ್ತು ಟಾಟಾನಗರ— ಖರಗ್‌ಪುರ ವಿಭಾಗಗಳಲ್ಲಿ ಈ ವರ್ಷದಿಂದಲೇ ವಿದ್ಯುತ್ ಚಾಲಿತ ಟ್ರೈನ್‌ಗಳು ಓಡುವ ಸಂಭವವಿದೆ.

ಮುಂದಿನ ಐದು ವರ್ಷಗಳೊಳಗೆ ಮತ್ತೆ 1426 ಕಿಲೋಮೀಟರುಗಳಷ್ಟು ದೂರದ ರೈಲು ಮಾರ್ಗಗಳನ್ನು ವಿದ್ಯುಚ್ಛಕ್ತೀಕರಣಗೊಳಿಸುವ ಉದ್ದೇಶವಿದೆ.

ರೈಲ್ವೆ ಎಂಜಿನ್‌ಗಳ ತಯಾರಿಕೆ

ವಿದ್ಯುತ್ ಚಾಲಿತ ಟ್ರೈನ್‌ಗಳನ್ನು ಬಳಕೆಗೆ ತಂದಂತೆಲ್ಲಾ, ರೈಲ್ವೆಗಳು ಅಗತ್ಯ ಸಲಕರಣೆಗಳು ಹಾಗೂ ವಿದ್ಯುತ್ ಚಾಲಿತ ಎಂಜಿನ್‌ಗಳ ತಯಾರಿಕೆಯನ್ನೂ ಕೈಗೊಂಡಿವೆ. ಭಾರತದಲ್ಲಿ ಪ್ರಥಮತಃ ತಯಾರಾದ ವಿದ್ಯುತ್ ಚಾಲಿತ ಎಂಜಿನ್ 'ಲೋಕಮಾನ್ಯ' ಕಳೆದ ಅಕ್ಟೋಬರದಲ್ಲಿ ಚಿತ್ತರಂಜನ ಕಾರ್ಖಾನೆಯಿಂದ ಹೊರಬಂದಿತು. ಅಲ್ಲಿ ಸರಕು ಗಾಡಿಗಳನ್ನು ಎಳೆಯಬಲ್ಲಂತಹ ಎ. ಸಿ. ಎಂಜಿನ್‌ಗಳನ್ನು ತಯಾರಿಸಲೂ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಪೆರಂಬೂರಿನ ಸಮಗ್ರ ರೈಲುಗಾಡಿ ಕಾರ್ಖಾನೆ ಮತ್ತು ಕಲ್ಕತ್ತದ ಖಾಸಗಿ ಎಂಜಿನಿಯರಿಂಗ್ ಸಂಸ್ಥೆ— ಇವು ಈಗಾಗಲೇ ವಿದ್ಯುತ್ ಚಾಲಿತ ಟ್ರೈನ್‌ಗಳ ಅನೇಕ ಭಾಗಗಳ ತಯಾರಿಕೆಯನ್ನು ಆರಂಭಿಸಿವೆ.

ರೈಲ್ವೆಗಳ ಕಾರ್ಯಾಚರಣೆಯನ್ನು ಆಧುನೀಕರಿಸುವುದರಲ್ಲಿ ವಿದ್ಯುತ್ ಚಾಲಿತ ಎಂಜಿನ್‌ನ ಬಳಕೆಯು ಅತ್ಯಂತ ಪರಿಣಾಮಕಾರಿಯಾದ ವಿಧಾನವಾಗಿರುವುದರಲ್ಲಿ ಸಂದೇಹವೇ ಇಲ್ಲ. ಭಾರತಕ್ಕಿಂತ ಅತ್ಯಂತ ಹೆಚ್ಚಿನ ಮಟ್ಟದಲ್ಲಿ ಔದ್ಯೋಗೀಕರಣ ಕೈಗೊಂಡಿರುವ ಅನೇಕ ರಾಷ್ಟ್ರಗಳಿಗಿಂತಲೂ ತ್ವರಿತಗತಿಯಲ್ಲಿ, ಭಾರತೀಯ ರೈಲ್ವೆಗಳು ವಿದ್ಯುಚ್ಛಕ್ತೀಕರಣ ಕಾರ್ಯವನ್ನು ಕೈಗೊಳ್ಳುತ್ತಿವೆ.



ಶ್ರೀ ಲಾಲ್‌ಬಹದೂರ್ ಶಾಸ್ತ್ರಿಯವರು.

ದೂರಮುದ್ರಕ ಯಂತ್ರಗಳ ತಯಾರಿ

ದೂರಮುದ್ರಕ ಯಂತ್ರಗಳು ("ಟೆಲಿಪ್ರಿಂಟರ್ಸ್")—ವೃತ್ತಪತ್ರಿಕಾ ವಿಕಾಸದಲ್ಲಿ ಹಾಗು ವಾಣಿಜ್ಯ ವಿಸ್ತರಣೆಯಲ್ಲಿ ಪ್ರಾಮುಖ್ಯ ಪಾತ್ರವಹಿಸಿವೆ. ಈ ಯಂತ್ರಗಳನ್ನೀಗ ಭಾರತದಲ್ಲೇ ಜೋಡಿಸುತ್ತಿರುವರು. ಇನ್ನು ಕೆಲವು ವರ್ಷಗಳಲ್ಲಿ ಈ ಯಂತ್ರಗಳ ಎಲ್ಲ ಭಾಗಳಗೂ ಈ ದೇಶದಲ್ಲಿಯೇ ತಯಾರಾಗುವುವು. ಇಟೆಲಿಯ "ಒಲಿವೆಟ್ಟ" ಸಂಸ್ಥೆಯೊಡನೆ ಭಾರತ ಸರಕಾರವು ಮಾಡಿರುವ ಕರಾರಿನಂತೆ, ಇಟೆಲಿಯನ್ ತಜ್ಞರು ಇಲ್ಲಿಗೆ ಬಂದು, ಭಾರತದ ದೂರಮುದ್ರಕ ಯಂತ್ರ ತಯಾರಿ ಕಾರ್ಖಾನೆಯಲ್ಲಿ (ಮದರಾಸಿನ ಬಳಿಯಲ್ಲಿರುವ ಗಿಂಡಿ ಎಂಬಲ್ಲಿ) ನಮ್ಮ ಕೆಲಸಗಾರರಿಗೆ ತರಬೇತಿ ಕೊಡುವರು.

ಯಂತ್ರಕಲಾವಿಜ್ಞಾನಯುಗದಲ್ಲಿ ಬಳಸುವ ದೂರಸಂಚಾರ ಸಂಪರ್ಕ ಸಂಬಂಧವಾದ ಸಲಕರಣೆಗಳಲ್ಲಿ ದೂರಮುದ್ರಕ ಯಂತ್ರ ("ಟೆಲಿ ಪ್ರಿಂಟರ್") ಒಂದು ಮುಖ್ಯ ಸಲಕರಣೆಯಾಗಿದೆ. ಈಗ ದೇಶದಲ್ಲಿ ದೂರಮುದ್ರಕ ಯಂತ್ರಗಳ ತಯಾರಿಕೆಯು ಆರಂಭವಾಗಿದೆ.

ಮದರಾಸಿನಲ್ಲಿ, "ಹಿಂದೂಸ್ಥಾನ್ ಟೆಲಿಪ್ರಿಂಟರ್ಸ್ ಲಿಮಿಟೆಡ್." ಎಂಬ ಹೆಸರಿನಲ್ಲಿ ಸರಕಾರಿ ಸ್ವಾಮ್ಯದ ಕಾರ್ಖಾನೆ ಸ್ಥಾಪಿಸಲ್ಪಟ್ಟಿದೆ. ಈ ಕಾರ್ಖಾನೆಯ ಅಧಿಕೃತ ಬಂಡವಾಳ ಮೂರು ಕೋಟಿ ರೂಪಾಯಿಗಳು. ಈ ಕಾರ್ಖಾನೆಯು ಕಳೆದ ವರ್ಷ ಜೂನ್ ತಿಂಗಳ ಅಂತ್ಯದ ವೇಳೆಗೆ 70 ದೂರಮುದ್ರಕ ಯಂತ್ರಗಳನ್ನು ಜೋಡಿಸಿತ್ತು. ಈ ವರ್ಷ ಫೆಬ್ರುವರಿ ತಿಂಗಳಿಗೆ ಪೂರ್ವದಲ್ಲಿ ಮತ್ತೆ 100 ಯಂತ್ರಗಳನ್ನು ಜೋಡಿಸಲಿರುವುದು.

ಕಾರ್ಖಾನೆಯು ಅಸ್ತಿತ್ವಕ್ಕೆ ಬಂದ ಕೇವಲ ಒಂದು ವರ್ಷದೊಳಗಾಗಿ ಇಷ್ಟು ಯಂತ್ರಗಳೂ ತಯಾರಾಗಿ ಹೊರಬಂದಿವೆ. ಇದೊಂದು ಉತ್ತಮ ಸಾಧನೆಯೇ ಆಗಿದೆ.

ಕಾರ್ಖಾನೆಯನ್ನು ಮದರಾಸಿನ ಗಿಂಡಿಯಲ್ಲಿರುವ ಕೈಗಾರಿಕಾ ಪ್ರದೇಶದಲ್ಲಿ 35 ಎಕರೆಗಳ ಸ್ಥಳದಲ್ಲಿ ರಚಿಸಲಾಗುವುದು. ಸ್ಥಳವನ್ನು ಮದರಾಸು ಸರಕಾರದವರು ಒದಗಿಸಿರುವರು.

ಕಾರ್ಯಕ್ರಮಕ್ಕಿಂತ ಮುಂದಾಗಿ

ಕಾರ್ಖಾನೆಯ ನಿರ್ಮಾಣಕ್ಕೆ ಮುಂಚಿತವಾಗಿಯೇ ಕೈಗಾರಿಕಾ ಪ್ರದೇಶದಲ್ಲಿ ಬಾಡಿಗೆಗೆ ಪಡೆದ ಕಟ್ಟಡವೊಂದರಲ್ಲಿ ದೂರಮುದ್ರಕ ಯಂತ್ರಗಳ ಜೋಡಣೆಯ ಕಾರ್ಯವನ್ನು ಕೈಕೊಳ್ಳಲಾಗಿದೆ. ಈಗಾಗಲೆ ಈ ಕಾರ್ಖಾನೆಯಲ್ಲಿ ದೋಡಿಸಲಾದ ದೂರಮುದ್ರಕ ಯಂತ್ರಗಳನ್ನು ಬಳಕೆಗಾಗಿ ವಿವಿಧ ಸ್ಥಳಗಳಿಗೆ ಕಳುಹಿಸಿಕೊಡಲಾಗಿದೆ.

ಈ ಕಾರ್ಖಾನೆಯು ಅಲ್ಪಕಾಲಾವಧಿಯಲ್ಲಿಯೇ ಪೂರ್ಣಪ್ರಮಾಣದ ಉತ್ಪಾದನೆಯನ್ನು ಕೈಗೊಳ್ಳುವ ಗುರಿಯನ್ನಿಟ್ಟುಕೊಂಡಿದೆ.

1963ರ ಅಂತ್ಯದೊಳಗೆ ವರ್ಷಕ್ಕೆ 1,200 ದೂರ ಮುದ್ರಕ ಯಂತ್ರಗಳಂತೆ ತಯಾರಿಸುವ ನಿರೀಕ್ಷೆಯಿದೆ. ಅಷ್ಟರೊಳಗೇ ಈ ಯಂತ್ರಗಳಲ್ಲಿ ಬಳಸುವ ಭಾಗಗಳಲ್ಲಿ ಸೇ. 78ರಷ್ಟನ್ನು ಭಾರತದಲ್ಲಿಯೇ ತಯಾರಿಸಲಾಗುವುದು.

ಒಂದೊಂದು ದೂರ ಮುದ್ರಕ ಯಂತ್ರದಲ್ಲಿ ಸುಮಾರು 2,500 ಭಾಗಗಳಿರುತ್ತವೆ. ಈ ಎಲ್ಲ ಭಾಗಗಳೂ—ನೂರಕ್ಕೆ ನೂರು—1965 ರೊಳಗೆ ಈ ಕಾರ್ಖಾನೆಯಲ್ಲಿಯೇ ತಯಾರಿಸಲ್ಪಡುವುವು. ಅಥವಾ ದೇಶದಲ್ಲಿಯೇ ಪಡೆಯಲಾಗುವುದು.

ಭಾರತದ ಪ್ರಪ್ರಥಮ ಗಡಿಯಾರ ಕಾರ್ಖಾನೆ

ಬರುವ ವರ್ಷದಲ್ಲಿ ನಮ್ಮ ದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಕೈಗಡಿಯಾರಗಳ ತಯಾರಿ ಪ್ರಾರಂಭವಾಗುತ್ತದೆ ಮಹಿಳೆಯರೂ ಪುರುಷರೂ ಧರಿಸಬಹುದಾದ ಗಡಿಯಾರಗಳು ಅಧಿಕ ಸಂಖ್ಯೆಯಲ್ಲಿ ಮಾರಾಟಕ್ಕೆ ಬರಲಿವೆ.

ಇನ್ನೊಂದು ವರ್ಷದಲ್ಲಿ ದಿನಕ್ಕೆ ಸುಮಾರು 150 ಗಡಿಯಾರಗಳಂತೆ ವರ್ಷಕ್ಕೆ 55,500 ಗಡಿಯಾರಗಳನ್ನು ತಯಾರಿಸುವರು. ಕ್ರಮೇಣ ಈ ಸಂಖ್ಯೆಯು ಹೆಚ್ಚಿಸಲ್ಪಡುವುದು. ಇನ್ನು ಆರು ವರ್ಷಗಳೊಳಗಾಗಿ ಗಂಟೆಗೆ 40ರಂತೆ, ವರ್ಷಕ್ಕೆ 360,000ರಂತೆ ಗಡಿಯಾರಗಳನ್ನು ತಯಾರಿಸುವರು. ಇಷ್ಟು ಗಡಿಯಾರಗಳೂ ಭಾರತದೊಳಗಿನ ಬೇಡಿಕೆಯನ್ನು ಪೂರ್ಣವಾಗಿ ಪೂರೈಸಲಾರವಾದರೂ, ಬಹುಮಟ್ಟಿಗೆ ಸಾಧಿಸಿದಂತಾಗುವುದು. ಈಗ, ಆಮದುಮಾಡಿಕೊಂಡ ಭಾಗಗಳನ್ನು ಜೋಡಿಸಿ ಗಡಿಯಾರಗಳನ್ನು ತಯಾರಿಸುವ ಕಾರ್ಯವು ಆರಂಭವಾಗಿದೆ.

ಜಪಾನಿನ ಸಹಕಾರ

ಬೆಂಗಳೂರಿನಲ್ಲಿರುವ ಸರಕಾರಿ ಸ್ವಾಮ್ಯದ "ಹಿಂದೂಸ್ಥಾನ್ ಮೆಷೀನ್ ಟೂಲ್ಸ್ ಕಾರ್ಖಾನೆ" ಮತ್ತು ಜಪಾನಿನ "ಸಿಟಿಜನ್ ವಾಚ್ ಕಂಪೆನಿ" ಇವುಗಳ ನಡುವೆ ತಾಂತ್ರಿಕ ಸಹಕಾರದ ಒಪ್ಪಂದವಾಗಿದ್ದು, ಇವೆರಡೂ ಜತೆಯಾಗಿ, ಭಾರತದ ಪ್ರಪ್ರಥಮ ಗಡಿಯಾರ ತಯಾರಿಕಾ ಕಾರ್ಖಾನೆ ಅಸ್ತಿತ್ವಕ್ಕೆ ಬಂದಿತು.

ಬೆಂಗಳೂರಿನಲ್ಲಿ ಕಾರ್ಖಾನೆಯು ಸ್ಥಾಪನೆಗೆ ಕಾರಣ

ಗಡಿಯಾರ ಕಾರ್ಖಾನೆಯು ಜಾಲಹಳ್ಳಿಯಲ್ಲಿ ಹಿಂದೂಸ್ಥಾನ್ ಮೆಷೀನ್ ಟೂಲ್ಸ್ ಕಾರ್ಖಾನೆಗೆ ಹೊಂದಿಕೊಂಡು ಸ್ಥಾಪಿತವಾಗಿದೆ. ಹಿಂದೂಸ್ಥಾನ್ ಮೆಷೀನ್ ಟೂಲ್ಸ್ ಕಾರ್ಖಾನೆಯಲ್ಲಿ ಕುಶಲರಾದ ಕೆಲಸಗಾರರೂ ಆಡಳಿತ ವರ್ಗದವರೂ ಕೇಂದ್ರೀಕೃತರಾಗಿದ್ದು, ಈ ಕಾರ್ಖಾನೆಯ ಸಾಧನಯಂತ್ರಗಳ ವಿಭಾಗದ ಸೌಲಭ್ಯವೂ ಅತ್ಯಂತ ಶ್ರೇಷ್ಠಮಟ್ಟದ ಕೌಶಲವೂ ದೊರೆಯುವುದರಿಂದ ಗಡಿಯಾರ ಕಾರ್ಖಾನೆಯನ್ನು ಬೆಂಗಳೂರಲ್ಲೇ ಸ್ಥಾಪಿಸಲಾಯಿತು.

ಗಡಿಯಾರದ ಕಾರ್ಖಾನೆಗಾಗಿ ಎರಡೂವರೆ ಕೋಟಿ ರೂಪಾಯಿಗಳಷ್ಟು ಹಣವು ವೆಚ್ಚವಾಗುವುದೆಂದು ಅಂದಾಜುಮಾಡಲಾಗಿದೆ.

ಕೈಗಡಿಯಾರವು, ಒಂದಾನೊಂದು ಕಾಲದಲ್ಲಿ, ಶ್ರೀಮಂತರಿಗೆ ಮಾತ್ರ ಸಾಧ್ಯವೆನಿಸುವ ಭೋಗವಸ್ತುವೆಂದು ಪರಿಗಣಿಸಲ್ಪಟ್ಟಿತ್ತು. ಈಗ ಅದು, ಪ್ರತಿಯೊಬ್ಬನ ಆವಶ್ಯಕ ವಸ್ತುವಾಗಿದೆ. ಗಡಿಯಾರ ತಯಾರಿಯ ಕೈಗಾರಿಕೆಯು ನಮ್ಮ ದೇಶಕ್ಕೆ ಈಗತಾನೆ ಬಂದಿದೆ. ಜಪಾನ್ ಸಂಸ್ಥೆಯೊಂದರ ಸಹಕಾರದಿಂದ, ಬೆಂಗಳೂರಿನಲ್ಲಿ ಇದರ ಕಾರ್ಖಾನೆಯು ರಚನೆಯಾಗುತ್ತಿದೆ ಕೈಗಡಿಯಾರಗಳು ಇಲ್ಲೇ ತಯಾರಾದ ನಂತರ ಭಾರತವು ಈ ಬಗ್ಗೆ ವಿದೇಶಗಳಿಗೆ ತೆರುತಿದ್ದ ಹಣವೆಲ್ಲವೂ ಇಲ್ಲೇ ಉಳಿಯುವುದು.

ಗಡಿಯಾರ ತಯಾರಿಕೆಯಲ್ಲಿನ ಇತ್ತೀಚಿನ ಸುಧಾರಣೆಗಳು ಮತ್ತು ಫೆಶನ್‌ಗಳನ್ನು ಇಲ್ಲಿ ಅಳವಡಿಸಿಕೊಳ್ಳಲಾಗುವುದು.

ಕಾರ್ಖಾನೆಯ ಕಟ್ಟಡದ ನಿರ್ಮಾಣಕಾರ್ಯ ಕಟ್ಟಡಕ್ಕೆ ವಿದ್ಯುಚ್ಛಕ್ತಿ ಮತ್ತು ನೀರಿನ ಪೂರೈಕೆ ಇವುಗಳಿಗೆ ಸಾಕಷ್ಟು ಸಮಯ ಬೇಕಾಗುತ್ತದೆ.

ಕಾರ್ಖಾನೆ ಸ್ಥಾಪನೆಯ ನಾಲ್ಕನೆಯ ವರ್ಷದ ನಂತರವೂ ಭಾರತವು ಜಪಾನಿನಿಂದ ಸೇ. 15ರಷ್ಟು ಬಿಡಿಭಾಗಗಳನ್ನು ಆಮದುಮಾಡಿಕೊಳ್ಳಬೇಕಾಗುವುದೆಂದು ಭಾವಿಸಲಾಗಿದೆ.


ಜಪಾನಿನ ಸಹಕಾರದಿಂದ ದೊರೆಯುವ ಸೌಲಭ್ಯಗಳು

ಕೈಗಡಿಯಾರದ ಉದ್ಯಮವನ್ನು ಕಟ್ಟಲು ಜಪಾನಿಯರ ಸಹಕಾರದಿಂದ ದೊರೆಯುವ ಅನುಕೂಲ ಅತಿ ಮುಖ್ಯವೆಂದು ಭಾವಿಸಲಾಗಿದೆ. ಐರೋಪ್ಯರಾಷ್ಟ್ರಗಳಲ್ಲಿ ವಿಶೇಷವಾಗಿ ಸ್ವಿಟ್ಜರ್ಲೆಂಡಿನಲ್ಲಿ, ಗಡಿಯಾರದ ತಯಾರಿಯು ಒಂದು ಗೃಹಕೈಗಾರಿಕೆಯಾಗಿ ಬೆಳೆದಿದೆ. ಅದೇ ಜಪಾನ್ ಭಾರಿ ಪ್ರಮಾಣದಲ್ಲಿ ಗಡಿಯಾರಗಳನ್ನು ತಯಾರಿಸಲು ಸಾಧ್ಯವಾಗುವಂತಹ ತಂತ್ರವಿಧಾನವನ್ನು ಉತ್ತಮಪಡಿಸಿದೆ. ಸಿಟಿಜನ್ ವಾಚ್ ಕಂಪೆನಿಗೆ ಎಂಟು ಕಾರ್ಖಾನೆಗಳಿವೆ. ಈ ಕಾರ್ಖಾನೆಗಳು ನಾನಾ ಬಿಡಿಭಾಗಗಳನ್ನು ತಯಾರಿಸುತ್ತಿವೆ ಈ ಕಂಪೆನಿಯು ದಿನಕ್ಕೆ ಸುಮಾರು 8,000 ಗಡಿಯಾರಗಳನ್ನು ತಯಾರಿಸುತ್ತದೆಂದು ತಿಳಿದುಬಂದಿದೆ.

ಪ್ರಸ್ತುತ ಅಗತ್ಯಗಳು

ಭಾರತದಲ್ಲಿ ಪ್ರಕೃತ ವರ್ಷಕ್ಕೆ 20 ಲಕ್ಷ ಗಡಿಯಾರಗಳು ಬೇಕಾಗುತ್ತವೆಂದು ಅಂದಾಜುಮಾಡಲಾಗಿದೆ. ಬೆಂಗಳೂರು ಕಾರ್ಖಾನೆಯು ಅನೇಕ ಸರದಿಗಳಲ್ಲಿ (shifts) ಕೆಲಸಮಾಡಿ, ಪರಮಾವಧಿ 360,000 ಗಡಿಯಾರಗಳನ್ನು ತಯಾರಿಸುವಂತೆ ಸಜ್ಜುಗೊಂಡಿದೆ.

ಒಂದಾನೊಂದು ಕಾಲದಲ್ಲಿ ಭೋಗವಸ್ತುವೆಂದು ಪರಿಗಣಿಸಲ್ಪಟ್ಟಿದ್ದ ಹಾಗೂ ಈಗ ಅಗತ್ಯ ವಸ್ತುವಾಗಿ ಪರಿಣಮಿಸಿರುವ ಗಡಿಯಾರದ ಆಮದಿನಿಂದ ದೇಶದಿಂದ ಹೇರಳ ಹಣವು ಹೊರಹೋಗುತಿತ್ತು. ಈ ವಿನಿಮಯ ಹಣವನ್ನು ಉಳಿಸಲು ಈ ಕಾರ್ಖಾನೆಯು ನೆರವಾಗುತ್ತದೆ.



ಅಲೆಕ್ಸಾಂಡರ್

ಲೇಖಕ: ಸಿ. ಗೋಪಾಲಕೃಷ್ಣ ಆಚಾರ್ಯ, ಚಿತ್ರಾಪುರ.

ದೃಶ್ಯ ೧

(ವೇಶ್ಯಾಗೃಹ. ಅಲೆಕ್ಸಾಂಡರನೂ ಗುರುವೂ ಪ್ರವೇಶಿಸುತ್ತಾ)

ಗುರು: ಅಲೆಕ್ಸಾಂಡರ!

ಅಲೆ: ಗುರೂಜೀ....(ಕೈಜೋಡಿಸುವನು).

ಗುರು: ನನ್ನ ಮಾತುಗಳು ನಿನಗೆ ಕರ್ಣಕಠೋರವಾಗಿ ಕೇಳಿಸ ಬಹುದಲ್ಲಾ.

ಅಲೆ: ನಿಜ ಗುರೂಜಿ. ನನ್ನ ಹೃದಯವನ್ನು ಕೂರಲಗಿನಿಂದ ಚುಚ್ಚುತ್ತಿವೆಯಾದರೂ ನಿಮ್ಮ ಜ್ಞಾನಮುಖದಿಂದ ಹೊರಬೀಳುವ ನುಡಿಗಳು ನನ್ನ ಹಿತಕ್ಕಾಗಿ ಎಂಬುದನ್ನು ಮರೆಯಲಾರೆ. ಆದರೆ....

ಗುರು: ಆದರೆ ಎಂಬ ಅರ್ಧೋಕ್ತಿಯ ಸಂಪೂರ್ಣತೆಗೆ ನಿನ್ನ ಮನಸ್ಸೇ ಕಳವಳಪಾಗಿದೆ. ನಿನ್ನ ಸುಖವೇ ನನ್ನ ಹಿತ. ನೀನು ವೀರನಾಗಿದ್ದರೂ ನಿನ್ನ ಬುದ್ಧಿಯು ಮಾಯೆಯಿಂದ ಮುಸುಕಿದೆ. ಈ ಮರುಳಾಟಕ್ಕೆ ಎಲ್ಲಿದೆ ಕೊನೆ?

ಅಲೆ: ಗುರೂಜಿ! ನಿಮ್ಮ ಕರುಣದಿಂದ ನನ್ನ ದಿನಗಳು ಹೀಗೆ ಕಳೆದರೆ ಸಾಕು. ಮನಸ್ಸು ನಿಶ್ಚಿಂತೆಯಿಂದ ಇದ್ದರೆ ಸಾಕು. ಹೆಚ್ಚಿನ ಆಸೆಗೆ ಕೊನೆಯಾದೀತೆ?

ಗುರು: ಮಗೂ, ಆಹಾರ, ನಿದ್ರಾ, ಭಯ, ಸಂಸರ್ಗ ಇವು ಸಾಮಾನ್ಯ ಪಶುವರ್ಗಕ್ಕೂ ಇವೆ. ತಿಳಿದ ನೀನು ನಿರ್ವೀರ್ಯನೂ ನಿಸ್ತೇಜನೂ ಆಗುವುದರಲ್ಲಿ ಅರ್ಥವೇನು? ಸಾಧಕ ಕರ್ಮಗಳಲ್ಲಿ ಉದಾಸೀನನಾಗದಿರು.

ಅಲೆ: ಗುರೂಜಿ; ಸತ್ಯ, ಆದರೆ ನನ್ನ ಪ್ರೇಯಸಿಯು ಹಾಗಲ್ಲ. ಆವಳ ರೂಪ, ಲಾವಣ್ಯ, ಗುಣ ಇವುಗಳನ್ನು ನೀವಿನ್ನೂ ತಿಳಿದಿಲ್ಲ.

ಗುರು: ಅಲೆಕ್ಸಾಂಡರ! ನಿನ್ನ ಮನಸ್ಸು ಬಹುವಾಗಿ ಮೋಹಿಸಿದೆ. ಹೇಯವಾದ ಕಾರ್ಯದಲ್ಲಿ ಜೀವನವನ್ನು ಮುಗಿಸಿ ಕೀರ್ತಿಲತೆಗೆ ಬಿಸಿನೀರು ಎರಚುವೆ. ನನ್ನ ಮಾತಿಗೆ ಸಹಿಗೊಡದೆ ಹೋದೆಯಾದರೆ ಜನ್ಮಜನ್ಮಗಳಲ್ಲೂ ಷಂಡನಾಗುವೆ. ಎಚ್ಚರಿಕೆ, ನಿರ್ವೀರ್ಯನಾಗದಿರು. ನಿಸ್ತೇಜನಾಗದಿರು. ಷಂಡನಾಗದಿರು. ಇನ್ನೆಂತು ಹೇಳಲಿ? ಇದೇ ಜೀವನವೇ ಲೇಸೆಂದು ಬಗೆದರೆ ನಿನಗಿದೊ ಧಿಕ್ಕಾರ! ಧಿಕ್ಕಾರ! (ಹೋಗುವನು).

ಅಲೆ: (ಪಶ್ಚಾತ್ತಾಪದಿಂದ) ಗುರೂಜಿ, ಗುರೂಜಿ! ಹೊರಟೇ ಹೋದರೆ? ಅಯ್ಯೊ (ಹಣೆ ಬಡಿಯುವನು. ರೋಕ್ಸಾ ಪ್ರವೇಶಿಸಿ) ಪ್ರಿಯತಮಾ, ಇದೇನು ಪ್ರಮಾದ. ಇದೇಕೆ ದುಃಖ; ಹೇಳಬಾರದೆ?

ಅಲೆ: ನನ್ನ ನಲ್ಲೆ! ಕ್ರೂರನಾದರೂ ನಿನ್ನ ನೋಟದಿಂದ ಶಾಂತವಾಗಲೇಬೇಕು.

ರೋಕ್ಸಾ: ಈ ಮುಂಚೆ ಬಂದ ಗುರುಗಳು ಹೋದರೆ? ಏನೆಂದರವರು? ಅವರ ಮಾತಿನಿಂದ ನೀವಿಷ್ಟು ಆರ್ತನಾಗಿರಬಹುದೆ?

ಅಲೆ: ಹೌದು ರೋಕ್ಸಾ! ಮರೆಯಲ್ಲಿದ್ದು ಮಾತು ಕೇಳಿದೆಯೇನು?

ರೋ: ಹೌದು ಪ್ರಿಯಾ. ಕೇಳಬಾರದ್ದನ್ನು ಕೇಳಿದೆ. ಅವರ ಪೊಳ್ಳು ಮಾತಿಗೆ ಮರುಳಾಗಲಾರಿರಷ್ಟೆ?

ಅಲೆ: ಹಾಗೆಂದರೆ ಗುರುಗಳನ್ನು ಹೀನದೃಷ್ಟಿಯಿಂದ ನೋಡಿದೆಯಾ? ಅವರ ನುಡಿಗಳು ಅಕ್ಷರಶಃ ಸತ್ಯ.

ರೋ: ಹಾಗಾದರೆ ಹಿಂದೂಸ್ಥಾನಕ್ಕೆ ಧಾಳಿ ಇರಿಸುವಿರೆ? ಧರ್ಮಾತ್ಮ ಪುರುವಿನೊಡನೆ ಸಮರಗೈಯ್ಯಲು ಸಾಧ್ಯವೆ?

ಅಲೆ: ಹೌದು ರೋಕ್ಸಾ (ಅವಳ ಗಲ್ಲ ಹಿಡಿದು) ಗಾಭರಿಯಾಗದಿರು. ನನ್ನ ಹಿತಕ್ಕಾಗಿ ಎಚ್ಚರಿಸಿದರು. ನಾನು ವೀರನು. ತೇಜೋವಂತನೆಂದು ಅವರು ನುಡಿಯಬೇಕು. ನಿನ್ನ ಪ್ರೇಮವನ್ನು ಬಯಸಿದ ನನಗೆ ಶುಭವನ್ನೆ ಕೋರು. ನನ್ನ ಸೈನ್ಯದವರು ಸಿದ್ಧವಾಗಿರುವರು. ಬರುತ್ತೇನೆ (ಹೋಗುವನು).

ರೋ: ಹಾ! ಹೊರಟೇ ಹೋದರೆ! ಅಯ್ಯೊ ಆ ವೀರಾಗ್ರೇಸರ

ಪುರುರಾಜನೊಡನೆ ಸೆಣಸಾಟ ನಿಜಕ್ಕೂ ಸಾಗದು. ಇಂತಿರಲು ನಾನು ಪ್ರಿಯನಿಗೋಸುಗ ಆ ರಾಜನನ್ನು ಕಾಣುವೆನು. (ಹೋಗುವಳು. ತೆರೆ).

ದೃಶ್ಯ ೨

(ಸಭೆ. ಮಂತ್ರಿ, ಸೇನಾನಾಯಕ, ಸಮರ ನಿಂತಿರಲು ಪುರುರಾಜನು ಜಯ ಘೋಷದೊಂದಿಗೆ ಪ್ರವೇಶಿಸಿ ಸಿಂಹಾಸನವೇರಲು, ಎಲ್ಲರೂ ಕುಳಿತುಕೊಳ್ಳಲು ನೃತ್ಯ ಮುಗಿದ ಬಳಿಕ)

ಪುರು: ಸಪರಿವಾರ ಮಂತ್ರಿ ಸೇನಾನಾಯಕರಿಗೆ ಶುಭಮಸ್ತು.

ಮಂತ್ರಿ: ಮಹಾರಾಜರಿಗೆ ಜಯವಾಗಲಿ. ಮಹಾರಾಜರ ಚಿತ್ತದಂತೆ ಪ್ರಜಾವರ್ಗವು ಶಾಂತಿ ಸಂತೋಷಗಳಿಂದ ನಲಿಯುತ್ತಿದೆ. ಆದರೂ

ಪುರು: ಮಂತ್ರಿವರ್ಯ! ನೀವಂತಹ ಭಯಪಡುವವರಲ್ಲ. ನುಡಿಯಲ್ಲೇಕೆ ಅಸಂತೋಷ?

ಮಂತ್ರಿ: ಮಹಾರಾಜ! ಸಿಂಹಾಸನ ಅಧಿಕಾರವೆಂದರೆ ಕಠಾರಿಯ ಬಾಯಲ್ಲಿದ್ದಂತೆ. ಇತ್ತೀಚೆಗೆ ಒಂದು ವಾರ್ತೆ ಕೇಳಿದೆ. ಯವನಾಧೀಶನಂತೆ, ಅಲೆಕ್ಸಾಂಡರನಂತೆ. ನಮ್ಮ ರಾಜ್ಯದ ಮೇಲೆ ದಂಡೆತ್ತಿ ಬರುವನೆಂಬ ವಾರ್ತೆ ತಿಳಿದಿದೆ. (ಆಗ ದೂತನು ಪ್ರವೇಶಿಸಿ "ಮಹಾರಾಜರಿಗೆ ಜಯವಾಗಲಿ. ದೂತನೊಬ್ಬನು ಭೇಟಿಗಾಗಿ ಕಾದಿಹನು" ಎಂದು ಹೋಗಲು ಮರೆಮಾಚಿದ ವೇಷದಿಂದ ಅಲೆಕ್ಸಾಂಡರನು ಪ್ರವೇಶಿಸಿ) ರಾಜರಿಗೆ ಜಯವಾಗಲಿ (ಎಂದು ಪತ್ರ ಮಂತ್ರಿ ಕೈಗೆ ಕೊಡುವನು)

ಮಂತ್ರಿ: (ಪತ್ರವನ್ನು ಗಟ್ಟಿಯಾಗಿ ಓದುವನು. "ಎಲೈ ರಾಜನೇ ಯವನಾಧೀಶನು ಹೇಳುವುದೆಂದರೆ— ನೀನು ಆಳಿಕೊಂಡು ಬಂದಿರುವ ಈ ಸಮಸ್ತ ಸಂಪತ್ತನ್ನು ನನಗೊಪ್ಪಿಸಿ ಶರಣುಹೋಗಬೇಕು. ಇಲ್ಲವಾದರೆ ಬಲಾತ್ಕಾರದಿಂದ ಪಡೆದುಕೊಂಡೇನು. ಇದಕ್ಕೂ ತಪ್ಪಿದರೆ........

ಪುರು: ಮಂತ್ರಿ! ಸಾಕುಮಾಡು. ಎಲವೋ ರಾಜದೂತ! ಈ ಪುರುರಾಜನನ್ನು ಏನೆಂದು ತಿಳಿದುಕೊಂಡಿರುವರು ನಿಮ್ಮ ಬಾದಶಹರು? ಹೆಣ್ಣೊಬ್ಬಳ ಮೋಹಕ್ಕೆ ಮರುಳಾದ ನಿಮ್ಮ ಬಾದಶಹರಿಗೆ ಮಣಿಯುವ ಕಿರೀಟವಲ್ಲೆಂದು ತಿಳಿಸು.

ಅಲೆ: ಏಕಿಷ್ಟು ಕೋಪಾವೇಶ? ನಮ್ಮ ಬಾದಶಹರಿಂದ ನಿಮಗುಂಟಾದ ನಷ್ಟವೇನು?



ಪುಸ್ತಕಜ್ಞಾನಕ್ಕಿಂತ ಸತ್ಯದ ಜೀವನವೇ ಮೇಲು,

ನಾವು ಸತ್ಯ ಮತ್ತು ಅಹಿಂಸೆಯ ಭಕ್ತರಾಗಿದ್ದರೆ, ನಮ್ಮ ಸಮಸ್ಯೆಗಳನ್ನು ಬಗೆಹರಿಸುವ ಜ್ಞಾನವನ್ನು ದೇವರು ನಮಗೆ ಕೊಟ್ಟೇ ಕೊಡುವನು.

ನನ್ನ ಧರ್ಮವು ಕೇವಲ ಸತ್ಯ ಮತ್ತು ಅಹಿಂಸೆಯ ಮೇಲೆ ಆಧರಿಸಿದೆ. ಸತ್ಯವೇ ನನ್ನ ದೇವರು. ಅಹಿಂಸೆಯು, ಆತನನ್ನು ದೊರಕಿಸಿಕೊಳ್ಳುವ ಸಾಧನ.

ನನ್ನ ದೇಶಭಕ್ತಿಯು, ಶಾಶ್ವತ ಸ್ವಾತಂತ್ರ್ಯ ಮತ್ತು ಶಾಂತಿಯ ನಾಡಿಗೆ ಕೈಕೊಂಡ ನನ್ನ ಪಯಣದಲ್ಲೊಂದು ನಿಲ್ದಾಣ. ನನಗೆ ಧರ್ಮವಿಲ್ಲದ ರಾಜಕೀಯವಿಲ್ಲ. ಧರ್ಮವಿಹೀನ ರಾಜಕೀಯಗಳು ಮರಣದ ಜೋಗ; ಏಕೆಂದರೆ, ಅವು ಆತ್ಮವನ್ನು ಕೊಲ್ಲುತ್ತವೆ.

ಮಹಾತ್ಮಾಜಿ.

ಪುರು: ನಷ್ಟವೆ? ಭಾರತಾಂಬೆಯ ಮಡಿಲಲ್ಲಿ ಹುಟ್ಟಿ ಬೆಳೆದ ಬಾಲಕೇಯರನ್ನು ಅನ್ಯಾಯವಾಗಿ, ನಿಷ್ಕಾರಣವಾಗಿ ಹಿಂಸಿಸುತ್ತಿರುವ ನಿಮ್ಮ ಬಾದಶಹರು ನೀತಿವಂತರೇನು?

ಅಲೆ: ಬಲಾತ್ಕಾರದಿಂದ ನಿಮ್ಮನ್ನೆದುರಿಸುವ ಎದೆಗಾರಿಕೆ ನಮ್ಮ ಬಾದಶಹರಲ್ಲಿದೆ.

ಪುರು: ಶರಬಹುದು. ಅಂತೆಯೇ ಬಾದಶಹರ ಕತ್ತನ್ನು ಕತ್ತರಿಸುವ ಕಠಾರಿಯೂ ನಮ್ಮಲ್ಲಿದೆ.

ಅಲೆ: ರಾಜ! ಇಂತಹ ಮಾತುಗಳು ನಮ್ಮ ಬಾದಶಹರ ಮುಂದೆ ನುಡಿಯುತ್ತಿದ್ದರೆ ಆಗಲೇ....

ಪುರು: ಎಲವೋ ದೂತ! ನುಡಿಯುತ್ತಿಲ್ಲವೆ? ಮತ್ತಾರ ಮುಂದೆ ನುಡಿಯುತ್ತಿರುವೆನು. ದೂತನ ಮುಂದೆಯೇ? ದೂತನ ವೇಷದಲ್ಲಿದ್ದ ಅಲೆಕ್ಸಾಂಡರನ ಮುಂದೆಯೇ? ನಿಜ ಹೇಳು. ಯಾರಲ್ಲಿ ಕಪಟ?

ಅಲೆ: ಭಲೆ! ನಿನ್ನ ಬುದ್ಧಿವಂತಿಕೆಗೆ ಮೆಚ್ಚಿದೆನು. ಹೌದು ನಾನೇ ಅಲೆಕ್ಸಾಂಡರ. ಎಲ್ಲಿ ನಿಮ್ಮ ಸೇನಾನಾಯಕರು; ಬಂಧಿಸಲಿ ಈ ಅಲೆಕ್ಸಾಂಡರನನ್ನು (ಎದೆ ಬಡಿಯುವನು).

ಪುರು: ಅಲೆಕ್ಸಾಂಡರ! ನಾವಂಥವರಲ್ಲ. ನಮ್ಮ ಶಕ್ತಿಪರೀಕ್ಷೆಯು ಯುದ್ಧಭೂಮಿಯಲ್ಲಿ ನಡೆಯಲಿ. ಆಗಲೂ ಇಂತಹ ಕಪಟಗಳನ್ನು ತೋರಲಾರಿರಷ್ಟೆ?

ಮಂತ್ರಿ: ರಾಜ! ಕೈಗೆ ಸಿಕ್ಕಿದ ರಿಪುವನ್ನು ಬಿಡುವುದು ಸಮ್ಮತವೆ?

ಪುರು: ಮಂತ್ರಿಗಳೇ ಈತನು ರಾಜನಾಗಿ ಬಂದಿಲ್ಲ. ದೂತನಾಗಿ ಬಂದಿರುವನು. ಕ್ಷತ್ರಿಯ ಧರ್ಮಕ್ಕೆ ವಿರೋಧವಾಗಿ ನಡೆಯಲಾಗದು. ಈತನು ಸುರಕ್ಷಿತವಾಗಿ ನಮ್ಮ ರಾಜ್ಯದ ಗಡಿಯನ್ನು ದಾಟಲಿ.

ಅಲೆ: ಭಲೆ, ಭೇಷ್; ಎಂದೂ ಯಾರಿಗೂ ಮಣಿಯದ ಈ ಶಿರವು ನಿನಗೆ ಮಣಿಯುವುದು. ಬರುತ್ತೇನೆ, ಪ್ರಣಾಮ (ಹೋಗುವನು).

ಪುರು: ಸೇನಾನಾಯಕರೇ ಏನನ್ನುವಿರಿ?

ಸೇನಾ: ಪ್ರಭುಗಳ ಚಿತ್ತ. ನಮ್ಮಲ್ಲಿ ಸಾಕಷ್ಟು ಜನಬಲ, ಧನಬಲವಿದೆ. ಹಾವಂಜಬೇಕಾದ್ದಿಲ್ಲ.

ಸಮರ: ಅಪ್ಪಾ! ಸೇನಾಧಿಪತಿಗಳೆಂದಂತೆ ಅಂಜಬೇಕಾಗಿಲ್ಲ. ಅಲೆಕ್ಸಾಂಡರನು ಭುಜಬಲದವನೆಂದು ಗುರುತಿಸಬಹುದು. ಆದರೂ ಗಣ್ಯವಲ್ಲ. (ಆಗ ದೂತನೊಬ್ಬನು ಬಂದು "ಪ್ರಭುಗಳ ಭೇಟಿಗಾಗಿ ಹೆಂಗಸೊಬ್ಬಳು ಕಾದಿರುವಳು" ಎಂದು ಹೋಗಲು ರಾಜನನ್ನುಳಿದು ಇತರರು ಹೋಗುವರು. ರೋಕ್ಸಾ ಪ್ರವೇಶಿಸಿ) ಮಹಾರಾಜರಿಗೆ ಜಯವಾಗಲಿ (ಕೈಜೋಡಿಸುವಳು).

ಪುರು: ಯಾರಮ್ಮ ನೀನು? ನನ್ನಿಂದಾಗಬೇಕಾದ ಸಹಾಯವೇನು?

ರೋಕ್ಸಾ: ನಾನು ಪರರಾಷ್ಟ್ರದವಳು. ಇಂದು ಶುಭದಿನ. ರಕ್ಷಾಯಂತ್ರವನ್ನು ಕಟ್ಟಿ ನಿಮ್ಮ ತಂಗಿಯಾಗಬಯಸುವೆನು.

ಪುರು: ಬಹು ಸಂತೋಷ! ತಂಗಿಯರಿಲ್ಲದ ನನಗೆ ನೀನೇ ತಂಗಿ. ಇಗೋ ಕಟ್ಟು (ಬಲಗೈ ಮುಂದಿರಿಸುವನು. ಕಟ್ಟುವಳು),

ರೋಕ್ಸಾ: ಧನ್ಯೋಸ್ಮಿ

ಪುರು: ತಂಗೀ! ನೀನಿನ್ನು ಆಚಂದ್ರಾರ್ಕ ಪರಿಯಂತ ನನ್ನ ತಂಗಿ. ಬೇಕಾದ್ದನ್ನು ಕೇಳು. ಕೊಡುತ್ತೇನೆ.

ರೋಕ್ಸಾ: ನಿಜಕ್ಕೂ ಕೊಡುವಿರಾದರೆ ನಮ್ಮ ಬಾದಶಹರು ಸಮರಭೂಮಿಯಲ್ಲಿ ಎದುರಾದರೆ ಜೀವದಾನವನ್ನು ಕೊಡುವಿರಾ?

ಪುರು: ....

ರೋಕ್ಸಾ: ಏಕೆ ಮಾತಾಡುವುದಿಲ್ಲ. ಅಂಜಿದಿರೆ?

ಪುರು: ಅಂಜಿಕೆಯಲ್ಲ ತಂಗೀ ಕಾರ್ಯದ ಚಿಂತೆ.

ರೋಕ್ಸಾ: ಬೇಸರಿಸದಿರಿ. ಸಾಧ್ಯವಿಲ್ಲೆಂದರೆ ಕಟ್ಟಿದ ರಕ್ಷೆಯನ್ನು ಬಿಚ್ಚುವೆನು.

ಪುರು: ಛೆ! ತಂಗಿ ಪುರುರಾಜನು ಕೊಟ್ಟ ಭಾಷೆಗೆ ತಪ್ಪುವಂತಹವನಲ್ಲ. ಅಂಜಲಾರೆ; ಉಪಕಾರ ಜೀವನವೇ ನನ್ನದು. ನಿನ್ನ ಮಾತನ್ನು ನಿಜವಾಗಿಯೂ ನಡೆಸುವೆನು.

ರೋಕ್ಸಾ: ಮಹಾರಾಜ ಧನ್ಯಳಾದೆ. ಬರುತ್ತೇನೆ (ಹೋಗುವಳು. ತೆರೆ).

ದೃಶ್ಯ ೩

(ಬಯಲು. ಅಂಭಿರಾಜ, ಮಂಜು, ಸೆಲ್ಯೂಕಸ್, ಎಂಟಿಗೋನಸ್ ನಿಂತಿದ್ದಾರೆ).

ಅಂಭಿ: ಸೆಲ್ಯೂಕಸ್! ಹೇಗೆ ಯುದ್ಧೋತ್ಸಾಹಿಗಳಾಗಿ ಬರುತ್ತಿರುವರು ನಮ್ಮ ಸೈನ್ಯದವರು. ನೋಡು. ಸೈನ್ಯವನ್ನು ಕಂಡಾಗಲೇ ಪುರುರಾಜನು ತಲೆಮರೆಸಿಕೊಳ್ಳುವನೋ ಏನೋ.

ಮಂಜು: ಅಪ್ಪಾ! ಯುದ್ಧ ಮಾಡುವುದು ನಾವೋ ಅವರೋ.

ಅಂಭಿ: ಲೆ! ಮಂಕು ಮಗನೆ! ಹಾಳಾಗಿ ಮಾತಾಡದಿರು. ಬಿಸಿಯೇರಿ ನೆತ್ತಿಗಟ್ಟಿ ಹೋಗಿದೆ. ಯುವರಾಜನಂತೆ ಜೆಪ್ಪು.

ಮಂಜು: ಅಪ್ಪಾ! ತಲೆಕೆಟ್ಟಿದ್ದು ನನಗಲ್ಲ ನಿನಗೆ. ಯುದ್ಧವೆಂದರೆ ಜೀವಬಿಟ್ಟು ದಿಕ್ಕುಪಾಲಾಗುವ ನಪುಂಸಕ.

ಅಂಭಿ: ರೆ! ಮಂಜೂ ಸ್ವಲ್ಪ ಅಂಜು ರಾಯರ ಕುದುರೆ ಕತ್ತೆಯಾಗಬೇಡ. ಅದೋ ನಮ್ಮ ಬಾದಶಹ ಬಂದೆಬಿಟ್ಟರು (ಎಲ್ಲರೂ "ಬಾದಶಹರಿಗೆ ಜಯವಾಗಲಿ' ಎನ್ನಲು ಅಲೆಕ್ಸಾಂಡರನು ಪ್ರವೇಶಿಸುತ್ತಾ "ಯವನಾನಕ್ಕೆ ಜಯವಾಗಲಿ'' ಎನ್ನುವನು).

ಅಲೆ: ಅಂಭಿರಾಜರೆ! ನಾನು ಪುರುರಾಜನನ್ನು ನೋಡಿದೆ. ಎಂತಹ ಸಾಹಸಿ ತುಂಬಿದ ಕೀರ್ತಿ ಅವನಂತಹ ಗುಣಮೂರ್ತಿಯನ್ನು ನಾನೆಲ್ಲೂ ಕಂಡಿಲ್ಲ.

ಅಂಭಿ: ಬಾದಶಹರೆ! ಅವೆಲ್ಲಾ ಕಪಟ. ಅವೆಲ್ಲಾ ಈ ತಕ್ಷಶಿಲೆಯನ್ನಾಳುವ ಅಂಭಿರಾಜನ ಮುಂದೆ ಸಾಗದು.

ಅಲೆ: ರಾಜರೆ! ಬಾಯುಲ್ಲಂದಷ್ಟು ಸುಲಭವಲ್ಲ. ಸಭೆಗೆ ಹೋಗಿ ನೋಡಬೇಕು ಎಂತಹವರನ್ನೂ ಮಾಟವಾಗಿಸುವ ಮಾರ್ದನಿ, ಮಾಧುರ್ಯ, ಗಾಂಭೀರ್ಯ, ಚಾತುರ್ಯ. ನನ್ನ ಕಪಟವನ್ನೂ ಗುರುತಿಸಿದನು. ಮುಂದೇನು ಯೋಚನೆ? ಸೈನ್ಯಗಳು ಸಿದ್ಧವಾಗಿವೆಯಷ್ಟೆ?

ಅಂಭಿ: ಹೌದು ಬಾದಶಹರೆ! ಮೇರೆ ಮೀರಿದ ಸೈನ್ಯದವರು ತಮ್ಮ ಆಣತಿಯನ್ನು ಹಾರೈಸುತ್ತಿರುವರು.

ಅಲೆ: (ಗಂಭೀರವಾಗಿ) ಹಾಗಾದರೆ ವಿಳಂಬವೇಕೆ? ಸೆಲ್ಯೂಕಸ್, ಎಂಟಿಗೋನಸ್ ಧಾವಿಸಿರಿ ಹಿಂದುಸ್ಥಾನಕ್ಕೆ. ಅಲ್ಲಿ ಹಾರಲಿ ನಮ್ಮ ಧ್ವಜವು. ಸೈನ್ಯವು ಹಿಂದೂದೇಶವನ್ನು ಮುತ್ತಿಕೊಳ್ಳಲಿ. ಹಿಂದು ಮುಂದೆನದೆ ಹಿಂದೂದೇಶವನ್ನು ವಶಪಡಿಸುವ. ಹಿಂದೂಸ್ಥಾನವೇ ನಮ್ಮ ಗುರಿ (ಎಲ್ಲರೂ) ಹಿಂದೂದೇಶವೇ ನಮ್ಮ ಗುರಿ (ಧಾವಿಸುವರು). (ತೆರೆ).

ದೃಶ್ಯ ೪

(ಯುದ್ಧಭೂಮಿ. ಪುರುರಾಜನು ಸೈನ್ಯದೊಂದಿಗೆ ಪ್ರವೇಶಿಸುತ್ತಾ)

(ಗಂಭೀರವಾಗಿ) ವೀರ ಭಾರತೀಯರೇ ಎಚ್ಚರಿಕೆ. ನಿಮ್ಮ ಸುಖವೇ ನಮ್ಮ ಸುಖ. ದೈವಬಲವು ನಮಗಿದೆ. ಹಿಂದಡಿ ಹಾಕದಿರಿ. ಬೆದರದಿರಿ. ಬಾದಸಹನ ದಬ್ಬಾಳಿಕೆಗೆ, ವಂಚನೆಗೆ ಚದರದಿರಿ, ಮೋಸಹೋಗದಿರಿ. ಗೆದ್ದರೆ ರಾಜ್ಯ. ಸತ್ತರೆ ವೀರಸ್ವರ್ಗ. ಷಂಡರಾಗದಿರಿ. ಭಂಡರಾಗದಿರಿ. ಶತ್ರುಗಳನ್ನು ಕಂಡಂತೆ ತುಂಡರಿಸಿರಿ. ಹಿಂದೂಮಾತೆಗೆ (ಎಲ್ಲರೂ) "ಜಯವಾಗಲಿ'' ಎನ್ನಲು ಇತ್ತಂಡದವರಿಗೂ ಯುದ್ಧನಡೆಯುವುದು. ಪುರುರಾಜನೂ ಅಲೆಕ್ಸಾಂಡರನೂ ಖಡಾಖಾಡಿಯಾಗಿ ಹೊಡೆದಾಡಲು ಬಾದಶಹನು ಬೀಳುವನು. ಪುರುವು ಎತ್ತಿಗ ಕತ್ತಿಯನ್ನು ಕೆಳಗಿರಿಸಿ "ಈತನು ಇರಿದರೆ ಸಾಯುವನು ನಿಶ್ಚಯ. ಆದರೆ ತಂಗಿಗೆ ಕೊಟ್ಟ ಭಾಷೆ ಭಂಗವಾಗದೆ? ಛೆ'' ಎನ್ನಲು ಅಂಭಿರಾಜನು ಹಿಂದಿನಿಂದ ಬಂದು ರಾಜನನ್ನು ಬಂಧಿಸುವನು. ರಾಜನು ಹಿಂತಿರುಗಿ: ಯಾರದು? ಅಂಭಿರಾಜ! ಥೂ ಯುದ್ಧದಲ್ಲಿ ಭಯಪಟ್ಟು ಹೇಡಿಯಂತೆ ಈ ಕೃತ್ಯವನ್ನು ಮಾಡುತ್ತಿರುವೆಯಾ?

ಅಂಭಿ: ನ್ಯಾಯಾನ್ಯಾಯಕ್ಕೆ ಇದೀಗ ಸಮರಭೂಮಿ. ಸಮಯೋಚಿತ ಕಾರ್ಯ ನಮ್ಮದು. ಎಳೆದೊಯ್ಯಿರಿ ಈತನನ್ನು. ಬಾದಶಹರಿಗೆ ಶೈತ್ಯೋಪಚಾರಗಳು ನಡೆಯಲಿ. (ತೆರೆ).

ದೃಶ್ಯ ೫

(ಸಭೆ. ಅಲೆಕ್ಸಾಂಡರನು ಕುಳಿತಿರುವನು. ಬಂಧಿಸಿದ ರಾಜನನ್ನು ತಂದಿರುವರು. ಸಭೆಯಲ್ಲಿ ಪುರುವಿನ ಮಗ ಸಮರನು ಮುಸುಕವಸ್ತ್ರದಿಂದ ಮುಚ್ಚಿಕೊಂಡು ಕಿರುಗತ್ತಿಯನ್ನು ಕೈಯಲ್ಲಿ ಹಿಡಿದು ನಿಂತಿದ್ದಾನೆ).

ಅಲೆ: ಎಲೈ ರಾಜನೆ! ನೀನೀಗ ನಮ್ಮ ಸೆರೆಯಾಳು. ನಿನಗೆ ಜೀವದಾನವನ್ನು ಮಾಡಿರುವೆ. ಇನ್ನೇನನ್ನು ಆಶಿಸುವೆ?

ಪುರು: ಎಲೈ ಅಲೆಕ್ಸಾಂಡರ! ಯಾರಿಗೂ ಎಂದಿಗೂ ಮಣಿಯದ ಶಿರವಿಂದು ಅನ್ಯಾಯದಿಂದ ಸೆರೆಹಿಡಿದು ಬಂದಿಸಿದ ಮಾತ್ರಕ್ಕೆ ಮಣಿಯುವುದೆಂದು ಭಾವಿಸದಿರು.

ಅಲೆ: ಅಂಭಿರಾಜರೆ! ಈತನನ್ನು ಏಕೆ ಬಂಧಿಸಿದಿರಿ? ನಾನು ಹೇಳದೆನೆ?

ಅಂಭಿ: ಬಾದಶಹರೆ! ರಿಪುವು ಸೆರೆಸಿಕ್ಕಿದಾಗ ದಂಡಿಸುವುದೇ ವಿನಹ ಬಿಡುವುದು ಸಮ್ಮತತವಲ್ಲ.

ಪುರು: ಅಂಭಿರಾಜನೇ ನಿನ್ನ ಎದೆಗಾರಿಕೆಗೆ ಧಿಕ್ಕಾರ. ಸಭೆಯ ನ್ಯಾಯವನ್ನು ತಿಳಿಯದ ನೀನೊಬ್ಬ ರಾಜನೆ? ನಿನ್ನಂತಹ ಹೇಡಿಗಳಿಂದಲೇ ಭಾರತವು ಹೀನಮಟ್ಟಕ್ಕಿಳಿದಿದೆ. ಹಿಂದೂಮಾತೆಯ ಮಡಿಲಲ್ಲಿ ಬೆಳೆದ ನೀನು ಭಾರತಕ್ಕೆ ಮುತ್ತುವ ಸೈನ್ಯವನ್ನು ಎದುರಿಸದೆ ಪರರಾಷ್ಟ್ರೀಯನೊಬ್ಬನ ಸಹಾಯದಿಂದ ಹಿಂದೂಮಾತೆಗೆ ದ್ರೋಹವನ್ನು ಬಗೆದ ನಿನಗೆ ಲಜ್ಜೆಯಾದರೂ ಆಗದೆ? ನನ್ನನ್ನು ಯಾವ ಆಸೆಯಿಂದ ಬಂಧಿಸಿದೆಯೋ ಅಂತೆಯೇ ನಾಡು. ನಿನ್ನ ಬಾದಶಹರಿಗೆ ಸ್ವಧರ್ಮ ದ್ರೋಹ ಕೃತ್ಯವು ಸಮ್ಮತವಾದರೆ ಮನ ಬಂದಂತೆ ಮಾಡಬಹುದು.

ಅಲೆ: ಅಂಭಿರಾಜರೆ! ದುಡುಕಿ ಮಾತಾಡದಿರಿ. ಬಂಧನವನ್ನು ಬಿಡಿಸಿರಿ. (ಬಂಧನ ಬಿಡಿಸಲು ಬಾದಶಹನು ಪರ್ವತನ ಮುಸುಕು ತೆಗೆದು) ರಾಜಪುತ್ರ ಯಾರು ನೀನು? ಪುರುರಾಜರ ಪುತ್ರನಷ್ಟೆ? ಸಿಹ. ಬಂಧಿಸಿದ ಕಂಬೆಯು ಆಪತ್ಕಾಲದಲ್ಲಿ ರಕ್ಷಣೆಗೋಸುಗ ಕಿರುಗತ್ತಿ ಸಹಿತ ಬಂದೆಯಾ? ಭೇಷ್!

ಪುರು: ಕುಮಾರಿ! ಏಕೆ ಬಂದೆ? ನಿನಗೀ ಮೋಸವಿದ್ಯೆಯನ್ನು ಯಾರು ಕಲಿಸಿದರು? ನನ್ನ ಕೀರ್ತಿಗೆ ಹಾನಿ ತರುವೆಯಾ? ತಪ್ಪಿ ನಡೆದುದಕ್ಕಾಗಿ ಬಾದಶಹನೊಡನೆ ಕ್ಷಮಾಯಾಚಿಸು. ಹ್ಞ. (ತಲೆ ಬಾಗಿಸಿ ಕ್ಷಮಾಯಾಚಿಸಲು)

ಅಲೆ: ಅಂಭಿರಾಜರೆ! ನೋಡಿದಿರಾ! ಪುರುರಾಜರ ಗುಣವನ್ನು. ಗುಣಕ್ಕೆ ಮತ್ಸರವಿಲ್ಲ. ನಿಮ್ಮ ದುರ್ಭಾವನೆಯನ್ನು ತಳೆದು ರಾಜರೊಡನೆ ಸಂಧಿಯಾಗಿರಿ. (ಅಂಭಿರಾಜನು ಪುರುರಾಜನನ್ನು ಆಲಿಂಗಿಸುವನು).

ಅಂಭಿ: ಪುರುರಾಜ! ಕ್ಷಮಿಸು. ನಾನಿನ್ನು ಎಂದೆಂದೂ ದೇಶದ್ರೋಹಿಯಾಗಲಾರೆನು. ನಿನ್ನ ಸಹಾಯವು ಸದಾ ನನಗಿರಲಿ.

ಅಲೆ: ಮಹಾರಾಜ! ಅಂಭಿರಾಜರು ದುರ್ಬಲರು. ನಿನ್ನ ಸಖ್ಯದಿಂದ ಧೈರ್ಯವಂತರಾದರು. ನಿನ್ನ ಈ ರಾಜ್ಯ ನಿನ್ನದೇ ಆಗಿದೆ. ನಿನ್ನ ಗುಣವಂತೂ ಆದರ್ಶಪ್ರಾಯವಾಗಿದೆ. ನಾವೀರ್ವರೂ ಗೆಳೆಯರಾಗೋಣ. ನಾವಿನ್ನು ನಮ್ಮ ರಾಷ್ಟ್ರಕ್ಕೆ ಹಿಂತೆರಳುವೆನು. (ಆಲಿಂಗಿಸುವನು). (ತೆರೆ).

ದೃಶ್ಯ ೬

(ಪುರುರಾಜನೂ ಮಂತ್ರಿಯೂ ಪ್ರವೇಶಿಸುತ್ತಾ—ಬಯಲು)

ರಾಜ: ಮಂತ್ರಿವರ್ಯ! ಅಲೆಕ್ಸಾಂಡರನು ಅತ್ಯಂತ ಸಾಹಸಿ ನಿಜವಷ್ಟೆ?

ಮಂತ್ರಿ: ಮಹಾರಾಜ! ರಣಭೂಮಿಯಲ್ಲಿ ಬಿದ್ದ ಅಲೆಕ್ಸಾಂಡರನನ್ನು ನೀವೇಕೆ ಘಾತಿಸದೆ ಬಿಟ್ಟಿರಿ? ದಯೆದೋರಿದಿರೇಕೆ?

ರಾಜ: ಕೊಟ್ಟ ಭಾಷೆಯನ್ನು ಸಫಲಿಸುವುದಕ್ಕಾಗಿ ನಿರಾಯುಧನನ್ನು ಹೊಡೆಯುವುದು ಧರ್ಮವಲ್ಲ. (ಆಗ ರೋಕ್ಸಾ ಪ್ರವೇಶಿಸಿ ಎರಗಿ)

ರೋಕ್ಸಾ: ಸಹೋದರ ಧನ್ಯಳಾದೆ. ನಿಮ್ಮಂತಹ ಗುಣವಂತ ಅಣ್ಣನನ್ನು ಪಡೆದ ನಾನೇ ಧನ್ಯಳು.

ಪುರು: ಇಲ್ಲ ತಂಗಿ. ನಿನ್ನ ವಾತ್ಸಲ್ಯದಿಂದ ನನಗೆ ಜಯವೇ ಸರಿ. ನೀನೇಕೆ ಬಂದೆ? ಬೇಗನೆ ಹೋಗು. ನಿಮ್ಮ ಅಳಿದುಳಿದ ಸೈನ್ಯದವರೊಂದಿಗೆ ಬಾದಶಹರು ಹಿಂತೆರಳಿರುವರು. ನಿನ್ನನ್ನು ಕಾಣಲು ತವಕಿಸ ಹತ್ತಿರಬಹುದು.

ರೋಕ್ಸಾ: ಉಪಕಾರ ಸ್ಮರಣೆಯು ಚಿರವಾಗಿದೆ ಋಣಿಯಾಗಿರುವೆನು. ಬರುತ್ತೇನೆ (ಹೋಗುವಳು). ಪುರು: ಮಂತ್ರಿಗಳೇ ಆ ಬಾದಶಹನು ಇವಳ ರೂಪಕ್ಕೆ ಮಾರುಹೋಗಿದ್ದಾನೆ. ಆ ಹಿಂದೂ ದೇಶದ್ರೋಹಿ ಅಂಭಿರಾಜನ ಮಾತಿಗೆ ಮರುಳಾಗಿ ದಂಡೆತ್ತಿ ಬಂದನು. ಹೇಗೂ ಸಂಕಟದಿಂದ ಪಾರಾದೆವು. ಯುದ್ಧದಲ್ಲಿ ಅಳಿದುಳಿದು ಗಾಯಹೊಂದಿದ ಭಾರತೀಯರಿಗೆ ತಕ್ಕ ಶೈತ್ಯೋಪಚಾರಗಳು ನಡೆಯಲಿ. ಜನತಾ ಸೇವೆಯೇ ಜನಾರ್ಧನ ಸೇವೆ. ನಡೆಯಿರಿ (ಹೋಗುವರು). (ತೆರೆ).

ದೃಶ್ಯ ೭

(ಪಟ್ಟಣ, ಬಾದಶಹನು ಅಸ್ವಸ್ಥದಿಂದ ಮಲಗಿರುವನು. ಸೆಲ್ಯೂಕಸ್. ಎಂಟಿಗೋನಸ್ ಉಪಚಾರ ನಡೆಸುತಿದ್ದಾರೆ).

ಅಲೆ: (ನಡುಗುವ ಧ್ವನಿ) ಹಾ! ಪ್ರಿಯತಮೆ ನಿನ್ನನ್ನು ಎಂದು ಕಾಣಲಿ? ನಿನ್ನ ಸುಖವನ್ನೆಂತು ಪಡೆಯಲಿ? ರೋಕ್ಸಾ, ರೋಕ್ಸಾ, ಬಂದೆಯಾ? ಸೆಲ್ಯೂಕಸ್ ಗುರೂಜಿ ಬಂದರೆ?

ಸೆಲ್ಯೂಕಸ್: ಬಾದಶಹರೇ ಮನಸ್ಸಿಗೆ ಹೆಚ್ಚು ನೋವುಂಟಾಗಿದೆ. ನಿಶ್ಚಿಂತೆಯಿಂದ ಮಲಗಿರಿ. ಸದ್ಯದಲ್ಲೆ ಗುರುಗಳು ಬರುವರು.

ಅಲೆ: ಅಯ್ಯೊ ಸಹಿಸಲಾರೆ. ಪ್ರಿಯತಮೆ ರೋಕ್ಸಾ. ನಿನ್ನ ಮುಖವನ್ನೊಮ್ಮೆ ಕಾಣಬಾರದೆ? ಬರಲಾರೆಯಾ? (ರೋಕ್ಸಾ ಪ್ರವೇಶಿಸಿ ದುಃಖದಿಂದ) ಹಾ, ಪ್ರಿಯತಮಾ! ಇದೇನು ಪ್ರಮಾದ? ಏನಾಯ್ತು? ಪುರುರಾಜನಿಂದ ಈ ದುರವಸ್ಥೆ ಬಂದಿರಬಹುದೆ?

ಅಲೆ: ಅಲ್ಲ. ರೋಕ್ಸಾ! ಧರ್ಮಿಷ್ಠ ರಾಜನಿಂದ ಯಾವ ಬಾಧೆಯೂ ಉಂಟಾಗಲಿಲ್ಲ. ಹಠಾತ್ತಾಗಿ ಉದರವೇದನೆಯ ದೆಸೆಯಿಂದ ಸಹಿಸಲಾರೆ. ಅಯ್ಯೊ! ಅಬ್ಬಾ, ರೋಕ್ಸಾ! ಹೋಗು, ಸೈನ್ಯದವರಿಗೆಲ್ಲಾ ಹೇಳು. ನನಗಂತೂ ಬದುಕುವ ಆಸೆ ಇಲ್ಲ. ನನ್ನನ್ನೇ ನಂಬಿದ ನೀನೂ, ಸೈನ್ಯದವರೆಲ್ಲಾ ಕೆಟ್ಟಿರಿ. ಗುರೂಜಿ ಬಂದರೊ?

ರೋಕ್ಸಾ: ಈಗತಾನೆ ಬರುವರು. ಪ್ರಿಯತಮಾ, ಯಾವ ತಾಪವಿಲ್ಲದೆ ಹಾಯಾಗಿ ವಿಶ್ರಮಿಸಿಕೊಳ್ಳಿ. ನಾವೀಗ ಮಧ್ಯಮಾರ್ಗದ "ಬಿಬಿಲೋನ್" ಪಟ್ಟಣದಲ್ಲಿದ್ದೇವೆ

ಅಲೆ: ರೋಕ್ಸಾ, ರೋ-ಕ್ಸಾ, ಗುರೂಜಿ, ಗು-ರೂ-ಜಿ, ನಿಮಗೆ ಶುಭವಾಗಲಿ. ಬಿಬಿ-ಲೊನ್, ಬಿ-ಬಿ-ಲೊ-ನ್. (ಮೃತನಾಗಲು ರೋಕ್ಸಾ ಬೀಳುವಳು. ಗುರುವು ಪ್ರವೇಶಿಸಿ) ಅಲೆಕ್ಸಾಂಡರ ವೀರಕೇಸರಿಯಾ! ನೀನು ಪುಣ್ಯಜೀವಿ! ಮಾಡಬೇಕಾದ ಕರ್ಮವನ್ನು ಸಾಧಿಸಿವೆ. ನಿನ್ನ ಈ ಕಥೆಯು ಆದರ್ಶವಾಗಿಯೂ, ಜನಾದರಣೀಯವೂ ಆಗಿದೆ. ಉತ್ತಮ ಲೋಕದಲ್ಲಿ ಸ್ವಚ್ಛಂದವಾಗಿ ವಿಹರಿಸು. (ತೆರೆ ಬೀಳುವುದು).

— ಸಂಪೂರ್ಣ —

ವಿನೋದಿ ಅಮೆರಿಕ ★

ಈ ಪುಟದಲ್ಲಿ ಅಮೆರಿಕದ ಪತ್ರಿಕೆಗಳಿಂದ ಆಯ್ದ ನಗೆಹನಿಗಳನ್ನು ಕೊಡಲಾಗಿದೆ. ಈ ನಗೆಹನಿಗಳು ಆ ದೇಶದ ಜನರ ಚತುರುಕ್ತಿಗಳ ಮಾದರಿಯನ್ನು ನಮ್ಮ ಮುಂದಿಡುತ್ತಿವೆ; ಹಾಗೆಯೇ ಅವರ ಅಂತರ್ಯದ ಕುರಿತೂ ಒಂದು ಕಲ್ಪನೆಯನ್ನು ಕೊಡುತ್ತಿವೆ.

ಒಬ್ಬಳು ಹೆಂಗಸು, ತನ್ನ ಗೆಳತಿಯೊಡನೆ ಆಕ್ಷೇಪಿಸಿದಳು: "ಅವಳಿಗೆ ಹೇಳಬೇಡವೆಂದು ನಾನು ನಿನಗೆ ಹೇಳಿದ್ದ ಗುಟ್ಟನ್ನು ನೀನು ಅವಳಿಗೆ ಹೇಳಿದ್ದಿಯೆಂದು ಅವಳು ನನಗೆ ಹೇಳಿದಳು."

ಗೆಳತಿಯು ನೊಂದ ಧ್ವನಿಯಲ್ಲಿ ಉದ್ಗಾರ ತೆಗೆದಳು: "ನಾನು ಅವಳಿಗೆ ಹೇಳಿದೆನೆಂದು ಅವಳು ನಿನಗೆ ಹೇಳಬಾರದೆಂದು ನಾನವಳಿಗೆ ಹೇಳಿದ್ದೆ!"

ಮೊದಲಿನವಳು ನಿಟ್ಟುಸಿರಿಡುತ್ತ ಸಮಜಾಯಿಸಿದಳು: "ಇರಲಿ. ಅವಳು ನನಗೆ ಹೇಳಿದಳೆಂದು ನಾನು ನಿನಗೆ ಹೇಳಿದೆನೆಂದು ನೀನು ಅವಳಿಗೆ ಹೇಳಬೇಡ."

—o—

ಮದುವೆಯಾದ ಹೆಂಗಸರಿಬ್ಬರು ಒಂದು ಪುಸ್ತಕದ ಅಂಗಡಿಯಲ್ಲಿ ಪ್ರದರ್ಶಿಸಿದ ಪುಸ್ತಕಗಳನ್ನು ನೋಡಲು ನಿಂತರು. ಒಬ್ಬಳು ಹೇಳಿದಳು: "ಇಲ್ಲಿ, 'ನಿನ್ನ ಗಂಡನಿಗೆ ತೀವ್ರ ಯಾತನೆ ಕೊಡುವುದು ಹೇಗೆ?' ಎಂಬ ಪುಸ್ತಕವಿದೆ!"

ಇನ್ನೊಬ್ಬಳು ಹೇಳಿದಳು: "ನನಗದು ಬೇಕಿಲ್ಲ. ನನ್ನೊಡನೆ ನನ್ನದೇ ಪದ್ಧತಿಯೊಂದು ಇದೆ!"

ಹೊಲಿವುಡ್ಡಿನ ಮಾಯರ್ಕ್ ರೋಮನೊಫ್ ಹೊಟೇಲಿನಲ್ಲಿ ಅಪರಿಚಿತನೊಬ್ಬನು, ಫ್ರೆಡ್ ಎಸ್ಟೇರನನ್ನು ಕೇಳಿದನು: "ಹೋ—ಹೋ—ಚಾರ್ಲಿಸ್ಮಿತಾ! ಏನಾಯಿತಪ್ಪ ನಿನಗೆ? ಎಷ್ಟು ದಟ್ಟಪುಷ್ಟನಾಗಿದ್ದೆ! ಈಗ ಎಲುಬು ಬಿಟ್ಟಿರುವೆಯಲ್ಲ! ಮೊದಲಿಗಿಂತ ಗಿಡ್ಡ ಸಹ ಆಗಿರುವಿ!"

ಫ್ರೆಡ್ಡನು ಸೌಜನ್ಯದಿಂದ ನಸುನಕ್ಕನು. "ನೀನು ತಪ್ಪಿರುವಿ. ನಾನು ಚಾರ್ಲಿ ಸ್ಮಿತ್ ಅಲ್ಲ—ಫ್ರೆಡ್ ಎಸ್ಟೇರ್."

"ಏನಯ್ಯ?—ಅಪರಿಚಿತನು ಅಣಕಿಸಿದನು: "ನಿನ್ನ ಹೆಸರನ್ನು ಕೂಡ ಬದಲಾಯಿಸಿರುವಿಯಾ?"

—o—

ಮೆಟ್ರೋ ಗೋಲ್ಡ್‌ವಿನ್ ಮೇಯರ್ ಸಂಸ್ಥೆಯ ಪ್ರಕಟಣಾ ಶಾಖೆಯ ಮುಖ್ಯಸ್ಥನಾಗಿದ್ದ ಡೀಟ್ಜನು ಪ್ರತಿದಿನ ಬೆಳಿಗ್ಗೆ ಬಹಳ ತಡಮಾಡಿ ಬರುತಿದ್ದುದನ್ನು, ಅವನ ಯಜಮಾನ ಲೂವಿಸ್ ಬಿ. ಮೇಯರನು ಕಂಡು, ಒಮ್ಮೆ ದೊಡ್ಡ ಸ್ವರದಲ್ಲಿ ಆಕ್ಷೇಪಿಸಿದನು.

ಡೀಟ್ಜನು ಉತ್ತರವಿತ್ತನು: "ಆದರೆ, ನಾನು ಪ್ರತಿದಿನ ಸಾಯಂಕಾಲ ಬಹಳ ಬೇಗ ಹೊರಡುತ್ತಿರುವೆನೆಂಬುದನ್ನು ನೀನು ಮರೆತಂತೆ ತೋರುತ್ತದೆ!"

—o—

ಹರ್ಷನಟ ಜೇರ್ ಡ್ಯೂರೆಂಟನು ಹೇಳುತ್ತಾನೆ: "ನನ್ನ ಹೆಂಡತಿಗೆ, ತನ್ನ ವಾಕ್‌ಶಕ್ತಿಯಲ್ಲಿ ಒಂದು ಸಣ್ಣ ತಡೆಯಿದೆ. ಅವಳು ಆಗಾಗ್ಗೆ ಉಸಿರು ತೆಗೆದುಕೊಳ್ಳಲು ತಡೆಯುತ್ತಾಳೆ."

—o—

ಅರುವತ್ತೇಳು ವರ್ಷ ಪ್ರಾಯದ ಹರ್ಷನಟ ವಿಕ್ಟರ್ ಮೂರನು, ಇಪ್ಪತ್ತೆರಡು ವರ್ಷದ ಓರ್ವ ಹುಡುಗಿಯನ್ನು ಮದುವೆಯಾದಾಗ ಹೊಲಿವುಡ್ಡಿನವರು ಚಕಿತರಾದರು.

"ಅದರಲ್ಲಿ ತಪ್ಪೇನು?"—ಬಡ್ಡಿ ಡೆಸಿಲ್ವಾ ಹೇಳಿದಳು: "ಅವಳಿಗೆ ೧೦೦ ವರ್ಷವಾಗುವಾಗ, ಅವನಿಗೆ ಬರೀ ೧೪೫ ಆಗುವುದು."

—o—

ಬುಡಾಪೆಸ್ಟಿನ ಒಂದು ಶಾಲೆಯಲ್ಲಿ, ಉಪಾಧ್ಯಾಯನು ಕೇಳಿದ ಒಂದು ಪ್ರಶ್ನೆಗೆ ಓರ್ವ ವಿದ್ಯಾರ್ಥಿಯು ಹೀಗೆಂದು ಉತ್ತರವಿತ್ತನು: "ನಮ್ಮ ಬೆಕ್ಕಿಗೆ ಹತ್ತು ಮರಿಗಳಿವೆ: ಎಲ್ಲವೂ ಒಳ್ಳೆಯ ಸಮತಾವಾದಿಗಳಾಗಿವೆ."

ಈ ಉತ್ತರದಿಂದ ಉಪಾಧ್ಯಾಯನಿಗೆ ಸಂತೋಷವಾಯಿತು.

ಶಾಲಾ ಇನ್ಸ್‌ಪೆಕ್ಟರನು ಬಂದಾಗ, ಉಪಾಧ್ಯಾಯನು ಅದೇ ವಿದ್ಯಾರ್ಥಿಯನ್ನು ಭರವಸೆಯಿಂದ ಕರೆದು, ಆ ಮೊದಲಿನ ಪ್ರಶ್ನೆಯನ್ನೇ ಕೇಳಿದನು. ವಿದ್ಯಾರ್ಥಿಯು ಈ ಬಾರಿ ಹೀಗೆಂದು ಉತ್ತರಕೊಟ್ಟನು: "ನಮ್ಮ

ಬೆಕ್ಕಿಗೆ ಹತ್ತು ಮರಿಗಳಿವೆ; ಎಲ್ಲವೂ ಒಳ್ಳೆಯ ಪ್ರಜಾಪ್ರಭುತ್ವವಾದಿಗಳಾಗಿವೆ."

ಉಪಾಧ್ಯಾಯನು ದಿಗಿಲುಗೊಂಡು ಕೇಳಿದನು: "ಏಕೆ? ಹತ್ತು ದಿನಗಳ ಮೊದಲು ನೀನು ಹೇಳಿದುದು ಹಾಗಲ್ಲ: ಆಗ ನಿನ್ನ ಬೆಕ್ಕಿನ ಮರಿಗಳೆಲ್ಲವೂ ಸಮತಾವಾದಿಗಳಾಗಿದ್ದುವು!"

"ಅಹುದು!"— ವಿದ್ಯಾರ್ಥಿಯು ಉತ್ತರವಿತ್ತನು: "ಆದರೆ, ಈಗ ಅವುಗಳ ಕಣ್ಣುಗಳು ತೆರೆದಿವೆ."

—o—

ಕೊಕ್ಕುಮೂಗಿನ ಹಾಸ್ಯನಟ ಜಿಮ್ಮಿ ಡ್ಯೂರೆಂಟ್, ಒಂದು ಕುದುರೆ ಜೂಜಿನಲ್ಲಿ ಒಂದು ಕುದುರೆಯ ಮೇಲೆ ಹಣ ಒಡ್ಡಿದನು. ಆ ಕುದುರೆಯು ಕೆಲವೇ ಇಂಚುಗಳಿಂದ ಸೋತಿತು.

"ಆ ಕುದುರೆಗೆ ಅವಶ್ಯವಾಗಿತ್ತು— ನನ್ನ ಸವಾರಿ!"— ಎಂದನೊಬ್ಬ ಮಾಜಿ ಸವಾರ.

"ಅಲ್ಲ— ನನ್ನ ಮೂಗು." ಡ್ಯೂರೆಂಟ್ ತಿದ್ದಿದನು.

—o—

ವಿನೋದಿ ಬರ್ಗ್ಸ್‌ಬೀಯರನಿಗೆ ಒಂದು ಗಂಡುಮಗು ಹುಟ್ಟಿದ ವಾರ್ತೆ ತಲುಪುತ್ತಲೇ, ಅವನು ತನ್ನ ಪತ್ನಿಗೆ ಈ ಕೆಳಗಿನಂತೆ ತಂತಿಬಿಟ್ಟನು:

"ಪ್ರಿಯೇ, ನಿನ್ನೆ ರಾತ್ರಿ ನಿನ್ನ ಕೋಣೆಯೊಳಗೆ ಒಬ್ಬ ಹುಡುಗನಿದ್ದನೆಂದು ನಾನು ಕೇಳುತ್ತೇನೆ."

—o—

ವಿಕ್ಟರ್ ಮೆಚ್ಯೂರನು ಹಾಲಿವುಡ್ಡಿನ ಒಂದು ಪ್ರತ್ಯೇಕ ಗಾಲ್ಫ್ ಕ್ಲಬ್ಬಿನ ಸದಸ್ಯತನಕ್ಕೆ ಅರಿಕೆಮಾಡಿಕೊಂಡನು. ಅವನ ಅರಿಕೆಯು ನಿರಾಕರಿಸಲ್ಪಟ್ಟಿತು. "ನಾವು ನಟರನ್ನು ಸೇರಿಸಿಕೊಳ್ಳುವುದಿಲ್ಲ"— ಒಬ್ಬ ಅಧಿಕಾರಿಯು ವಿವರಿಸಿದನು;

ಮೆಚ್ಯೂರನು ಹೇಳಿದನಂತೆ; "ಆದರೆ, ನಾನೊಬ್ಬ ನಟನಲ್ಲ! ಅದನ್ನು ರುಜುಗೊಳಿಸಲು ನಾನು ಅಭಿನಯಿಸಿದ ಮೂವತ್ತು ಚಿತ್ರಗಳಿವೆ!"

—o—

ಅನುಭವಿ ನಟಿ: "ನಿನಗೆ ತಿಳಿಯಿತೆ? ನಾನು ನಿನ್ನನ್ನು ಮದುವೆಯಾಗಲು ಇಚ್ಛಿಸುತ್ತೇನೆ. ನೀನು, ನನ್ನ ಮಕ್ಕಳ ತಾಯಿಯಾಗಬೇಕೆಂದೂ ಇಚ್ಛಿಸುತ್ತೇನೆ."

ನವೀನ ನಟಿ: ಆದರೆ, ನಿನಗೆಷ್ಟು ಮಕ್ಕಳಿವೆ?

—o—

ಗರ್ಟ್ರೂಡ್ ಲಾರೆನ್ಸಳು, ಅಮೇರಿಕದ ಓರ್ವ ಗೆಳತಿಗೆ ಹೇಳಿದಳು: "ನೀನು ಲಂಡನಿಗೆ ಹೋದರೆ, ನೀನು ನೋಡಲೇ ಬೇಕಾದ ಒಂದು ಸ್ಥಳವಿದೆ."

"ಆ ಸ್ಥಳ ಯಾವುದು?"— ಗೆಳತಿಯು ಕೇಳಿದಳು.

"ಪೆರಿಸ್"— ಕುಮಾರಿ ಲಾರೆನ್ಸಳು ಉತ್ತರವಿತ್ತಳು,

—o—

ಪದೇ ಪದೇ ವಿವಾಹವಿಚ್ಛೇದನ ಮಾಡಿಕೊಂಡ ಹೆತ್ತವರ ಇಬ್ಬರು ಹುಡುಗರು ತೀವ್ರ ವಾದದಲ್ಲಿ ತೊಡಗಿದ್ದರು.

ಒಬ್ಬನು ಹೇಳಿದನು: "ನನ್ನ ತಂದೆಯು ನಿನ್ನ ತಂದೆಯನ್ನು ಸೋಲಿಸಬಲ್ಲನು."

"ಏನು, ವಂಚನೆಮಾಡಿಕೊಳ್ಳುವಿಯಾ?"— ಇನ್ನೊಬ್ಬನು ಒದರಿದನು: "ನಿನ್ನ ತಂದೆಯೇ ನನ್ನ ತಂದೆ."

—o—

ಅನೇಕ ಸಲ ಮದುವೆಯಾಗಿದ್ದ ಹಾಲಿವುಡ್ಡಿನ ಒಬ್ಬ ನಟನನ್ನು, ನೆರೆವಿನ ಕನ್ಯೆಯೊಬ್ಬಳು ಒಮ್ಮೆ ಎದುರಾದಾಗ, ಹೇಳಿದಳು: "ನಿನಗೆ ನೆನಪಿಲ್ಲವೆ? ನಾನು ನಿನ್ನನ್ನು ವಿವಾಹಮಾಡಿಕೊಳ್ಳಬೇಕೆಂದು, ಹತ್ತು ವರ್ಷಗಳ ಹಿಂದೆ ನೀನೊಮ್ಮೆ ಕೇಳಿದ್ದೆ."

"ಹ್ಞಾ, ಅಹುದೇ?" ಅವನು ಆಕಳಿಸುತ್ತ ಹೇಳಿದನು. "ನೀನು ಹಾಗೇ ಮಾಡಿದೆಯಾ?"

—o—

ಸೈಬೇರಿಯಾದವನೊಬ್ಬ: "ಹೇಗಿದೆ, ನಿನ್ನ ಸ್ಥಿತಿ?"

ಇನ್ನೊಬ್ಬ: "ಬಹಳ ಉತ್ತಮ. ಸ್ವಾಭಾವಿಕವಾಗಿ ನಿನ್ನೆಗಿಂತ ಕೆಟ್ಟದ್ದು; ಆದರೆ, ನಾಳೆಗಿಂತ ಎಷ್ಟೋ ಉತ್ತಮ."

ಪ್ರಸಿದ್ಧ ನಟ ಮತ್ತು ನಟಿಯರಾದ ದಂಪತಿಗಳು ಚರ್ಚೆ ಮಾಡುತಿದ್ದರು. ಕೊನೆಗೆ, ಪತಿಯು, ಹೇಳಿದನು: "ನಾನು ಈ ವಿಷಯ ಆಲೋಚಿಸಿದೆ— ನೀನು ಹೇಳುವುದನ್ನು ಒಪ್ಪಿಕೊಳ್ಳಲು ನಿರ್ಧರಿಸಿರುತ್ತೇನೆ."

ಪತ್ನಿ ಅಡ್ಡ ಬಂದಳು: "ಈಗ ಏನೂ ಪ್ರಯೋಜನವಿಲ್ಲ. ನಾನು ನನ್ನ ಮನಸ್ಸನ್ನು ಬದಲಾಯಿಸಿದ್ದೇನೆ."

—o—

ವಿನೋದಿ ಜೋನ್ ಮಾರ್ಕ್ವಿಸನು, ಪುಸ್ತಕಗಳ ಒಂದು ಅಂಗಡಿಯಲ್ಲಿ, ತನ್ನ ಪುಸ್ತಕದ ಪ್ರತಿಗಳ ಮೇಲೆ ಸಹಿಮಾಡುತಿದ್ದನು. ವಯಸ್ಸಾದ ಮಹಿಳೆಯೋರ್ವಳು, ತನ್ನ ಪ್ರತಿಯನ್ನು ಕೃತಜ್ಞತೆಯಿಂದ ತೆಗೆದುಕೊಳ್ಳುತ್ತ ಚಾಪಲ್ಯದಿಂದ ಮೆಲ್ಲನೆ ಹೇಳಿದಳು: "ಈ ಪುಸ್ತಕವು ಪ್ರಥಮಾವೃತ್ತಿಯಾಗಿದ್ದರೆ ಹೆಚ್ಚು ಮೆಚ್ಚುತ್ತಿದ್ದೆ!"

ಮಾರ್ಕ್ವಿಸನು ಥಟ್ಟನೆ ಹೇಳಿದನು: "ನಿಜವಾಗಿ ಅಮ್ಮಾ! ನನ್ನ ಪುಸ್ತಕಗಳ ಮಟ್ಟಿಗೆ, ಎರಡನೇ ಆವೃತ್ತಿಯುವು ಮೊದಲನೆಯ ಆವೃತ್ತಿಗಿಂತಲೂ ಅಧಿಕ ಅಪರೂಪವಾಗಿವೆ."

—o

ವಿನೋದಿ ಒಲಿವರ್ ಹೆಫ್ರೋರ್ಡನು ಒಂದು ಸಾಯಂಕಾಲ, ಕಿಕ್ಕಿರಿದು ತುಂಬಿದ ರೈಲುಬಂಡಿಯೊಳಗೆ, ತನ್ನ ತೊಡೆಗಳ ಮೇಲೆ ತನ್ನ ಚಿಕ್ಕ ಭ್ರಾತ್ರೀಯನನ್ನು ಕುಳ್ಳಿರಿಸಿಕೊಂಡು ಪ್ರಯಾಣಮಾಡುತಿದ್ದನು. ಹೊಂಬಣ್ಣದ ಕೇಶರಾಶಿಯ ಸುಂದರಿ ಯುವತಿಯೋರ್ವಳು ಒಂದು ಕಡೆ ಆ ಗಾಡಿಯನ್ನೆ ಏರಿ, ಅವನು ಕುಳಿತ ಎದುರಲ್ಲೇ, ಮೇಲಿಂದ ಜೋಲಾಡುವ ಚರ್ಮದ ಪಟ್ಟಿಗೆ ಕೈಕೊಟ್ಟು ನಿಂತಳು (ಕುಳಿತುಕೊಳ್ಳಲು ಸ್ಥಳವಿಲ್ಲದಷ್ಟು ಜನ ತುಂಬಿತ್ತು.)

ಹೆಫೊರ್ಡನು ಅವಳನ್ನು ನಗುಮೊಗದಿಂದ ದಿಟ್ಟಿಸುತ್ತ, ತನ್ನ ಭ್ರಾತ್ರೀಯನನ್ನು ಮೊಣಕೈಯಿಂದ ಮೆತ್ತಗೆ ಕುಟ್ಟುತ್ತ, ಹೇಳಿದನು: "ಮಗೂ, ನೀನು ಎದ್ದು, ನಿನ್ನ ಜಾಗವನ್ನು ಆ ಮಹಿಳೆಗೇಕೆ ಕೊಡುವುದಿಲ್ಲ?"

—o

ಟೆಲಿಫೋನ್ ಹುಡುಗಿಯು, ಬರ್ಮಿಂಗ್ಹಮ್ ನಗರದಲ್ಲಿರುವವರೊಡನೆ ಮಾತಾಡಲು ಐದು ಡಾಲರ್ ಕೊಡಬೇಕಾಗುವುದೆಂದು ತಿಳಿಸಿದಳು.

ಅವನು ಕೇಳಿದನು: "ಬರೇ ಆಲಿಸುವುದಕ್ಕೇ ಒಂದು ದರವಿಲ್ಲವೇ? ನಾನು ನನ್ನ ಹೆಂಡತಿಗೆ ಒಂದು ಕರೆಕೊಡಬೇಕಾಗಿದೆ."

--o —

"ನಿನ್ನೆ ರಾತ್ರೆ ನನ್ನ ಹೆಂಡತಿಯು ಒಂದು ವಿನೋದದ ಕನಸು ಕಂಡಳು."

"ಏನೆಂದು?"

"ಅವಳು ತಾನೋರ್ವ ಮಿಲಿಯಾಧೀಶನನ್ನು ಮದುವೆಯಾಗಿದ್ದೆನೆಂದು ಕಂಡಳಂತೆ."

"ನೀನು ಅದೃಷ್ಟಶಾಲಿಯಪ್ಪ! ನನ್ನ ಹೆಂಡತಿಯು, ಅದನ್ನು ಹಗಲು ಹೊತ್ತಿನಲ್ಲೇ ಭಾವಿಸುತ್ತಾಳೆ."

—o—

ಅಮೇರಿಕದಲ್ಲಿ ಈ ಒಂದು ತಮಾಷೆಯ ವಿಷಯವೂ ಪ್ರಕಟವಾಗಿದೆ. ರಷ್ಯದವನೊಬ್ಬನು, ಸ್ಟಲಿನರಿಗೆ ಅವರ ಜನ್ಮದಿನದಂದು ನವಿರಾದ ಬಟ್ಟೆಯ ಒಂದು ಸುರುಳಿಯನ್ನು ಉಡುಗೊರೆಯಾಗಿ ಕೊಟ್ಟನು. ಸ್ಟಲಿನನ ದರ್ಜಿಯು, ಅದನ್ನು ಬಿಡಿಸಿ, ಅಳತೆಮಾಡಿ ನೋಡಿ, ಒಂದು ಚಲ್ಲಣಕ್ಕೆ ಬೇಕಾಗುವಷ್ಟು ಬಟ್ಟೆ ಇರುವುದಾಗಿ ಹೇಳಿದನು.

ಸ್ಟಲಿನನು, ಆ ಬಟ್ಟೆಯನ್ನು ಮೊಸ್ಕೋ ನಗರದ ಒಬ್ಬ ದರ್ಜಿಗೆ ಕಳುಹಿಸಿದಾಗ, ಆ ದರ್ಜಿಯು, "ಈ ಬಟ್ಟೆಯಿಂದ ಒಂದು ಚಲ್ಲಣ ಒಂದು ಕೋಟು ಮತ್ತು ಒಂದು ನಡುವಂಗಿಯನ್ನು ಮಾಡಬಹುದೆಂದು ಹೇಳಿದನು.

ಸ್ಟಲಿನನು ಅಲ್ಲಿಯೂ ಸಮಾಧಾನಪಡದೆ, ಬಟ್ಟೆಯನ್ನು ಲಂಡನಿನ ಪಡದೆ, ಬಟ್ಟೆಯನ್ನು ಲಂಡನಿನ ಒಬ್ಬ ದರ್ಜಿಗೆ ಕಳುಹಿಸಲು, ಆ ದರ್ಜಿಯು 'ಈ ಬಟ್ಟೆಯಿಂದ ಒಂದು ಕೋಟು, ಒಂದು ನಡುವಂಗಿ ಮತ್ತು ಚಲ್ಲಣಗಳನ್ನು ಹೊಲಿಯಬಹುದು' ಎಂದು ತಿಳಿಸಿದನು.

ಮೂವರು ದರ್ಜಿಗಳ ಮೂರು ಪ್ರಕಾರದ ಅಂದಾಜುಗಳಲ್ಲಿ ಅಷ್ಟೊಂದು ತಾರತಮ್ಯವೇನೆಂದು ಕಾರಣವನ್ನು ಕೇಳಿದಾಗ, ಲಂಡನ್ ದರ್ಜಿ ಹೇಳಿವನಂತೆ: "ಅದನ್ನು ವಿವರಿಸುವುದು ಸುಲಭ. ನೀವು ಮೊಸ್ಕೋ ನಗರದಿಂದ ಎಷ್ಟು ದೂರ ಹೋಗುವಿರೋ ಅಷ್ಟು ಸಣ್ಣದಾಗುವಿರಿ."

—o—

ಜರ್ಮನಿಯ ವಲಯದ ಗಡಿಯಲ್ಲಿ ಒಬ್ಬ ಅಮೆರಿಕದ ಕಾವಲುಗಾರನು, ರಷ್ಯಾ ಆಡಳಿತದಲ್ಲಿರುವ ಕಡೆಯಿಂದ ರಷ್ಯದ ಕಾವಲುಗಾರನು--ಇಬ್ಬರೂ ಪಹರೆಮಾಡುತಿದ್ದರು.

ಅಮೆರಿಕದವನು ತನ್ನ ಗಡಿಯಾರವನ್ನು ನೋಡುತ್ತ ಹೇಳಿದನು: "ನನ್ನ ಸರದಿಯನ್ನು ಇನ್ನೊಬ್ಬ ಸಿಪಾಯಿಯು ವಹಿಸಿಕೊಳ್ಳಲು ಇನ್ನು ಬರೇ ಹದಿನೈದು ನಿಮಿಷಗಳಿವೆ. ದೇವರ ಕೃಪೆ."

ಮಹಾಚುನಾವಣೆಗಳು: ಮತದಾರ ಕ್ಷೇತ್ರಗಳು

ಲೋಕಸಭೆಗೆ ಮತ್ತು ವಿಧಾನ ಸಭೆಗಳಿಗೆ ಚುನಾವಣೆಗಳು, ಬರುವ ಫೆಬ್ರವರಿ ತಿಂಗಳಲ್ಲಿ ಜರಗುವುವು. ಈ ಕೆಳಗೆ, ದಕ್ಷಿಣ ಕನ್ನಡ ಜಿಲ್ಲೆಯ ಮತದಾರ ಕ್ಷೇತ್ರಗಳ ವಿವರ, ಕಳೆದಬಾರಿ ಚುನಾವಣೆಗೆ ನಿಂತು ಮತಪಡೆದ ಸಂಖ್ಯೆಗಳ ವಿವರ—ಇವುಗಳನ್ನು ಕೊಡಲಾಗಿದೆ.

ಮೈಸೂರು ರಾಜ್ಯದ ವಿಸ್ತೀರ್ಣ: 74,122 ಚದರ ಮೈಲುಗಳು, ಮೈಸೂರು ರಾಜ್ಯದ ಜನಸಂಖ್ಯೆ—23,547,081. ಇದರಲ್ಲಿ ಗಂಡಸರು—12,021,248; ಹೆಂಗಸರು—11,525,833. ಮೈಸೂರಿನಿಂದ ಲೋಕಸಭಾ ಸ್ಥಾನಗಳು—26; ವಿಧಾನಸಭಾ ಸ್ಥಾನಗಳು—208.

1957ರಲ್ಲಿ ನಡೆದ ಮಹಾಚುನಾವಣೆಗಳಲ್ಲಿ, ಮೈಸೂರು ರಾಜ್ಯದಿಂದ ಲೋಕಸಭೆಗೆ ಇದ್ದ 26 ಸ್ಥಾನಗಳಲ್ಲಿ, 23 ಸ್ಥಾನಗಳು ಕೊಂಗ್ರೆಸ್ಸಿಗೂ, 1 ಸ್ಥಾನವು ಪ್ರಜಾಸೋಶಲಿಸ್ಟರಿಗೂ, ಎರಡು ಸ್ಥಾನಗಳು ಸ್ವತಂತ್ರರಿಗೂ ದೊರೆತಿದ್ದುವು.

ವಿಧಾನಸಭೆಯ 208 ಸ್ಥಾನಗಳಲ್ಲಿ ಕೊಂಗ್ರೆಸ್ಸಿಗೆ—151, ಪ್ರಜಾಸೋಶಲಿಸ್ಟರಿಗೆ 18 ಮತ್ತು ಸ್ವತಂತ್ರರಿಗೆ 39 ದೊರೆತಿದ್ದುವು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, 1957ರ ಚುನಾವಣೆಗಳಲ್ಲಿ ಪ್ರತಿಸ್ಪರ್ಧಿಸಿದವರು ಮತ್ತು ಅವರಿಗೆ ಬಿದ್ದ ಮತಗಳ ವಿವರ ಈ ಕೆಳಗಿನಂತಿದೆ:

ಲೋಕಸಭಾ ಚುನಾವಣೆ

ಮತದಾರ ಕ್ಷೇತ್ರ ಮತ್ತು ಮತದಾರರ ಸಂಖ್ಯೆ	ಹುರಿಯಾಳುಗಳು ಮತ್ತು ಪಕ್ಷಗಳು	ಬಿದ್ದ ಮತಗಳು	ಬಿದ್ದ ಮತಗಳ ಸೇಕಡಾ
೧. ಮಂಗಳೂರು (4,35,659)	1. ಕೆ.ಆರ್.ಆಚಾರ್ (ಕೊಂ.)	1,43,599	57·37
	2. ಡಾ|ಎಮ್.ಎಸ್.ಎ.ಶರ್ಮ (ಸ್ವ.)	21,213	8·48
	3. ಎ.ಕೃಷ್ಣಶೆಟ್ಟಿ (ಕಮ್ಯೂ.)	85,373	34·15
೨. ಉಡುಪಿ (4,12,748)	1. ಯು. ಶ್ರೀನಿವಾಸ ಮಲ್ಯ (ಕೊಂ.)	1,22 754	56 75
	2. ಡಿ. ಮೋಹನ ರಾವ್ (ಪ್ರ.ಸೋ)	93 451	43.25

ವಿಧಾನಸಭಾ ಚುನಾವಣೆ

ಪುತ್ತೂರು (1,01,044)	1. ಕೆ. ವೆಂಕಟರಮಣ ಗೌಡ (ಕೊಂ)	28,691	31·97
	2. ಐತಪ್ಪ ನಾಯ್ಕ (ಶೆಡ್ಯೂಲ್ಡ್-ಜನಸಂಘ)	10,759	11 98
	3. ಸುಬ್ಬಯ್ಯ ನಾಯ್ಕ (ಶೆಡ್ಯೂಲ್ಡ್-ಕೊಂ.)	29,763	33·16
	4. ಕೆ. ರಾಮ ಭಟ್ಟ (ಜ.ಸ.)	11,684	13·01
	5. ಕೆ. ಸಂಜೀವ ರೈ (ಕಮ್ಯೂ.)	8,881	9 98
ಬೆಳ್ತಂಗಡಿ (56,721)	1. ಡಿ. ರತ್ನವರ್ಮ ಹೆಗ್ಡೆ (ಕೊಂ.)	20,563	69·76
	2. ರಮಾನಾಥ ಶೆಣೈ (ಸ್ವ.)	8,920	30·24
ಪಾಣೆಮಂಗಳೂರು (54,150)	1. ಡಾ|ಕೆ.ನಾಗಪ್ಪ ಆಳ್ವ (ಕೊಂ.)	19,533	58·64
	2. ಎಮ್.ಎಚ್.ಕೃಷ್ಣಪ್ಪ (ಕಮ್ಯೂ.)	13,782	41·36
ಮಂಗಳೂರು-I (60,842)	1. ಪ್ರಭಾಕರ ಘಾಟೆ (ಜ.ಸ.)	1,945	5·83
	2. ಲೊರಾ ಪಾಯಸ್ (ಸ್ವ.)	4,766	14·25
	3. ಎ. ಶಾಂತಾರಾಮ ಪೈ (ಕಮ್ಯೂ.)	10,464	30·97
	4. ಬಿ. ವೈಕುಂಠ ಬಾಳಿಗ (ಕೊಂ.)	16,365	48·94
ಮಂಗಳೂರು-II (59,113)	1. ಗಜಾನನರಾವ್ ಪಂಡಿತ (ಕೊಂ.)	20,332	58.33
	2. ಬಿ. ವಿ. ಕಕ್ಕಿಲ್ಲಾಯ (ಕಮ್ಯೂ.)	14,526	41·6
ಸುರತ್ಕಲ್ (52,903)	1. ಬಿ.ಆರ್.ಕರ್ಕೇರ (ಕೊಂ.)	15,629	52·93
	2. ಎ. ಸಂಜೀವನಾಥ (ಪ್ರ. ಸೋ.)	11,789	43,02
ಕಾಪು (49,701)	1. ಎಫ್. ಎಕ್ಸ್. ಡಿ ಪಿಂಟೋ (ಕೊಂ.)	18761	62·75
	2. ಎಮ್. ನವೀನಚಂದ್ರ (ಪ್ರ.ಸೋ.)	7,170	24·03
ಉಡುಪಿ (44,585)	1. ಪಿ. ವಿ. ಆಚಾರ್ (ಕೊಂ.)	13,291	43.03
	2. ಯು. ಎಸ್. ನಾಯ್ಕ (ಪ್ರ. ಸೋ.)	17,598	56·97

ರಷ್ಯದವನು ಹೇಳಿದನು: "ಕಾಲುಗಂಟೆಯಲ್ಲಿ ನಾನೂ ಬಿಡುಗಡೆಯಾಗುವೆನು. ಸ್ಟೈಲಿನರ ಕೃಪೆ."

ಅಮೆರಿಕನನು ಬೆಚ್ಚಿಬಿದ್ದು ಹೇಳಿದನು: "ಹಾಗೆ ಹೇಳುವುದು ವಿಲಕ್ಷಣವಾಗಿದೆ. ಸ್ಟೈಲಿನನು ಸತ್ತುಹೋದನೆಂದರೆ ಮತ್ತೆ ನೀನು ಏನು ಹೇಳುವಿ?"

ರಷ್ಯದವನು ಉತ್ತರವಿತ್ತನು: "ದೇವರ ಕೃಪೆ."

—o—

ಹಂಗೇರಿಯಲ್ಲಿ, ಓರ್ವ ಪ್ರವಾಸಾಧಿಕಾರಿಯು, ಒಬ್ಬ ಬೇಸಾಯಗಾರನೊಡನೆ, "ಬಟಾಟೆಯ ಉತ್ಪತ್ತಿಯ ಹೊಸ ಯೋಜನೆಯು ಹೇಗೆ ನಡೆಯುತ್ತಿದೆ?" ಎಂದು ಕೇಳಿದನು.


ಬೇಸಾಯಗಾರನು, ತಡವರಿಸದೆ ಕೂಡಲೇ ಉತ್ತರವಿತ್ತನು: "ನಮ್ಮ ಮಹಾ ವೈಭವಯುಕ್ತ ನಾಯಕ ಸ್ಟೈಲಿನರ ಆಶ್ರಯದಲ್ಲಿ ನಮ್ಮ ಬಟಾಟೆಯ ಬೆಳೆಯು ಆಶ್ಚರ್ಯಕರವಾಗಿದೆ. ನಾವು ನಮ್ಮ ಬಟಾಟೆಗಳನ್ನೆಲ್ಲ ರಾಶಿಹಾಕಿದರೆ, ಅವರ (ಸ್ಟೈಲಿನರ) ದೀಶರ ಪಾದಗಳನ್ನು ಮುಟ್ಟುವಷ್ಟು ಎತ್ತರ ಪರ್ವತವಾಗುವುದು!"

"ಆದರೆ, ದೇವರು ಇಲ್ಲವೆಂದು ನನಗೆ ತಿಳಿದೇ ಇದೆ?" ಅಧಿಕಾರಿಯು ಹೇಳಿದನು.

ಬೇಸಾಯಗಾರನು ಉತ್ತರವಿತ್ತನು: "ಬಟಾಟೆಗಳೂ ಇಲ್ಲ."

—L. N. S.

ಬ್ರಹ್ಮಾವರ (50,392)	1. ಜಗಜ್ಜೀವನದಾಸ ಶೆಟ್ಟಿ	(ಕಾಂ) 16,964—61·93
	2. ಶೀನಪ್ಪ ಶೆಟ್ಟಿ (ಪ್ರ. ಸೋ.)	10,429—38·07
ಕುಂದಾಪುರ (55,761)	1. ವಿ. ಶ್ರೀನಿವಾಸ ಶೆಟ್ಟಿ	(ಪ್ರ. ಸೋ.) 16,693—50·66
	2. ಕೆ. ಸೂರ್ಯನಾರಾಯಣ ಅಡಿಗ	(ಕಾಂ.) 16,266—49·34
ಬೈಂದೂರು (65,123)	1. ಯಡ್ತರೆ ಮಂಜಯ್ಯ ಶೆಟ್ಟಿ	(ಕಾಂ.) ಅವಿರೋಧ ಆಯ್ಕೆ.
ಕಾರ್ಕಳ (93,788)	1. ಡಾ| ಕೆ. ಕೆ. ಹೆಗ್ಡೆ	(ಕಾಂ.) 26,696—62·82
	2. ಆರ್. ದೇವರಾಯ ಶೆಣೈ	(ಪ್ರ. ಸೋ.) 15,801—37·18
	3. ಉಳ್ಳಾಲ ಮಂಜಪ್ಪ (ಶೆಡ್ಯೂಲ್ಡ್-ಕಾಂ.)	ಅವಿರೋಧ ಆಯ್ಕೆ.



ಪಂಡಿತ ಜವಾಹರಲಾಲ ನೆಹರುಗಳವರು.

REPUBLIC DAY GREETINGS FROM—



JEWELLERS OF DISTINCTION!

•

CANARA JEWELEERS

ESTD: 1938

HEAD OFFICE:
Ganapathy High School Road,
Mangalore-1, S.K.

BRANCH:
Hampankatta,
Mangalore-1, S. K.

Grams: "PALKEBROS"

Phones: 356 & 40 / 855 Resi. / 356 Branch

Props: P.B.ACHAR & P.S.ACHAR.

Phones: Office: 81 / Resi: 81A & 91

Grams: EXCELSIOR

B. PINTO & COMPANY

TILE MERCHANTS & COMMISSION AGENTS
Post Box No. 118
BOLAR — MANGALORE-1

★

FACTORIES

Oriental Tile Works
Battery Tile Works
Mangalore Tile Company



Pompei Tile Works
Standard Tile Company
J. H. Morgan & Son

BOMBAY OFFICE:

Phones: Office: 41924 / Resi: 42533

Grams: SHIPBRAND

B. PINTO

TILE MERCHANTS
MAZAGAON—BOMBAY-10

Printed at The Prabhat Printers, Ltd., Mangalore and Edited & Published at Prabhat Office, Car St., Mangalore by K.V.Shenoy.